# ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - 560 019
E-mail: rashtrotthana@gmail.com Website: www.rashtrotthana.org

ಜನಶಿಕ್ಷಣ
ಜನಜಾಗೃತಿ
ಜನಸೇವೆ



# ವಾರ್ಷಿಕ ವರದಿ
# 2018-19







# ಪ್ರಕಲ್ಪಗಳು

- ಜಾಗರಣ
- ಶೈಕ್ಷಣಿಕ ಚಟುವಟಿಕೆಗಳು
- ರಾಷ್ಟ್ರೋತ್ಥಾನ ಆರೋಗ್ಯಸೇವಾ ಕೇಂದ್ರ
- ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
- ರಾಷ್ಟ್ರೋತ್ಥಾನ ಬಳಗ
- ಮಂಥನ
- ಉಪನ್ಯಾಸ ಮಾಲೆ
- ಗ್ರಾಮೋತ್ಥಾನ
- ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ (FIRST)
- ರಾಷ್ಟ್ರೋತ್ಥಾನ ಮುದ್ರಣಾಲಯ
- ರಾಷ್ಟ್ರೋತ್ಥಾನ ಸಾಹಿತ್ಯ
- ಸಾಹಿತ್ಯ ಸಿಂಧು ಪ್ರಕಾಶನ
- ಗೀತಭಾರತಿ
- ಉತ್ಥಾನ

# ನಡೆದು ಬಂದ ಹಾದಿ...
# ಬದ್ಧತೆಯ ಹೆಜ್ಜೆಗಳು...

ಜನಜಾಗೃತಿ (ಸಾಂಸ್ಕೃತಿಕ ಜಾಗೃತಿ), ಜನಶಿಕ್ಷಣ (ಸಮೂಹ ಶಿಕ್ಷಣ) ಮತ್ತು ಜನಸೇವೆ (ಸಮಾಜಸೇವೆ) ಎಂಬ ಮಾರ್ಗದರ್ಶಕ ಅಂಶಗಳ ಆಧಾರದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಕಳೆದ 54 ವರ್ಷಗಳಿಂದ ಕಾರ್ಯೋನ್ಮುಖವಾಗಿದೆ. "ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ – ಎಂದು ಕಾಯುತ್ತ ಕೂರದೇ, ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಿ" ಎಂಬ ಆರೆಸ್ಸೆಸ್‌ನ ದಿ। ಯಾದವರಾವ್ ಜೋಶಿ ಅವರ ಹಾರೈಕೆಯಂತೆ, ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು, ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ 'ಚರೈವೇತಿ ಚರೈವೇತಿ' ಎಂಬಂತೆ ದೃಢವಾದ ಹೆಜ್ಜೆಗಳನ್ನಿಡುತ್ತ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ.

ಭಾರತೀಯತೆಯ ಪುನರ್‌ಜಾಗರಣೆಯ 'ಉತ್ಥಾನ' ಮಾಸಪತ್ರಿಕೆಯ ಮೂಲಕ ಶುಭಾರಂಭಗೊಂಡ ಪರಿಷತ್‌ನ ಚಟುವಟಿಕೆ ಇಂದು ರಾಷ್ಟ್ರೀಯ ವಿಚಾರಧಾರೆಯ ಪುಸ್ತಕ ಪ್ರಕಾಶನ; ಸಾಮಾಜಿಕ–ಸಾಂಸ್ಕೃತಿಕ ವಿಕಾಸದ ಗುರಿಹೊತ್ತ ರಾಷ್ಟ್ರೋತ್ಥಾನ ಬಳಗಗಳು; ಸುಸಂಪನ್ನ ದೇಶಭಕ್ತ ಶಿಕ್ಷಿತ ಸಮಾಜ ರೂಪಿಸುವ ಶಿಕ್ಷಣಸಂಸ್ಥೆಗಳು ಹಾಗೂ ಸಂವಿತ್; ಬಡತನದಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ, ಉಚಿತವಾಗಿ ದೇಶದ ಪ್ರತಿಷ್ಠಿತ ಶಿಕ್ಷಣಕ್ಕೆ ತರಬೇತಿ ನೀಡುವ 'ತಪಸ್' ಹಾಗೂ 'ಸಾಧನಾ' ಶೈಕ್ಷಣಿಕ ಯೋಜನೆಗಳು; ಸೇವಾಬಸ್ತಿ (ಸ್ಲಂ, ಕೊಳೆಗೇರಿ) ಗಳ ವಿಕಾಸಕ್ಕಾಗಿ ಶ್ರಮಿಸುವ ವ್ಯಾಸಂಗ/ ಕಂಪ್ಯೂಟರ್/ವೃತ್ತಿತರಬೇತಿ ಕೇಂದ್ರಗಳು; ಅಗತ್ಯ ಫಲಾನುಭವಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ರಕ್ತ ಒದಗಿಸುವ ರಕ್ತನಿಧಿಗಳು; ಗುಣಮಟ್ಟದ ರಕ್ತ ಉತ್ಪತ್ತಿಯಾಗದ ನ್ಯೂನತೆ ತಲಸ್ಸೇಮಿಯಾದಿಂದ ಬಳಲುವ ಮಕ್ಕಳಿಗೆ ಸಂಪೂರ್ಣ ಉಚಿತ ಆರೈಕೆ ನೀಡುವ 'ಸಂರಕ್ಷಾ'; ಆರೋಗ್ಯವಂತ ಸಶಕ್ತ ವ್ಯಕ್ತಿಗಳನ್ನು ರೂಪಿಸುವ ಯೋಗಕೇಂದ್ರಗಳು; ಅವಕಾಶವಂಚಿತ, ಪೋಷಕರಹಿತ ಮಕ್ಕಳ ರಕ್ಷಣೆಗೆ ನಿಂತಿರುವ ನಂದಗೋಕುಲ; ದೇಸೀ ಗೋ–ಸಂತತಿಗಳ ರಕ್ಷಣೆಗೆ ಪಣತೊಟ್ಟ ಗೋಶಾಲೆ; – ಹೀಗೆ ಸೇವೆಯ ಜಗತ್ತನ್ನು life's mission ಆಗಿ ಸ್ವೀಕರಿಸಿರುವ ರಾಷ್ಟ್ರೋತ್ಥಾನ ಪರಿಷತ್ ಇಂದು ಅನೇಕ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರಾಜ್ಯಾದ್ಯಂತ ವ್ಯಾಪಿಸಿದೆ.

ನಮ್ಮ ಕಾರ್ಯಚಟುವಟಿಕೆಯನ್ನು ಗಮನಿಸಿದ ಪೂಜ್ಯ ಶ್ರೀ ವೀರೇಶಾನಂದ ಸ್ವಾಮಿಜೀ ಅವರು, "ರಾಷ್ಟ್ರೋತ್ಥಾನ ಪರಿಷತ್ ಅಂತಾರಾಷ್ಟ್ರೀಯ ಮಟ್ಟದ ಸೇವೆ ಮಾಡುತ್ತಿದೆ" ಎಂದು ಹಾರೈಸಿದ್ದರು. ಹೀಗೆ ನಾಡಿನ ಮಠಾಧೀಶರು, ಖ್ಯಾತಸಾಹಿತಿಗಳು, ಶಿಕ್ಷಣ ತಜ್ಞರು, ಚಿಂತಕರು, ಪತ್ರಕರ್ತರು, ಅಧಿಕಾರಿಗಳು, ಉದ್ಯಮಿಗಳು ನಮ್ಮನ್ನು ಹರಸಿದ್ದಾರೆ. 'ನ್ಯಗ್ರೋಧಬೀಜಂ ಕೆಲಂ ಸಿಡಿದುಂ ಪೆರ್ಮರವಾಗದೇ' ಎಂದ ಹಾಗೆ ಮೊದಲಿಗೆ ಕಂಡೂ ಕಾಣದ ಹಾಗೆ ಇರುವ ಬೀಜದಿಂದ ಮೊಳೆತು ಹರಡುವ ಆಲದ ಮರ ಎಷ್ಟು ವಿಶಾಲವಾಗಿ ಬಿಡುತ್ತದೆಂದರೆ ಅದೇ ಒಂದು ಪ್ರಪಂಚ ಎನಿಸಿಬಿಡುವಂತಾಗಿದೆ. ಇದಕ್ಕೆ ನೈಜ ಉದಾಹರಣೆ ರಾಷ್ಟ್ರೋತ್ಥಾನ ಪರಿಷತ್ – ಎಂದು ಹರಸಿದವರೂ ಹಲವರು.

ರಾಷ್ಟ್ರೋತ್ಥಾನ ಪರಿಷತ್ 2018–19ರ ಆರ್ಥಿಕ ವರ್ಷದಲ್ಲಿ ನಡೆಸಿದ ಪ್ರಮುಖ ಚಟುವಟಿಕೆಗಳ ಒಂದು ಹಿನ್ನೋಟ ಇಲ್ಲಿದೆ. ಮ್ಯಾಗ್ನೆಟ್ (magnet) ಗಾತ್ರದಲ್ಲಿ ನಾಲ್ಕೋ ಆರೋ ಅಂಗುಲ ಅಷ್ಟೆ ಇರಬಹುದು. ಆದರೆ ಅದರ magnetic field ನಾಲ್ಕೈದು ಅಡಿಗಳಷ್ಟು ಇರುತ್ತದೆ. ಅಂತೆಯೇ ಸಮಾಜದಲ್ಲಿನ ಅನೇಕ ಸವಾಲುಗಳ ನಡುವೆ ನಾವೊಂದು ಕಿರು ಹಣತೆಯನ್ನು ಬೆಳಗಿಸುವ ಪ್ರಯತ್ನ ಮಾಡಿದ್ದೇವೆ ಎಂಬುದು ನಮ್ಮ ನಂಬಿಕೆ.

ಬನ್ನಿ... ಜೊತೆಗೂಡಿ ಸಾಗೋಣ...

**ನಾ. ದಿನೇಶ್ ಹೆಗ್ಡೆ**
ಪ್ರಧಾನ ಕಾರ್ಯದರ್ಶಿ

# ವಿಷಯ ಸೂಚಿ


3 ಜಾಗರಣ
11 ನಂದಗೋಕುಲ
13 ಆರೋಗ್ಯಸೇವಾ ಕೇಂದ್ರ
21 ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
25 ಗೋಶಾಲೆ
29 ಶೈಕ್ಷಣಿಕ ಸಂಸ್ಥೆಗಳು
48 ತಪಸ್ ಮತ್ತು ಸಾಧನಾ
54 ಸಂವಿತ್
56 ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್
60 ರಾಷ್ಟ್ರೋತ್ಥಾನ ಬಳಗ
62 ಕೇಂದ್ರ ಕಾರ್ಯಾಲಯ
63 ರಾಷ್ಟ್ರೋತ್ಥಾನ ವಾರ್ತಾ




# ಜಾಗರಣ

ಸೇವಾಬಸ್ತಿಗಳಲ್ಲಿ ನಾಲ್ಕು ಆಯಾಮಗಳಲ್ಲಿ ಚಟುವಟಿಕೆ.



ಒಂದೆಡೆ ಜಗದ್ವಿಖ್ಯಾತಿ ಗಳಿಸುತ್ತಿರುವ ಬೆಂಗಳೂರು ಇನ್ನೊಂದೆಡೆ ಮೂಲಭೂತ ಸೌಕರ್ಯಗಳ ಕೊರತೆಗಳಿಂದ ವಂಚಿತರಾಗಿರುವ 800ಕ್ಕೂ ಹೆಚ್ಚು ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿವೆ.

ಇಂತಹ ಸೇವಾಬಸ್ತಿಗಳಲ್ಲಿ ಆರ್ಥಿಕ ಸಾಮಾಜಿಕ ಕಾರಣಗಳಿಂದಾಗಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯುವ ಉದ್ದೇಶದಿಂದ ಜಾಗರಣ ಪ್ರಕಲ್ಪವು 1989ರಲ್ಲಿ ಪ್ರಾರಂಭವಾಯಿತು. 1989ರಿಂದ 2007ರವರೆಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ನಡೆಸಿ ಸೇವಾಬಸ್ತಿಯ ಮಕ್ಕಳನ್ನು ಮುಖ್ಯವಾಹಿನಿಯಾದ ಶಾಲೆಗೆ ಸೇರಿಸುವ ಪ್ರಯತ್ನದಲ್ಲಿ ಯಶಕಂಡ ನಂತರ, ಇಂದು ಸೇವಾಬಸ್ತಿಯ ಸಂಪೂರ್ಣ ವಿಕಾಸಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ ಜಾಗರಣ ಪ್ರಕಲ್ಪದ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಶಿಕ್ಷಣ, ಆರೋಗ್ಯ, ಸ್ವಾವಲಂಬನೆ ಮತ್ತು ಸಂಸ್ಕಾರ – ಈ ನಾಲ್ಕು ಆಯಾಮಗಳಲ್ಲಿ 'ಜಾಗರಣ' ಪ್ರಕಲ್ಪವು ಕಳೆದ ಮೂರು ದಶಕಗಳಿಂದ ಬೆಂಗಳೂರಿನ ಸೇವಾಬಸ್ತಿಗಳಲ್ಲಿ ವಿವಿಧ ಸೇವಾಚಟುವಟಿಕೆಗಳನ್ನು ನಡೆಸುತ್ತಿದೆ. ಈ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು, ನೂರಾರು ಮಹಿಳೆಯರು ಹಾಗೂ ಯುವಕ–ಯುವತಿಯರು ಸ್ವಾವಲಂಬೀ ಜೀವನ ರೂಪಿಸಿಕೊಂಡಿದ್ದಾರೆ. ಸೇವಾಬಸ್ತಿಯು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸೇರಿದಂತೆ ಎಲ್ಲ ಮುಖಗಳಲ್ಲಿಯೂ ಪ್ರಗತಿ ಸಾಧಿಸುತ್ತಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಒಟ್ಟು 210 ಸೇವಾಬಸ್ತಿಗಳಲ್ಲಿ 685 ಚಟುವಟಿಕೆಗಳು ನಡೆಯುತ್ತಿವೆ.

| | |
|---|---|
| 1. ವ್ಯಾಸಂಗ ಕೇಂದ್ರಗಳು | 240 |
| 2. ಶಿಶುಮಂದಿರ | 3 |
| 3. ಬಾಲಗೋಕುಲ | 200 |
| 4. ಅನೌಪಚಾರಿಕ ಶಿಕ್ಷಣ ಕೇಂದ್ರ | 1 |
| 5. ಜೋಳಿಗೆ ಪುಸ್ತಕಾಲಯ | 200 |
| 6. ಗ್ರಂಥಾಲಯ | 1 |
| 7. ಮಿನಿ ಬಾಲಭವನ | 2 |
| 8. ಸರ್ಕಾರಿ ಶಾಲೆಗಳಲ್ಲಿ ಸಂಸ್ಕಾರ ಕೇಂದ್ರ | 8 |
| 9. ದೇವಸ್ಥಾನ ಕೇಂದ್ರಿತ ಚಟುವಟಿಕೆ | 1 |
| 10. ಕಂಪ್ಯೂಟರ್ ತರಬೇತಿ | 7 |
| 11. ಹೊಲಿಗೆ ತರಬೇತಿ | 2 |
| 12. ಉಚಿತ ಚಿಕಿತ್ಸಾಲಯ | 2 |
| 13. ಸ್ವಸಹಾಯ ಸಂಘಗಳು | 18 |

# ಶಿಕ್ಷಣ

## ಅ) ವ್ಯಾಸಂಗ ಕೇಂದ್ರಗಳು

ಸೇವಾಬಸ್ತಿಯಲ್ಲಿ (ಸ್ಲಂ, ಕೊಳಚೆಗೇರಿ) ವಾಸಿಸುತ್ತಿರುವ ಮಕ್ಕಳನ್ನು ಶಿಕ್ಷಣ ಕ್ಷೇತ್ರದಲ್ಲಿ ಇತರ ಮಕ್ಕಳಿಗೆ ಸರಿಸಮಾನವಾಗಿ ನಿಲ್ಲಿಸುವ ಹಾಗೂ ಸೇವಾಬಸ್ತಿಯಲ್ಲಿನ ಯುವತಿಯರ ಜೀವನಮಟ್ಟವನ್ನು ಸುಧಾರಿಸುವ ಪ್ರಯತ್ನ ಈ 'ವ್ಯಾಸಂಗ ಕೇಂದ್ರ'ಗಳ ಮೂಲಕ ನಡೆಯುತ್ತಿದೆ.

ಸೇವಾಬಸ್ತಿಯಲ್ಲಿರುವ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವಂತಾಗಲು ಹಾಗೂ ಶಿಕ್ಷಣದ ಜೊತೆಜೊತೆಗೆ ಸಂಸ್ಕಾರ, ಸಾಮಾಜಿಕ ಜ್ಞಾನ–ಹೊಣೆಗಾರಿಕೆಯ ಅರಿವನ್ನು ಮೂಡಿಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳು (Tuition Center) ಕಾರ್ಯನಿರ್ವಹಿಸುತ್ತಿವೆ. 2018–19ರ ಶೈಕ್ಷಣಿಕ ವರ್ಷದಲ್ಲಿ 210 ಸೇವಾಬಸ್ತಿಗಳಲ್ಲಿ 240 ವ್ಯಾಸಂಗ ಕೇಂದ್ರಗಳನ್ನು ನಡೆಸಲಾಯಿತು.

ಎಲ್ಲಿ ನಡೆಯುತ್ತವೆ? : ವ್ಯಾಸಂಗ ಕೇಂದ್ರಗಳು ಹೆಚ್ಚಿನ ಕಡೆಗಳಲ್ಲಿ ಸೇವಾಬಸ್ತಿಯ ಸ್ಥಾನೀಯ ಶಿಕ್ಷಕಿಯರ (ಜಾಗರಣ ಪ್ರಕಲ್ಪದ ಶಿಕ್ಷಕಿಯರ) ಮನೆಗಳಲ್ಲಿ ಅಥವಾ ಅಂಗನವಾಡಿಗಳಲ್ಲಿ ನಡೆಯುತ್ತಿವೆ. ಕೆಂಪಾಪುರ ಅಗ್ರಹಾರ, ವಿ.ವಿ. ಗಿರಿ ಕಾಲೊನಿ, ಬೈಯ್ಯಪ್ಪನಹಳ್ಳಿ, ನ್ಯೂ ಗುರಪ್ಪನ ಪಾಳ್ಯ ಮತ್ತು ದೊಮ್ಮಲೂರು ಸೇವಾಬಸ್ತಿಗಳಲ್ಲಿ ಸ್ವಂತ ಕಟ್ಟಡವಿದೆ. ಇಲ್ಲಿ ವ್ಯಾಸಂಗ ಕೇಂದ್ರದ ಜೊತೆಗೆ ಚಿಕಿತ್ಸಾಲಯ, ಹೊಲಿಗೆ ಹಾಗೂ ಕಂಪ್ಯೂಟರ್ ತರಬೇತಿ, ಶಿಶುಮಂದಿರ ಇತ್ಯಾದಿ ಸೇವಾ ಚಟುವಟಿಕೆಗಳನ್ನು (ಬೆಳಗ್ಗೆಯಿಂದ ಸಂಜೆಯವರೆಗೆ) ನಡೆಸಲಾಗುತ್ತಿದೆ. ಸ್ಥಾನೀಯ ಜನರಿಗೆ 'ಸೇವಾಧಾಮ' ಎಂದು ಪರಿಚಿತವಾಗಿರುವ ಇವುಗಳಿಂದ ದಿನನಿತ್ಯ 350ಕ್ಕೂ ಹೆಚ್ಚು ಜನರು ಸೇವೆಯನ್ನು ಪಡೆಯುತ್ತಿದ್ದಾರೆ.

ಸೇವಾಬಸ್ತಿಯ ಶಿಕ್ಷಿತ ಯುವತಿಯರೇ ಶಿಕ್ಷಕಿಯರು!: ವ್ಯಾಸಂಗ ಕೇಂದ್ರಗಳಿಗೆ ಅಗತ್ಯ ಶಿಕ್ಷಕಿಯರನ್ನು ಸೇವಾಬಸ್ತಿಯ ವಿದ್ಯಾವಂತ ಹೆಣ್ಣುಮಕ್ಕಳನ್ನು ಜೋಡಿಸಿಕೊಳ್ಳಬೇಕು, ತನ್ಮೂಲಕ ಅಲ್ಲಿನ ಮಹಿಳೆಯರ ಬದುಕಿಗೆ ಆಸರೆಯಾಗಬೇಕು ಎಂಬ ಆಶಯದಿಂದ ಸೇವಾಬಸ್ತಿಯಲ್ಲಿರುವ 10 ಮತ್ತು ಮೇಲ್ಪಟ್ಟ ತರಗತಿಗಳಲ್ಲಿ ಓದುತ್ತಿರುವ ಮತ್ತು ಓದುಮುಗಿಸಿರುವ ಹೆಣ್ಣುಮಕ್ಕಳನ್ನು ಶಿಕ್ಷಕಿಯರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಸೇವಾಬಸ್ತಿಯಲ್ಲಿಯೇ ವಾಸವಾಗಿರುವ ಹೆಣ್ಣುಮಕ್ಕಳನ್ನು ಗುರುತಿಸಿ, ಸೂಕ್ತ ತರಬೇತಿ ನೀಡಿ 'ಶಿಕ್ಷಕಿ'ಯರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇವರಿಗೆ ಪ್ರತೀ ತಿಂಗಳು ತರಬೇತಿ ನೀಡಲಾಗುತ್ತದೆ.

ಈ ಶಿಕ್ಷಕಿಯರು ತಮ್ಮ ಮನೆಯ ಸುತ್ತಮುತ್ತ ಶಾಲೆಗೆ ಹೋಗುತ್ತಿರುವ 15ಕ್ಕೂ ಅಧಿಕ ಮಕ್ಕಳನ್ನು ಜೋಡಿಸಿಕೊಂಡು, ಆ ಮಕ್ಕಳಿಗೆ ಪ್ರತಿದಿನ 2½ ಗಂಟೆಗಳ ಕಾಲ ಕೋಚಿಂಗ್ (Tuition) ನೀಡುತ್ತಾರೆ. ನಿಃಶುಲ್ಕವಾಗಿ ಕೋಚಿಂಗ್ ಪಡೆಯುವ ಇಲ್ಲಿನ ವಿದ್ಯಾರ್ಥಿಗಳು ಶಾಲೆಯಲ್ಲಿ ಹಾಗೂ ಅಧ್ಯಯನದ ಸಮಯದಲ್ಲಿ ಎದುರಾದ ಗೊಂದಲಗಳಿಗೆ ಇಲ್ಲಿನ ಶಿಕ್ಷಕಿಯರಿಂದ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಪ್ರತೀ ವರ್ಷ ಸೇವಾಬಸ್ತಿಯ 5000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಉಚಿತ ವ್ಯಾಸಂಗ ಕೇಂದ್ರಗಳ ಲಾಭ ಪಡೆಯುತ್ತಿದ್ದಾರೆ.

ವ್ಯಕ್ತಿತ್ವ ವಿಕಾಸಕ್ಕೆ ಒತ್ತು : ಕೇಂದ್ರದ ಮಕ್ಕಳಿಗೆ ಅಕ್ಕ/ಅಮ್ಮನಂತೆ ಇರುವ ಈ 'ಶಿಕ್ಷಕಿ' ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಜೊತೆಜೊತೆಗೆ ಅವರಲ್ಲಿ ಒಳ್ಳೆಯ ಮೌಲ್ಯಗಳನ್ನು ಬೆಳೆಸುವ ಪ್ರಯತ್ನ ನಡೆಸುತ್ತಿದ್ದಾರೆ.

ಯೋಜನಾಬದ್ಧ ಶಿಕ್ಷಣಕ್ರಮ: ವ್ಯಾಸಂಗ ಕೇಂದ್ರವು ವ್ಯವಸ್ಥಿತ ರೂಪದಲ್ಲಿ ನಡೆಯಲು ಮೇ ತಿಂಗಳಿನಲ್ಲಿ ವಾರ್ಷಿಕ ಯೋಜನೆಯನ್ನು ತಯಾರಿಸಲಾಗುತ್ತದೆ. ಈ ಯೋಜನೆಯಲ್ಲಿ ಪಾಠ್ಯ ಚಟುವಟಿಕೆಗಳು, ಸಂಸ್ಕಾರ, ಶಿಕ್ಷಣ ಹಾಗೂ ಉತ್ಸವಗಳ ಆಚರಣೆ ಸೇರಿದಂತೆ ಅನೇಕ ವಿಷಯಗಳು ಅಡಕವಾಗಿರುತ್ತವೆ. ಇವುಗಳನ್ನು ಕಾರ್ಯಗತಗೊಳಿಸಲು ಹಾಗೂ ಶಿಕ್ಷಕಿಯರ ಸಾಮರ್ಥ್ಯವರ್ಧನೆಗಾಗಿ ನಿರಂತರ ಮಾಸಿಕ ಪ್ರಶಿಕ್ಷಣ ವರ್ಗಗಳನ್ನು ನಡೆಸಲಾಗುತ್ತಿದೆ.

**ಸಂವಹನಕ್ಕಾಗಿ ಮೇಲ್ವಿಚಾರಕರು:** ವ್ಯಾಸಂಗಕೇಂದ್ರದ ಶಿಕ್ಷಕಿಯರ ಜೊತೆ ನಿರಂತರ ಸಂಪರ್ಕ ಏರ್ಪಡಿಸುವ ಉದ್ದೇಶದಿಂದ ಮೇಲ್ವಿಚಾರಕರನ್ನು ನೇಮಿಸಲಾಗುತ್ತದೆ. ಹಲವು ವರ್ಷಗಳ ಕಾಲ ವ್ಯಾಸಂಗಕೇಂದ್ರದ ಶಿಕ್ಷಕಿಯರಾಗಿ ಕಾರ್ಯನಿರ್ವಹಿಸಿದ ಆಯ್ದ ಅನುಭವಿ ಶಿಕ್ಷಕಿಯರನ್ನು ಮೇಲ್ವಿಚಾರಕರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇಂತಹ ಮೇಲ್ವಿಚಾರಕರು 6 ರಿಂದ 8 ಸೇವಾಬಸ್ತಿಗಳ ಸೇವಾ ಚಟುವಟಿಕೆಗಳನ್ನು ಗಮನಿಸುತ್ತಾರೆ.

**ಉತ್ತಮ ಫಲಿತಾಂಶ:** ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಒಟ್ಟು 15 ವ್ಯಾಸಂಗ ಕೇಂದ್ರಗಳು ನಡೆಯುತ್ತಿದೆ. ಇಲ್ಲಿ ಓದಿದ 60 ವಿದ್ಯಾರ್ಥಿಗಳು 2018–19ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, 57 ವಿದ್ಯಾರ್ಥಿಗಳು ಉತ್ತೀರ್ಣರಾದರು. ಇಬ್ಬರು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ.

## ಆ) ಜೋಳಿಗೆ ಪುಸ್ತಕಾಲಯ

ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳಲ್ಲಿ ಜೋಳಿಗೆ ಪುಸ್ತಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ವ್ಯಾಸಂಗಕೇಂದ್ರದ ಮಕ್ಕಳೇ ಹಣ ನೀಡಿ ಪುಸ್ತಕ ಖರೀದಿಸಿ ಕೇಂದ್ರಕ್ಕೆ ಕೊಡಬೇಕು. ವಾರಕ್ಕೊಮ್ಮೆ ಎಲ್ಲ ಮಕ್ಕಳೂ ಒಂದೊಂದು ಪುಸ್ತಕವನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಓದಬೇಕು ಮತ್ತು ಓದಿದ ನಂತರ ಅದರ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕು ಹಾಗೂ ಪುಸ್ತಕದ ವಿಶೇಷತೆಗಳನ್ನು ಪಟ್ಟಿಮಾಡಬೇಕು – ಹೀಗೆ ಯೋಜನಾಬದ್ಧವಾಗಿ ಜೋಳಿಗೆ ಗ್ರಂಥಾಲಯ ನಡೆಯುತ್ತಿದೆ. ಪ್ರಾರಂಭಿಕ ಹಂತವಾಗಿ ಭಾರತ-ಭಾರತಿ ಪುಸ್ತಕ ಸಂಪದದ ಪುಸ್ತಕಗಳನ್ನು ಮಕ್ಕಳು ಖರೀದಿಸಿದ್ದಾರೆ. ಹೀಗೆ 200 ಸ್ಥಾನಗಳಲ್ಲಿ ಜೋಳಿಗೆ ಗ್ರಂಥಾಲಯ ನಡೆಯುತ್ತಿದೆ.

## ಇ) ಗ್ರಂಥಾಲಯ

ಕಾಲೇಜು ವಿದ್ಯಾರ್ಥಿಗಳಿಗಾಗಿ ಬೈಯಪ್ಪನಹಳ್ಳಿ ಸೇವಾಬಸ್ತಿಯಲ್ಲಿ ಗ್ರಂಥಾಲಯವನ್ನು ತೆರೆಯಲಾಗಿದೆ. ಸುಮಾರು 5000ಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಸುಮಾರು 100ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

## ಈ) ಮಿನಿ ಭಾಲಭವನ

ಬಡಮಕ್ಕಳ ಸೃಜನಾತ್ಮಕ-ಕ್ರಿಯಾತ್ಮಕ ವಿಕಾಸಕ್ಕಾಗಿ ಬೆಂಗಳೂರಿನ ಜಯನಗರ, ರಾಜಾಜಿನಗರ, ಕೋಲ್ಸ್‌ಪಾರ್ಕ್‌ನಲ್ಲಿ ಜಾಗರಣ ಪ್ರಕಲ್ಪದ ವತಿಯಿಂದ ಕಳೆದ 2 ವರ್ಷಗಳಿಂದ ಮಿನಿ ಭಾಲಭವನವನ್ನು ನಡೆಸಲಾಗುತ್ತಿದೆ. ಸರ್ಕಾರೀ ಸ್ವಾಮ್ಯದ ಬೆಂಗಳೂರಿನ ಕಬ್ಬನ್ ಪಾರ್ಕ್‌ನ ಬಾಲಭವನ ಸೊಸೈಟಿ ಸಹಯೋಗದಲ್ಲಿ ನಡೆಯುತ್ತಿರುವ ಈ ಭಾಲಭವನದಲ್ಲಿ ಬಡಮಕ್ಕಳಿಗೆ ಸಂಗೀತ, ನೃತ್ಯ, ಭರತನಾಟ್ಯ, ಕ್ರೀಡೆ, ಇಂಗ್ಲಿಷ್ ಸ್ಪೀಕಿಂಗ್ ತರಬೇತಿ ಮುಂತಾದ ಸೃಜನಾತ್ಮಕ-ಕ್ರಿಯಾತ್ಮಕ ಚಟುವಟಿಕೆಗಳನ್ನು ಕಲಿಸಲಾಗುತ್ತಿದೆ.

ಜಯನಗರ ಮತ್ತು ಕೋಲ್ಸ್‌ಪಾರ್ಕ್ ಮಿನಿ ಬಾಲಭವನಗಳಲ್ಲಿ 100ಕ್ಕೂ ಅಧಿಕ ಮಕ್ಕಳು ಪ್ರತಿನಿತ್ಯ ಈ ಚಟುವಟಿಕೆಗಳ ಲಾಭ ಪಡೆಯುತ್ತಿದ್ದಾರೆ.

# ಸ್ವಾವಲಂಬನೆ

ಸೇವಾಬಸ್ತಿಯಲ್ಲಿರುವ ಮಹಿಳೆಯರ, ಯುವಕ-ಯುವತಿಯರ ಕೈಗಳಿಗೆ ವೃತ್ತಿಪರ ತರಬೇತಿ ನೀಡಿ ಸ್ವಾವಲಂಬೀ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ವಿವಿಧ ವೃತ್ತಿತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

## ಅ) ಹೊಲಿಗೆ ತರಬೇತಿ ಕೇಂದ್ರ

ಕೆ.ಪಿ. ಅಗ್ರಹಾರ ಮತ್ತು ವಿ.ವಿ. ಗಿರಿ ಕಾಲೋನಿ ಸೇವಾಬಸ್ತಿಯಲ್ಲಿ ಒಟ್ಟು 2 ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

ಈವರೆಗೆ ಒಟ್ಟು 2500ಕ್ಕೂ ಅಧಿಕ ಮಹಿಳೆಯರು ತರಬೇತಿ ಪಡೆದಿದ್ದಾರೆ. 2018-19ರ ವರ್ಷದಲ್ಲಿ ಒಟ್ಟು 162 ಮಹಿಳೆಯರು ಹೊಲಿಗೆ ತರಬೇತಿ ಪಡೆದಿದ್ದಾರೆ. ಪ್ರಸ್ತುತ 70 ಮಹಿಳೆಯರು ವಿವಿಧ ತಂಡಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ

## ಆ) ಕಂಪ್ಯೂಟರ್ ತರಬೇತಿ ಕೇಂದ್ರ

ಬಾಪೂಜಿನಗರ, ಕಾಮಾಕ್ಷಿಪಾಳ್ಯ, ಬೈಯ್ಯಪ್ಪನಹಳ್ಳಿ, ಹೊಂಗಸಂದ್ರ, ಕೆ.ಪಿ. ಅಗ್ರಹಾರ, ಶೇಷಾದ್ರಿಪುರಂನ ವಿ.ವಿ. ಗಿರಿ ಕಾಲೋನಿ, ಉಲ್ಲಾಳ ಉಪನಗರ(ಯೂತ್ ಫಾರ್ ಸೇವಾದ ವಿದ್ಯಾಚೇತನ ಯೋಜನೆಯ ಸಹಯೋಗ) ಹಾಗೂ ದೊಮ್ಮಲೂರು(ಅಕಾರ್ಡ್ ಸಾಫ್ಟ್‌ವೇರ್ ಕಂಪೆನಿಯ ಸಹಯೋಗ) – ಒಟ್ಟು 7 ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

2018-19ರ ಸಾಲಿನಲ್ಲಿ 369 ಯುವಕ-ಯುವತಿಯರು ಕಂಪ್ಯೂಟರ್ ತರಬೇತಿ ಪಡೆದಿದ್ದಾರೆ.



3 ತಿಂಗಳ ಅವಧಿಯ ಕೋರ್ಸ್‌ಗಳಲ್ಲಿ ಬೇಸಿಕ್ ಮತ್ತು ಟ್ಯಾಲಿ ವಿಷಯಗಳನ್ನು ಕಲಿಸಿ, ನಂತರ ವಿವಿಧ ಕಂಪೆನಿಗಳಲ್ಲಿ ಉದ್ಯೋಗ ಒದಗಿಸಲು ಸಹಾಯ ಮಾಡುವ ಮೂಲಕ ಯುವಕ-ಯುವತಿಯರಿಗೆ ಸ್ವಾವಲಂಬೀ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಲಾಗುತ್ತಿದೆ.

### ಇ) ಸ್ವಸಹಾಯ ಸಂಘಗಳು

ಸಂಪೂರ್ಣ ಸೇವಾಬಸ್ತಿಯ ವಿಕಾಸ ಹಾಗೂ ಸೇವಾಬಸ್ತಿಯ ಜನರ ಆರ್ಥಿಕ ಪ್ರಗತಿ ಸಾಧಿಸುವ ಸಲುವಾಗಿ 16 ಸೇವಾಬಸ್ತಿಗಳಲ್ಲಿ 18 ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಈ ಸ್ವಸಹಾಯ ಸಂಘದಿಂದ ಒಟ್ಟು 30 ಮಹಿಳೆಯರು ಹಾಗೂ 12 ಪುರುಷರು ಸ್ವಸಹಾಯ ಸಂಘಗಳ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

### ಈ) ಮುದ್ರಾ ಯೋಜನೆಯ ಸಹಾಯ

ಸ್ವಂತ ಉದ್ಯಮ ಸ್ಥಾಪಿಸುವ ಆಕಾಂಕ್ಷೆಯುಳ್ಳವರನ್ನು ಗುರುತಿಸಿ ಅವರಿಗೆ ಜಾಗರಣ ಪ್ರಕಲ್ಪದ ಮೂಲಕ ಸಣ್ಣ ಉದ್ಯಮಿಗಳಿಗಾಗಿ ಪ್ರಧಾನಮಂತ್ರಿ ಅವರು ಜಾರಿಗೆ ತಂದಿರುವ ಮುದ್ರಾ ಯೋಜನೆಯಲ್ಲಿ ಸಾಲ ಸೌಲಭ್ಯ ಒದಗಿಸುವ ಸಹಾಯ ಮಾಡಲಾಗಿದೆ. ಈ ವರ್ಷ 3 ಮಂದಿಗೆ ಉದ್ಯಮ ಪ್ರಾರಂಭಿಸಲು ನೆರವು ನೀಡಲಾಗಿದೆ.

### ಉ) ಉದ್ಯೋಗ ಮಾರ್ಗದರ್ಶಿ ಕಾರ್ಯಕ್ರಮ

ಸೇವಾಬಸ್ತಿಯ ಯುವಕ ಯುವತಿಯರಿಗಾಗಿ ಬೆಂಗಳೂರಿನ ಅಬಲಾಶ್ರಮ ಮತ್ತು ರಿಲಯನ್ಸ್ ಸಂಸ್ಥೆ ಸಹಕಾರದಲ್ಲಿ ಆಗಸ್ಟ್ 5ರಂದು ಉದ್ಯೋಗಾವಕಾಶಗಳ ಮಾಹಿತಿ ಕಾರ್ಯಕ್ರಮವನ್ನು ನಡೆಸಲಾಯಿತು. ಇದರಿಂದಾಗಿ ಸೇವಾಬಸ್ತಿಗಳ ಅನೇಕ ಯುವಕ, ಯುವತಿಯರು ರಿಲಯನ್ಸ್ ವಿವಿಧ ಮಳಿಗೆಗಳಲ್ಲಿ ಉದ್ಯೋಗ ಪಡೆದಿದ್ದಾರೆ.



## ಆರೋಗ್ಯ

### ಅ) ಆರೋಗ್ಯ ರಕ್ಷಕಿಯರು

ಸೇವಾಬಸ್ತಿಗಳ ಮಹಿಳೆಯರಿಗೆ ತಮ್ಮ ವೈಯಕ್ತಿಕ ಆರೋಗ್ಯದ ಸಮಸ್ಯೆಗಳನ್ನು ಹೇಳಿಕೊಳ್ಳಲು ಯಾರೂ ಇರುವುದಿಲ್ಲ. ಆರೋಗ್ಯದ ಸಮಸ್ಯೆ ಉಂಟಾದಾಗ ಎಲ್ಲಿಗೆ ಹೋಗಬೇಕು ಎಂಬ ಅರಿವು ಅವರಿಗೆ ಇರುವುದಿಲ್ಲ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಜಾಗರಣ ಪ್ರಕಲ್ಪವು ಸೇವಾಬಸ್ತಿಯಲ್ಲಿರುವ ಆಸಕ್ತ ಮಹಿಳೆಯನ್ನು 'ಆರೋಗ್ಯ ರಕ್ಷಕಿ'ಯಾಗಿ ಗುರುತಿಸಲಾಗುತ್ತಿದೆ. ಈ ಆರೋಗ್ಯ ರಕ್ಷಕಿಯರು ಅವರಿಗೆ ಸಹಾಯ ಮಾಡುತ್ತಾರೆ. ಹತ್ತಿರದ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಸೂಕ್ತ ಚಿಕಿತ್ಸೆ ಒದಗಿಸುತ್ತಾರೆ.

- ಸೇವಾಬಸ್ತಿಗಳಲ್ಲಿ ಆರೋಗ್ಯ ಜಾಗೃತಿ, ಆರೋಗ್ಯ ತಪಾಸಣಾ ಶಿಬಿರ, ಗಂಭೀರ ಕಾಯಿಲೆಗಳಿಗೆ ಹೆಚ್ಚಿನ ಚಿಕಿತ್ಸೆಯ ನೆರವು ದೊರಕಿಸುವ ಮತ್ತು ಮಾನಸಿಕವಾಗಿ ನೊಂದಿರುವವರಿಗೆ ಆಪ್ತ ಸಲಹೆ ನೀಡುವ ವಿವಿಧ ಚಟುವಟಿಕೆಗಳನ್ನು ಆರೋಗ್ಯ ರಕ್ಷಕಿಯರು ನಡೆಸುತ್ತಿದ್ದಾರೆ.
- ಅನೇಕ ಬಡ ಗರ್ಭಿಣಿ ಹೆಂಗಸರು ಇವರ ಸಹಾಯದಿಂದ ಉತ್ತಮ ಆಸ್ಪತ್ರೆಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ಪಡೆದಿದ್ದಾರೆ.
- ಈವರೆಗೆ ಸಾವಿರಾರು ಮಹಿಳೆಯರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಇವರ ಮುಂದೆ ಹಂಚಿಕೊಂಡು ಪರಿಹರಿಸಿಕೊಂಡಿದ್ದಾರೆ.
- ಇವರ ಮೂಲಕ ಸೇವಾಬಸ್ತಿಯ ಮನೆಗಳ ಸರ್ವೇಕ್ಷಣೆ ನಡೆಸಿ ಅನಾರೋಗ್ಯದ ಕಾರಣವನ್ನು ಪತ್ತೆ ಹಚ್ಚಲಾಗುತ್ತಿದೆ. ನಿರಂತರವಾಗಿ ವಿವಿಧ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಅನಾರೋಗ್ಯಕ್ಕೆ ಕಾರಣವಾದ ಅನೈರ್ಮಲ್ಯ ವಾತಾವರಣವನ್ನು ದೂರಗೊಳಿಸಲು ಜನರಲ್ಲಿ ಜಾಗೃತಿ ಮೂಡಿಸುವ ಸಂವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.
- ಪ್ರಸ್ತುತ ಕೆ.ಪಿ. ಅಗ್ರಹಾರದ ಸುತ್ತಲಿನ 5 ಸೇವಾಬಸ್ತಿಗಳಲ್ಲಿ ಹಾಗೂ ಸಿದ್ಧಾಪುರ ಸುತ್ತಲಿನ 6 ಸೇವಾಬಸ್ತಿಗಳಲ್ಲಿ ಆರೋಗ್ಯ ರಕ್ಷಕಿಯರು ಶ್ರಮಿಸುತ್ತಿದ್ದಾರೆ.
- ಈ ವರ್ಷ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ 80ಕ್ಕೂ ಹೆಚ್ಚು ಮಹಿಳೆಯರಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

• ಆರೋಗ್ಯ ರಕ್ಷಕಿಯರ ಈ ಕಾರ್ಯಕ್ಕೆ BGS ಗ್ಲೋಬಲ್ ಆಸ್ಪತ್ರೆ, ರಂಗದೊರೈ ಆಸ್ಪತ್ರೆ, ಮಹಾವೀರ್ ಜೈನ್ ಆಸ್ಪತ್ರೆಗಳು ನಿರಂತರವಾಗಿ ಸಹಕಾರ ನೀಡುತ್ತಿವೆ.

**ಕಿಶೋರಿಯರ ಜಾಗೃತಿ ಕಾರ್ಯಕ್ರಮ:** ಸೇವಾಬಸ್ತಿಗಳ ಕಿಶೋರಿಯರಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಸಮಾಧಾನ ನೀಡುವ, ಸಮಾಲೋಚನೆ ಮಾಡುವ ಮತ್ತು ಆ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಸಲುವಾಗಿ ಜುಲೈ 1ರಂದು ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಡಾಕ್ಟರ್ಸ್ ಫಾರ್ ಸೇವಾದ ಶಶಿಕಲಾ ಅವರು ದೈಹಿಕ ಬದಲಾವಣೆಗಳ ಅರಿವು ಮತ್ತು ಮಾನಸಿಕ, ಭಾವನಾತ್ಮಕ ಸಮಸ್ಯೆಗಳಿಗೆ ಹೇಗೆ ಆಪ್ತಸಲಹೆ ನೀಡಬಹುದೆಂದು ತಿಳಿಸಿಕೊಟ್ಟರು. ಈ ಜಾಗೃತಿ ಕಾರ್ಯಕ್ರಮದಲ್ಲಿ 1500ಕ್ಕೂ ಅಧಿಕ ಕಿಶೋರಿಯರು ಭಾಗವಹಿಸಿದ್ದರು.

ಆರೋಗ್ಯ ರಕ್ಷಕಿಯರು ಸಿದ್ಧಾಪುರ, ವಿಲ್ಸನ್ ಗಾರ್ಡನ್ ಮೊದಲಾದ ಸೇವಾಬಸ್ತಿಯ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಿದರು.

## ಆ) ಉಚಿತ ಚಿಕಿತ್ಸಾಲಯ

ಸೇವಾಬಸ್ತಿಯ ಜನರ ಸಾಮಾನ್ಯ ರೋಗಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ ಕೆಂಪಾಪುರ ಅಗ್ರಹಾರ ಮತ್ತು ವಿ.ವಿ. ಗಿರಿ ಸೇವಾಬಸ್ತಿಯಲ್ಲಿ ನಿಯಮಿತವಾಗಿ ಉಚಿತ ಚಿಕಿತ್ಸಾ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಪ್ರತಿದಿನ 20ಕ್ಕೂ ಹೆಚ್ಚು ಜನರು ಈ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ.

## ಇ) ಆರೋಗ್ಯ ಮತ್ತು ನೇತ್ರ ತಪಾಸಣಾ ಶಿಬಿರಗಳು

ವಿವಿಧ ಆಸ್ಪತ್ರೆಗಳ, ಸಂಸ್ಥೆಗಳ ಸಹಯೋಗದೊಂದಿಗೆ (ಲಯನ್ಸ್ ಕಣ್ಣಾಸ್ಪತ್ರೆ, ಬಿಜಿಎಸ್ ಗ್ಲೋಬಲ್ ಆಸ್ಪತ್ರೆ, ಡಾಕ್ಟರ್ಸ್ ಫಾರ್ ಸೇವಾ, ರೋಟರಿ ಕ್ಲಬ್, ಮದನ ಮೋಹನ ಮಾಳವೀಯ ಮಿಷನ್ ಇತ್ಯಾದಿ) ವಿವಿಧ ಸೇವಾಬಸ್ತಿಗಳಲ್ಲಿ ನಿಯಮಿತವಾಗಿ ಉಚಿತ ಸ್ವಾಸ್ಥ್ಯ ಸಂಬಂಧಿ ಶಿಬಿರಗಳನ್ನು ನಡೆಸಲಾಗುತ್ತಿದೆ.

• ನೇತ್ರ ತಪಾಸಣಾ ಶಿಬಿರದಲ್ಲಿ ಸುತ್ತಮುತ್ತಲಿನ ಸೇವಾಬಸ್ತಿಯ ಹತ್ತಾರು ಜನರು ಭಾಗವಹಿಸಿ ತಮ್ಮ ಕಣ್ಣುಗಳ ಪರೀಕ್ಷೆ ಮಾಡಿಕೊಳ್ಳುತ್ತಾರೆ. ಇದಕ್ಕೆ ಪೂರ್ವಭಾವಿಯಾಗಿ ಜಾಗರಣ ಪ್ರಕಲ್ಪದ ಕಾರ್ಯಕರ್ತರು ಮನೆಮನೆಗೆ ಭೇಟಿ ನೀಡಿ ಶಿಬಿರದ ಮಾಹಿತಿ ನೀಡುತ್ತಾರೆ ಹಾಗೂ ಪ್ರಾಥಮಿಕ ಚಿಕಿತ್ಸೆ




ನಡೆಸಲಾಗುತ್ತದೆ. ಶಿಬಿರದಲ್ಲಿ ಭಾಗವಹಿಸಿದವರಿಗೆ ತಪಾಸಣೆ, ಕನ್ನಡಕ ವಿತರಣೆ ಹಾಗೂ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತದೆ. ಈ ವರ್ಷ ಬೈಯ್ಯಪ್ಪನಹಳ್ಳಿ (ಏಪ್ರಿಲ್ 8), ಹೆಬ್ಬಾಳದ ಕುಂತಿಗ್ರಾಮ (ಮಾರ್ಚ್ 10)ದಲ್ಲಿ ನೇತ್ರ ತಪಾಸಣಾ ಶಿಬಿರ ನಡೆಯಿತು.

• ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಕ್ಕಳ, ಸ್ತ್ರೀಯರ, ಚರ್ಮರೋಗ, ಕಣ್ಣು – ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದ ತಜ್ಞ ವೈದ್ಯರು ಹಾಜರಿದ್ದು, ರೋಗಿಗಳ ತಪಾಸಣೆ ನಡೆಸಿ ಅಗತ್ಯ ಚಿಕಿತ್ಸೆ ನೀಡಿದರು.

| | ಶಿಬಿರ ಸಂಖ್ಯೆ | ಮಾತೆಯರು | ಪುರುಷರು | ಒಟ್ಟು | ಕನ್ನಡಕ ಪಡೆದವರು | ಚಿಕಿತ್ಸೆ ಪಡೆದವರು |
|---|---|---|---|---|---|---|
| ನೇತ್ರ ತಪಾಸಣಾ ಶಿಬಿರ | 2 | 170 | 190 | 360 | 174 | 25 |
| ಆರೋಗ್ಯ ತಪಾಸಣಾ ಶಿಬಿರ | 1 | 120 | 80 | 200 | – | 200 |
| ಮಹಿಳಾ ಆರೋಗ್ಯ ತಪಾಸಣೆ ಶಿಬಿರ | 1 | 69 | – | 69 | – | 56 |

## ಸಂಸ್ಕಾರ

### ಅ) ಶಿಶುಮಂದಿರ

ಸೇವಾಬಸ್ತಿಗಳಲ್ಲಿ ವಾಸಿಸುವ ಜನರು ತಮ್ಮ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಮಹಿಳೆಯರೂ ಸೇರಿದಂತೆ ಮನೆಯ ಎಲ್ಲ ಸದಸ್ಯರು ದುಡಿಮೆಗೆ ಹೋಗುತ್ತಾರೆ. ಇದು ಅವರಿಗೆ ಅನಿವಾರ್ಯವೂ ಆಗಿದೆ. ಮನೆಗೆಲಸ, ಬೀದಿ ಕಸಗುಡಿಸಲು, ಊದುಬತ್ತಿ ಫ್ಯಾಕ್ಟರಿ ಮುಂತಾದ ಕೆಲಸಗಳಿಗೆ ಹೋಗುವ ತಾಯಂದಿರು ಬೆಳಗ್ಗೆಯಿಂದ ಸಂಜೆಯವರೆಗೆ ಮನೆಯಿಂದ ಹೊರಗಿರುವ ಪರಿಸ್ಥಿತಿಯಿದೆ. ಇಂತಹ ಸಂದರ್ಭದಲ್ಲಿ ಅವರ ಮಕ್ಕಳು?

ಇಂತಹವರಿಗೆ ನೆರವಾಗುವ ಉದ್ದೇಶದಿಂದ ಜಾಗರಣ ಪ್ರಕಲ್ಪದ ವತಿಯಿಂದ ಬೆಂಗಳೂರಿನ ವಿ.ವಿ.ಗಿರಿ ಕಾಲೋನಿ, ಕೆಂಪಾಪುರ ಅಗ್ರಹಾರ, ನ್ಯೂಗುರಪ್ಪನ ಪಾಳ್ಯ, ಕಾಮಾಕ್ಷಿಪಾಳ್ಯ ಸೇವಾಬಸ್ತಿಗಳಲ್ಲಿ ಕಳೆದ 6 ವರ್ಷಗಳಿಂದ ಶಿಶುಮಂದಿರಗಳನ್ನು ನಡೆಸಲಾಗುತ್ತಿದೆ. ಎರಡೂವರೆಯಿಂದ 5 ವರ್ಷದೊಳಗಿನ ಮಕ್ಕಳಿರುವ ತಾಯಂದಿರು ತಮ್ಮ ಮಕ್ಕಳನ್ನು ಈ ಶಿಶುಮಂದಿರಗಳಲ್ಲಿ ಬಿಟ್ಟು ಕೆಲಸಗಳಿಗೆ ಹೋಗುತ್ತಾರೆ. ಅಲ್ಲಿ ತಾಯಿಯಂತೆ ಪ್ರೀತಿತೋರುವ ಶಿಕ್ಷಕಿಯರು ಆ ಮಕ್ಕಳಿಗೆ ಊಟದ ಜೊತೆಗೆ ಆಟ, ಹಾಡು ಮುಂತಾದ ಮನೋವಿಕಾಸದ ಚಟುವಟಿಕೆಗಳನ್ನು ನಡೆಸಿಕೊಡುತ್ತಾರೆ.

ಪ್ರಸ್ತುತ 4 ಶಿಶುಮಂದಿರಗಳಲ್ಲಿ ಒಟ್ಟು 151 ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ.

### ಆ) ಬಾಲಗೋಕುಲ

ಬಾಲಗೋಕುಲಗಳ ಮೂಲಕ ಸೇವಾಬಸ್ತಿಯಲ್ಲಿರುವ ಮಕ್ಕಳಲ್ಲಿ ಉತ್ತಮ ಗುಣಗಳನ್ನು ಬೆಳೆಸುವ ಕಾರ್ಯವನ್ನು ನಡೆಸಲಾಗುತ್ತಿದೆ. ಪ್ರಸ್ತುತ 200 ಬಾಲಗೋಕುಲಗಳು ನಡೆಯುತ್ತಿದ್ದು, ನಾಲ್ಕು ಸಾವಿರಕ್ಕೂ ಅಧಿಕ ಮಕ್ಕಳು ಭಾಗವಹಿಸುತ್ತಿದ್ದಾರೆ.

### ಇ) ದೇವಸ್ಥಾನ ಕೇಂದ್ರಿತ ಚಟುವಟಿಕೆ

ಸೇವಾಬಸ್ತಿಯಲ್ಲಿರುವ ದೇವಸ್ಥಾನವನ್ನು ಕೇಂದ್ರಿತವಾಗಿರಿಸಿ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಮೂಲಕ ಸೇವಾಬಸ್ತಿಯ ಜನರಿಗೆ ಸಂಸ್ಕಾರ ನೀಡುವ ಪ್ರಯತ್ನ ನಡೆಯುತ್ತಿದೆ. ಕೆಂಪಾಪುರ ಅಗ್ರಹಾರದ ರಾಷ್ಟ್ರೋತ್ಥಾನ ಸೇವಾಧಾಮದಲ್ಲಿರುವ ಶ್ರೀ ಗಣೇಶ ದೇವಸ್ಥಾನದ ಮೂಲಕ ಸುತ್ತಲಿನ ಜನರಲ್ಲಿ ಧಾರ್ಮಿಕ ಭಾವನೆ ಜಾಗೃತಗೊಳಿಸುವ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.

## ಸೇವಾಬಸ್ತಿಯಲ್ಲಿ ನಡೆಸಿದ ವಿವಿಧ ಕಾರ್ಯಕ್ರಮಗಳು

ಸೇವಾಬಸ್ತಿಯನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ಮುನ್ನೆಲೆಗೆ ತರುವ ಸಲುವಾಗಿ ವ್ಯಾಸಂಗ ಕೇಂದ್ರಗಳನ್ನು ಕೇಂದ್ರವಾಗಿರಿಸಿಕೊಂಡು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

- ಸೇವಾಬಸ್ತಿಯ ಜನರಲ್ಲಿ ಸಹೋದರತೆ ಮೂಡಿಸುವ ಹಾಗೂ ವ್ಯಾಸಂಗ ಕೇಂದ್ರದ ವಿದ್ಯಾರ್ಥಿಗಳ ಮನೋವಿಕಾಸಕ್ಕಾಗಿ ರಕ್ಷಾಬಂಧನ, ಸಂಕ್ರಾಂತಿ, ಭಾರತಮಾತಾ ಪೂಜನ (108 ಕ್ಲಸ್ಟರ್‌ಗಳಲ್ಲಿ), ದೀಪೋತ್ಸವ (200ಕ್ಕೂ ಹೆಚ್ಚು ಸ್ಥಾನ) ಶಿವರಾತ್ರಿ, ದೀಪಾವಳಿ, ವಿವೇಕಾನಂದ ಜಯಂತಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ಸೇವಾಬಸ್ತಿಯ ಜನರಲ್ಲಿ ಏಕತೆ ಮೂಡಿಸುವ ಸಲುವಾಗಿ ನಡೆಯುತ್ತಿರುವ ಶ್ರೀಕೃಷ್ಣಜನ್ಮಾಷ್ಟಮಿಗೆ ಇದೀಗ 15 ವರ್ಷ ತುಂಬಿದೆ. ಈ ಉತ್ಸವವು ಇದೀಗ ಸೇವಾಬಸ್ತಿಯ ಎಲ್ಲ ಸಮುದಾಯದ ಜನರು ಪಾಲ್ಗೊಳ್ಳುವ ಮೂಲಕ ಊರಜಾತ್ರೆಯ ಸ್ವರೂಪ ಪಡೆದಿದೆ. ಎಲ್ಲ ಮನೆಯವರು ತಮ್ಮ ಮನೆಯಂಗಳದಲ್ಲಿ ರಂಗೋಲಿ ಹಾಕಿ ಕೃಷ್ಣ–ರಾಧೆಯರ ಮೆರವಣಿಗೆಯನ್ನು ಸ್ವಾಗತಿಸಿದರು. ತಾವಾಗಿಯೇ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಿದ್ದಾರೆ. ಈ ವರ್ಷ ಒಟ್ಟು 65 ಕ್ಲಸ್ಟರ್‌ಗಳಲ್ಲಿ ಕೃಷ್ಣಾಷ್ಟಮಿ ನಡೆದಿದ್ದು, 8000ಕ್ಕೂ ಅಧಿಕ ಮಕ್ಕಳು ಕೃಷ್ಣ–ರಾಧೆಯರ ವೇಷಧರಿಸಿದರು. ವೇಷಧಾರಿಗಳಿಂದ ಸೇವಾಬಸ್ತಿಗಳಲ್ಲಿ ಮೆರವಣಿಗೆ, ಮೊಸರು–ಕುಡಿಕೆ ಒಡೆಯುವುದು, ಹಾಡು–ನೃತ್ಯ ಮುಂತಾದ ಕಾರ್ಯಕ್ರಮಗಳು ನಡೆದವು. ಬನಶಂಕರಿಯ ಹರಿಕಾಲೋನಿ ಸೇವಾಬಸ್ತಿಯಲ್ಲಿ ಕೃಷ್ಣ ವೇಷಧಾರಿಗಳಿಗೆ ಬಹುಮಾನ ನೀಡಲಾಯಿತು.
- ಅಂತಾರಾಷ್ಟ್ರೀಯ ಯೋಗದಿನಾಚರಣೆಯ ಪ್ರಯುಕ್ತ ವ್ಯಾಸಂಗ ಕೇಂದ್ರಗಳು ಹಾಗೂ ಬಾಲಗೋಕುಲಗಳಲ್ಲಿ ವಾರಗಳ ಕಾಲ ಯೋಗಾಸನ ಅಭ್ಯಾಸ ನಡೆಸಲಾಯಿತು. ಜೂನ್ 21ರ ಯೋಗ ದಿನದಂದು ಸೇವಾಬಸ್ತಿಗಳ





ಸುತ್ತಮುತ್ತಲಿನ ಶಾಲಾ ಆವರಣ, ಮೈದಾನಗಳಲ್ಲಿ ಯೋಗ ಪ್ರದರ್ಶನ ನಡೆಸಲಾಯಿತು.

- ಪರಿಸರ ದಿನಾಚರಣೆಯನ್ನು ಸ್ವಚ್ಛ ಭಾರತ ಕಾರ್ಯಕ್ರಮ ಮತ್ತು ತುಳಸಿ ಗಿಡ ಹಂಚುವ ಮೂಲಕ ಆಚರಿಸಲಾಯಿತು. ಪ್ರಗತಿಪುರ, ಬೈಯ್ಯಪ್ಪನಹಳ್ಳಿ, ವೆಂಕಟರಾಂನಗರ ಮುಂತಾದ ಸೇವಾಬಸ್ತಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಉಲ್ಲಾಳ ಉಪನಗರ, ಬೈಯ್ಯಪ್ಪನಹಳ್ಳಿ, ಕೆ.ಪಿ. ಅಗ್ರಹಾರ ಮೊದಲಾದ ಸೇವಾಬಸ್ತಿಗಳ ಮಕ್ಕಳಿಗೆ ತುಳಸಿ ಗಿಡಗಳನ್ನು ವಿತರಿಸಲಾಯಿತು.
- ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿರುವ ರಾಷ್ಟ್ರೋತ್ಥಾನ ಪರಿಷತ್‌ನ ಉಚಿತ ಶಿಶುಮಂದಿರದ ಮಕ್ಕಳ ಸಾಮೂಹಿಕ ಅಕ್ಷರಾಭ್ಯಾಸ ಕಾರ್ಯಕ್ರಮ ಜೂನ್ 10ರಂದು ಸಮೀಪದ ಗಣೇಶ ದೇವಸ್ಥಾನದಲ್ಲಿ ನಡೆಯಿತು. ಪರಿಷತ್‌ನ ಉಪಾಧ್ಯಾಕ್ಷರಾದ ಎ. ಗೋಪಾಲಕೃಷ್ಣ ನಾಯಕ್ ಅವರು ಮಕ್ಕಳ ಲಾಲನೆ, ಪಾಲನೆ ಕುರಿತು ತಿಳಿಸಿಕೊಟ್ಟರು.
- **ಗುರುವಂದನ:** ಮಕ್ಕಳಲ್ಲಿ ಗುರುಹಿರಿಯರ ಬಗೆಗೆ ಗೌರವ ಮೂಡಿಸಲು ಹಾಗೂ ಸಂಬಂಧಗಳ ಮಹತ್ತ್ವವನ್ನು ಪರಿಚಯಿಸುವ ಸಲುವಾಗಿ ಗುರುಪೂರ್ಣಿಮೆಯ ಸಂದರ್ಭದಲ್ಲಿ ಸೇವಾಬಸ್ತಿಯ ವ್ಯಾಸಂಗಕೇಂದ್ರಗಳಲ್ಲಿ ಗುರುವಂದನ (ಮಕ್ಕಳು ತಾವು ಓದುವ ಶಾಲೆಯ ಶಿಕ್ಷಕರಿಗೆ ಗುರುವಂದನೆ ಸಲ್ಲಿಸುವ) ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವ್ಯಾಸಂಗ ಕೇಂದ್ರದ ಮಕ್ಕಳು ತಾವು ಓದುತ್ತಿರುವ ಶಾಲೆಯ ಶಿಕ್ಷಕರನ್ನು ತಮ್ಮ ವ್ಯಾಸಂಗ ಕೇಂದ್ರಗಳಿಗೆ ಆಹ್ವಾನಿಸಿ, ಅವರ ಪಾದಪೂಜೆ ಮಾಡಿ ನಮಸ್ಕರಿಸಿ ಆಶೀರ್ವಾದ ಪಡೆದರು.
- ಪರಿಸರ ಸ್ನೇಹಿ ಗಣಪತಿಯನ್ನು ಉತ್ತೇಜಿಸುವ ಹಾಗೂ ಧಾರ್ಮಿಕ ಜಾಗೃತಿಗಾಗಿ ಪರಿಸರ ಸ್ನೇಹಿ ಗಣಪತಿ ತಯಾರಿಕೆ ಕಾರ್ಯಕ್ರಮವನ್ನು ಬಾಪೂಜಿನಗರದ ಸೇವಾಬಸ್ತಿಯ ವ್ಯಾಸಂಗ ಕೇಂದ್ರದಲ್ಲಿ ನಡೆಸಲಾಯಿತು. ಮಕ್ಕಳು ಮಣ್ಣಿನಲ್ಲಿ ಗಣಪತಿ ಮಾಡಿ, ಹಬ್ಬದಂದು ತಾವೇ ಮಾಡಿದ ಗಣಪತಿ ಮೂರ್ತಿಯನ್ನು ಪೂಜಿಸಿ ಆನಂದಿಸಿದರು.
- **ಸುಮಂಗಲಿ ಪೂಜೆ:** ದಾಂಪತ್ಯ ಜೀವನದ ಮಹತ್ತ್ವದ ಕುರಿತು ಅರಿವು ಮೂಡಿಸುವ ಸಲುವಾಗಿ ಸೇವಾಬಸ್ತಿಯ ಮಹಿಳೆಯರಿಗಾಗಿ ಸುಮಂಗಲಿ ಪೂಜೆ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಬೆಂಗಳೂರಿನ ಕೆಂಪಾಪುರ ಅಗ್ರಹಾರದ ನೇತಾಜಿನಗರದ ಸೇವಾಧಾಮ, ಕಸ್ತೂರಿ ಬಡಾವಣೆಯ ಶ್ರೀವಿನಾಯಕ ದೇವಸ್ಥಾನ, ಚಂದ್ರಪ್ಪ ರಸ್ತೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ – ಹೀಗೆ ಮೂರು ಕಡೆಗಳಲ್ಲಿ ನಡೆಯಿತು. 250ಕ್ಕೂ ಅಧಿಕ ಸುಮಂಗಲಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.
- ಸ್ವಾತಂತ್ರ್ಯ ದಿನದಂದು ಜಯನಗರ ಮತ್ತು ಕೋಲ್ಸ್ ಪಾರ್ಕ್ ಮಿನಿ ಬಾಲಭವನಗಳಲ್ಲಿ ಚಿತ್ರಕಲೆ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಸೇವಾಬಸ್ತಿಯ ವ್ಯಾಸಂಗ ಕೇಂದ್ರಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕಥೆಗಳನ್ನು ಹೇಳಲಾಯಿತು.
- ಸಾಮಾಜಿಕ ಕಳಕಳಿ ಹೊಂದಿರುವ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ಕಿರಣ್ ಹಾಗೂ ತಂಡದವರು ಕಳೆದ 4 ವರ್ಷಗಳಿಂದ ದೀಪಾವಳಿ ಉತ್ಸವವನ್ನು ಸೇವಾಬಸ್ತಿಗಳಲ್ಲಿ ಆಚರಿಸುತ್ತಿದ್ದಾರೆ. 15ಕ್ಕೂ ಹೆಚ್ಚು ಸೇವಾಬಸ್ತಿಗೆ ಆಗಮಿಸಿದ ಎಂಜಿನಿಯರ್‌ಗಳ ತಂಡ ಅಲ್ಲಿನ ಮಕ್ಕಳಿಗೆ ಸಿಹಿ ವಿತರಿಸಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.
- ವಿವೇಕಾನಂದರ ಚಿಕಾಗೋ ವಾಣಿಗೆ 125 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ವಿವಿಧ ಸೇವಾಬಸ್ತಿಯ 125 ಮಕ್ಕಳು ಕೇಶವಶಿಲ್ಪದಿಂದ ರಾಮಕೃಷ್ಣ ಆಶ್ರಮದ ಬಳಿಯ ವಿವೇಕಾನಂದ ಪ್ರತಿಮೆಯ ವರೆಗೆ ಮೆರವಣಿಗೆ ನಡೆಸಿದರು.
- ಶೈಕ್ಷಣಿಕ ಪ್ರವಾಸದ ಅಂಗವಾಗಿ ಡಿಸೆಂಬರ್ 29 ಮತ್ತು ಜನವರಿ 5ರಂದು ಮಕ್ಕಳು ಮೈಸೂರಿಗೆ ಭೇಟಿ ನೀಡಿ ಚಾಮುಂಡಿಬೆಟ್ಟ, ಮೃಗಾಲಯ, ಅರಮನೆಗಳನ್ನು ವೀಕ್ಷಿಸಿದರು. ವ್ಯಾಸಂಗ ಕೇಂದ್ರಗಳಲ್ಲಿ ತಮ್ಮ ಪ್ರವಾಸ ಕಥನ ಬರೆಯುವ ಸ್ಪರ್ಧೆಯನ್ನು ಏರ್ಪಡಿಸಲಾಯಿತು.







- **ಪ್ರವಾಸ:** ಜಾಗರಣ ಪ್ರಕಲ್ಪದ ಅಡಿಯಲ್ಲಿ ಕಮಲಾನಗರದಲ್ಲಿರುವ ನಡೆಯುತ್ತಿರುವ ಸ್ವಸಹಾಯ ಸಂಘಗಳ ತಾಯಂದಿರು ಮಾರ್ಚ್ 10ರಂದು ಘಾಟಿ ಸುಬ್ರಹ್ಮಣ್ಯದ ರಾಷ್ಟ್ರೋತ್ಥಾನ ಗೋಶಾಲೆಗೆ ಭೇಟಿ ನೀಡಿ, ಗೋಪೂಜೆ ನೆರವೇರಿಸಿ, ತಾವು ತಂದ ಹಣ್ಣು, ಬೆಲ್ಲ, ಅಕ್ಕಿಯನ್ನು ಗೋವುಗಳಿಗೆ ನೀಡಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ದಿನೇಶ್ ಹೆಗ್ಡೆ ಅವರು ಸ್ವಸಹಾಯ ಸಂಘಗಳ ಮೂಲಕ ಆರ್ಥಿಕ ಸ್ವಾವಲಂಬನೆ ಗಳಿಸುವ ಮಹತ್ತ್ವವನ್ನು ತಿಳಿಸಿದರು.
- ದೇಶಭಕ್ತಿ ಮೂಡಿಸುವ ಸಲುವಾಗಿ ಜನವರಿ 26ರಂದು ಭಾರತ ಮಾತಾ ಪೂಜೆ ಕಾರ್ಯಕ್ರಮ ಜಾಗರಣದ ಎಲ್ಲಾ ಕೇಂದ್ರಗಳಲ್ಲಿ ನಡೆಯಿತು. ಭಾರತದ ಶ್ರೇಷ್ಠತೆಯನ್ನು, ಜಗತ್ತಿಗೆ ಭಾರತ ನೀಡಿದ ಕೊಡುಗೆಗಳನ್ನು ಸ್ಮರಿಸಲಾಯಿತು.
- **ಶಿಶುಮಂದಿರ ವಾರ್ಷಿಕೋತ್ಸವ:** ಕಾಮಾಕ್ಷಿ ಪಾಳ್ಯದಲ್ಲಿರುವ ರಾಷ್ಟ್ರೋತ್ಥಾನ ಉಚಿತ ಶಿಶುಮಂದಿರದ ವಾರ್ಷಿಕೋತ್ಸವವು ಫೆಬ್ರುವರಿ 26ರಂದು ನಡೆಯಿತು. ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸುರೇಶ್ ಕುಮಾರ್ ಅವರು ಭಾಗವಹಿಸಿ ರಾಷ್ಟ್ರೋತ್ಥಾನ ಪರಿಷತ್‌ನ ಸೇವಾ ಯೋಜನೆಗಳ ಬಗ್ಗೆ ಪ್ರಶಂಸಿಸಿದರು. ಕಾಮಾಕ್ಷಿಪಾಳ್ಯ ವಾರ್ಡ್‌ನ ಬಿ.ಬಿ.ಎಂ.ಪಿ ಸದಸ್ಯರಾದ ಪ್ರತಿಮಾ ಮತ್ತು ರಾಷ್ಟ್ರೋತ್ಥಾನ ಆಡಳಿತ ಮಂಡಳಿ ಸದಸ್ಯರಾದ ದ್ವಾರಕಾನಾಥ ಉಪಸ್ಥಿತರಿದ್ದರು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

  ದೊಮ್ಮಲೂರು ವ್ಯಾಸಂಗ ಕೇಂದ್ರದಲ್ಲಿ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ತಾಯಂದಿರುಗಳಿಗೆ ಮತ್ತು ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ, ಅಕಾರ್ಡ್ ಕಂಪೆನಿಯ ವತಿಯಿಂದ ಬಹುಮಾನ ವಿತರಣೆ ನಡೆಯಿತು.
- ಸೇವಾಬಸ್ತಿಗಳ ಮಕ್ಕಳಿಗಾಗಿ ಅಕ್ಟೋಬರ್ 13ರಂದು ಕ್ರೀಡಾಚೇತನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವ್ಯಾಸಂಗ ಕೇಂದ್ರದ 600ಕ್ಕೂ ಅಧಿಕ ಮಕ್ಕಳು ಭಾಗವಹಿಸಿದ್ದರು. ಓಟ, ನೆಗೆತ, ಹೀಗೆ ಹಲವು ಸ್ಪರ್ಧೆಗಳಲ್ಲಿ ವ್ಯಾಸಂಗ ಕೇಂದ್ರದ 600ಕ್ಕೂ ಅಧಿಕ ಮಕ್ಕಳು ಭಾಗವಹಿಸಿ ಬಹುಮಾನ ಗಳಿಸಿದರು.
- **ಸೇವಾ ಬೈಠಕ್‌ಗಳಲ್ಲಿ ಭಾಗವಹಿಸುವಿಕೆ:** ಜಾಗರಣ ಪ್ರಕಲ್ಪದ ಸ್ವಸಹಾಯ ಸಂಘಗಳ ಪ್ರಮುಖರಾದ ಬಸವರಾಜ್ ಅವರು ಭೂಪಾಲ್‌ನಲ್ಲಿ ಅಕ್ಟೋಬರ್ 23 ಮತ್ತು 24ರಂದು ನಡೆದ ಸೇವಾಭಾರತಿಯ ವೈಭವಶ್ರೀ ಬೈಠಕ್‌ನಲ್ಲಿ ಭಾಗವಹಿಸಿದರು. ಫೆ. 19 ರಿಂದ 27ರವರೆಗೆ ಚಾಮನಗರದಲ್ಲಿ ನಡೆದ ವಿಶ್ವ ಹಿಂದು ಪರಿಷತ್ತಿನ ದುರ್ಗಾವಾಹಿನಿಯ ಒಂದು ವಾರದ ಶಿಬಿರದಲ್ಲಿ ಜಾಗರಣ ಪ್ರಕಲ್ಪದ 7 ಜನ ಶಿಕ್ಷಕಿಯರು ಭಾಗವಹಿಸಿದರು.
- **ಸರ್ವೇಕ್ಷಣೆ ಪ್ರಮಾಣ ಪತ್ರ:** ರಾಷ್ಟ್ರೀಯ ಸೇವಾಭಾರತಿಯ ಯೋಜನೆಯಡಿಯಲ್ಲಿ ಜಾಗರಣ ಪ್ರಕಲ್ಪದ ಕಾರ್ಯಕರ್ತರು ಮಹಾನಗರ ಸೇವಾಬಸ್ತಿಗಳ ಸರ್ವೇಕ್ಷಣೆ ನಡೆಸಿದರು. ಈ ಸರ್ವೇಕ್ಷಣೆಯಲ್ಲಿ ಭಾಗವಹಿಸಿದ ಜಾಗರಣ ಪ್ರಕಲ್ಪಗಳ ಕಾರ್ಯಕರ್ತರಿಗೆ ರಾಷ್ಟ್ರೀಯ ಸೇವಾಭಾರತಿಯ ಪ್ರಶಿಕ್ಷಣ ಪ್ರಮುಖರಾದ ಶ್ರೀಧರ ಸಾಗರ್ ಅವರು ಪ್ರಮಾಣ ಪತ್ರ ವಿತರಿಸಿದರು.
- **ಸ್ಕೂಲ್ ಬ್ಯಾಗ್ ವಿತರಣೆ:** ಸೇವಾಬಸ್ತಿಯ 800ಕ್ಕೂ ಅಧಿಕ ಮಕ್ಕಳಿಗೆ ಯೂತ್ ಫಾರ್ ಸೇವಾ ಸಂಸ್ಥೆಯ ಮೂಲಕ ಸ್ಕೂಲ್ ಬ್ಯಾಗ್ ಮತ್ತು ಪುಸ್ತಕಗಳನ್ನು ವಿತರಿಸಲಾಯಿತು.

## ಪ್ರಕಲ್ಪದ ಚಟುವಟಿಕೆಗಳ ಪರಿಣಾಮ

- ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸೇವಾಬಸ್ತಿಗಳು ಸದೃಢವಾಗುತ್ತಿವೆ.
- ಕಂಪ್ಯೂಟರ್, ಹೊಲಿಗೆ ಮುಂತಾದ ತರಬೇತಿ ಕೇಂದ್ರಗಳಿಂದಾಗಿ ಸೇವಾಬಸ್ತಿಯ ಯುವತಿಯರು ಸ್ವಾವಲಂಬಿಗಳಾಗಿದ್ದಾರೆ. ಅನೇಕರು ಸ್ವಂತ ಅಂಗಡಿಗಳನ್ನೂ ನಡೆಸುತ್ತಿದ್ದಾರೆ.
- ಸೇವಾಬಸ್ತಿಯಲ್ಲಿ ಭಾರತೀಯ ಮೌಲ್ಯಗಳ ಜಾಗೃತಿ ಹಾಗೂ ಧಾರ್ಮಿಕ–ಹಿಂದುತ್ವ ವಿಚಾರಗಳಿಗೆ ಪ್ರಾಧಾನ್ಯ ಮೂಡುತ್ತಿದೆ. ಸಾಮಾಜಿಕ ಸಾಮರಸ್ಯ ಮೂಡುತ್ತಿದೆ.
- ಸೇವಾಬಸ್ತಿಯ ಅನೇಕ ಪ್ರಮುಖರು ಹಿರಿಯರು ಪ್ರಕಲ್ಪದ ವಿವಿಧ ಚಟುವಟಿಕೆಗಳೊಂದಿಗೆ ಜೋಡಿಸಿಕೊಂಡಿದ್ದಾರೆ.

# ನಂದಗೋಕುಲ



ತಂದೆ/ತಾಯಿಯರ ಪಾಲನೆ–ಪೋಷಣೆಯಿಂದ ವಂಚಿತರಾದ ಮಕ್ಕಳಿಗೆ ಆಶ್ರಯ ನೀಡುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್ 'ನಂದಗೋಕುಲ'ಗಳನ್ನು ನಡೆಸುತ್ತಿದೆ.

ನಾಗರಬಾವಿ ಮತ್ತು ಕಾಮಾಕ್ಷಿಪಾಳ್ಯದ ರಾಷ್ಟ್ರೋತ್ಥಾನ ಶಿಶುಮಂದಿರ – ಎರಡು ಕಡೆಗಳಲ್ಲಿ ನಂದಗೋಕುಲದ ಚಟುವಟಿಕೆಗಳು ನಡೆಯುತ್ತಿದ್ದು ಒಟ್ಟು 32 ಮಕ್ಕಳು ಆಶ್ರಯ ಪಡೆದಿದ್ದಾರೆ. ಈ ಮಕ್ಕಳಿಗೆ ಊಟ, ವಸತಿ ಹಾಗೂ ಶಾಲಾ ಶಿಕ್ಷಣದ ಜೊತೆಗೆ ಅವರ ಸರ್ವತೋಮುಖ ವಿಕಾಸಕ್ಕಾಗಿ ಹಲವು ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

## ಅ) ನಾಗರಬಾವಿಯ ನಂದಗೋಕುಲ

ದಿವಂಗತ ನಂದಕುಮಾರ್ ಅವರು ದಾನವಾಗಿ ನೀಡಿದ ನಾಗರಭಾವಿಯ ಜಾಗದಲ್ಲಿ 2007ರಲ್ಲಿ ನಂದಗೋಕುಲದ ಚಟುವಟಿಕೆಗಳು ಪ್ರಾರಂಭವಾಯಿತು. ಪ್ರಸ್ತುತ 14 ಮಕ್ಕಳು ಆಶ್ರಯ ಪಡೆದಿದ್ದಾರೆ.

**ನೂತನ ಕಟ್ಟಡದ ಉದ್ಘಾಟನೆ:** ಇದೇ ಸ್ಥಳದಲ್ಲಿ ನಂದಗೋಕುಲದ ನೂತನ ಕಟ್ಟಡ ನಿರ್ಮಾಣವಾಗಿದ್ದು, ಇದರ ಲೋಕಾರ್ಪಣ ಕಾರ್ಯಕ್ರಮ 2018ರ ಮೇ 12ರಂದು ನಡೆಯಿತು. ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಖಜಾಂಚಿ ಗಣಪತಿ ಹೆಗಡೆ, ಆಡಳಿತ ಮಂಡಳಿ ಸದಸ್ಯರಾದ ಕೆ.ಎಸ್. ನಾರಾಯಣ ಉಪಸ್ಥಿತರಿದ್ದರು.

## ಅ) ರಾಷ್ಟ್ರೋತ್ಥಾನ ಮಕ್ಕಳ ಮಂದಿರ

ಕಾಮಾಕ್ಷಿಪಾಳ್ಯದಲ್ಲಿರುವ 'ರಾಷ್ಟ್ರೋತ್ಥಾನ ಮಕ್ಕಳ ಮಂದಿರ'ದಲ್ಲಿ 18 ಮಕ್ಕಳು ಆಶ್ರಯ ಪಡೆದಿದ್ದಾರೆ. ಧಾರವಾಡ, ಚಾಮರಾಜನಗರ, ಮಂಡ್ಯ, ಗುಬ್ಬಿ, ದೊಡ್ಡಬಳ್ಳಾಪುರ, ಬೆಂಗಳೂರು – ಮುಂತಾದ ಸ್ಥಳಗಳ ಈ ಮಕ್ಕಳಿಗೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣ ವ್ಯವಸ್ಥೆ ಒದಗಿಸಲಾಗುತ್ತಿದೆ. ಮಕ್ಕಳ ವಿಕಾಸಕ್ಕಾಗಿ ಕಾಮಾಕ್ಷಿಪಾಳ್ಯದ ಅನೇಕರು ಹಿತೈಷಿಗಳಾಗಿ ಕೈಜೋಡಿಸಿದ್ದಾರೆ.

**ಆಪ್ತಸಲಹಾ ಕಾರ್ಯಕ್ರಮ:** ಮಕ್ಕಳಿಗೆ ಆತ್ಮವಿಶ್ವಾಸ ತುಂಬುವ ಸಲುವಾಗಿ ಅಕ್ಟೋಬರ್ 12ರಂದು ಆಪ್ತ ಸಲಹೆ ನೀಡುವ ಕಾರ್ಯಕ್ರಮ ನಡೆಯಿತು. ಡಾ॥ ವೈಜಯಂತಿ ಅವರು ಆಗಮಿಸಿ ಮಕ್ಕಳಿಗೆ ಮಾರ್ಗದರ್ಶನ ಮಾಡಿದರು.

## ಪ್ರತಿಭಾ ಪರೀಕ್ಷೆ

- ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ನಡೆಸುವ NMMS (National Means Cum-Merit Scholarship Scheme) & NTSE

(National Talent Search Examination) ಪರೀಕ್ಷೆಯನ್ನು ಕಾಮಾಕ್ಷಿಪಾಳ್ಯದ ನಂದಗೋಕುಲದ 7 ಮಕ್ಕಳು (8ನೇ ತರಗತಿಯ 3 ಮತ್ತು 10ನೇ ತರಗತಿಯ 4 ಮಕ್ಕಳು) ಬರೆದರು. ಇವರಿಗೆ ಬೇಸ್ ಸಂಸ್ಥೆಯಿಂದ ಅಗತ್ಯ ತರಬೇತಿ ನೀಡಲಾಯಿತು.

- ಸೈನ್ ಭಾಷೆಯಲ್ಲಿ ರಾಷ್ಟ್ರಗೀತೆಯನ್ನು ಹಾಡುವ ಸ್ಪರ್ಧೆಯಲ್ಲಿ ಕಾಮಾಕ್ಷಿಪಾಳ್ಯದ ರಾಷ್ಟ್ರೋತ್ಥಾನ ಮಕ್ಕಳ ಮಂದಿರದ ಮಕ್ಕಳು ಪ್ರಥಮ ಸ್ಥಾನ ಪಡೆದರು.

**ತರಬೇತಿ:** NIPCCD (National Institute of Public Co-operation and Child Development) ಸಂಸ್ಥೆ ನಡೆಸಿಕೊಟ್ಟ ಆಯ್ದ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರ 5 ದಿನಗಳ ತರಬೇತಿ ಶಿಬಿರದಲ್ಲಿ ಜಾಗರಣ ಪ್ರಕಲ್ಪದ ವೀರೇಶ್ ಮತ್ತು ಜೋಗೇಶ್ ಭಾಗವಹಿಸಿದರು. ದಕ್ಷಿಣ ಭಾರತದ ರಾಜ್ಯಗಳ ಪ್ರತಿನಿಧಿಗಳು ಈ ತರಬೇತಿಯಲ್ಲಿ ಭಾಗವಹಿಸಿದ್ದರು. ಮಕ್ಕಳಿಗೆ ಸಂಬಂಧಿಸಿದ ಹಲವಾರು ವಿಷಯಗಳ ಕುರಿತು ಮಾಹಿತಿ ನೀಡಿದರು.









## ಮಕ್ಕಳ ಮನೋವಿಕಾಸಕ್ಕಾಗಿ ನಡೆಸಿದ ಕಾರ್ಯಕ್ರಮಗಳು

- **ಗುರುವಂದನ:** ಮಕ್ಕಳಲ್ಲಿ ಗುರುಹಿರಿಯರ ಬಗೆಗೆ ಗೌರವ ಮೂಡಿಸುವ ದೃಷ್ಟಿಯಿಂದ ಗುರುಪೂರ್ಣಿಮೆಯಂದು ನಂದಗೋಕುಲದಲ್ಲಿ ಮಕ್ಕಳು ತಾವು ಓದುವ ಶಾಲೆಯ ಶಿಕ್ಷಕರಿಗೆ ವಂದನೆ ಸಲ್ಲಿಸುವ 'ಗುರುವಂದನ' ಕಾರ್ಯಕ್ರಮವನ್ನು ಆಯೋಜಿಸಲಾಯಿತು.
- ಮಕ್ಕಳಲ್ಲಿ ಸಾಮೂಹಿಕತೆ, ಸಾಮರಸ್ಯ, ಭಾರತೀಯ ಮೌಲ್ಯಗಳ ಜಾಗರಣೆಗಾಗಿ ರಕ್ಷಾಬಂಧನ, ಗಣೇಶೋತ್ಸವ, ದೀಪಾವಳಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ಕಳೆದ ಮೂರು ವರ್ಷಗಳಿಂದ ಬೆಂಗಳೂರಿನ ಖ್ಯಾತ ಸಾಫ್ಟ್‌ವೇರ್ ಇಂಜಿನಿಯರ್‌ಗಳ ತಂಡವು ನಂದಗೋಕುಲದ ಮಕ್ಕಳೊಂದಿಗೆ ದೀಪಾವಳಿ ಆಚರಿಸಿಕೊಳ್ಳುತ್ತಿದೆ. ಆ ತಂಡದವರು ನಂದಗೋಕುಲದಲ್ಲಿ ದೀಪ ಬೆಳಗಿಸಿ ಪಟಾಕಿ ಹೊಡೆದು ಸಂಭ್ರಮಿಸಿದರು.



# ಆರೋಗ್ಯಸೇವಾ ಕೇಂದ್ರ

## ರಾಷ್ಟ್ರೋತ್ಥಾನ ರಕ್ತಕೇಂದ್ರ

ರಕ್ತದ ಅಗತ್ಯ ಇರುವವರಿಗೆ ಸಮಯಕ್ಕೆ ಸರಿಯಾಗಿ ರಕ್ತ ಸಿಗಬೇಕು ಮತ್ತು ಯಾವುದೇ ವ್ಯಕ್ತಿ ಬರಿಗೈಯಲ್ಲಿ ಹಿಂದಿರುಗಬಾರದು ಎಂಬ ಸಾಮಾಜಿಕ ಕಳಕಳಿಯಿಂದ ರಾಷ್ಟ್ರೋತ್ಥಾನ ರಕ್ತಕೇಂದ್ರ ಮೇ 30, 1993ರಂದು ಆರಂಭವಾಯಿತು.

## ಅ) ರಾಷ್ಟ್ರೋತ್ಥಾನ ರಕ್ತಕೇಂದ್ರ

### ವಿಶೇಷತೆಗಳು

ಸಾಮಾಜಿಕ ಕಳಕಳಿಯುಳ್ಳ ಸ್ವಯಂಸೇವಾ ಸಂಸ್ಥೆಗಳು, ಕಂಪೆನಿಗಳು ಹಾಗೂ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ರಾಜ್ಯದ ವಿವಿಧೆಡೆಗಲ್ಲಿ ಸ್ವಯಂಪ್ರೇರಿತ ರಕ್ತದಾನಗಳನ್ನು ನಡೆಸಿ ರಕ್ತವನ್ನು ಸಂಗ್ರಹಿಸಲಾಗುತ್ತಿದೆ.

ಸುಸಜ್ಜಿತ ವಾಹನ, ಸಲಕರಣೆಗಳು ಸೇರಿದಂತೆ ರಕ್ತದಾನ ಶಿಬಿರ ನಡೆಸಲು ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ರಕ್ತಕೇಂದ್ರ ಹೊಂದಿದೆ. ಈಗಾಗಲೇ ಏಕಕಾಲದಲ್ಲಿ ದಿನಕ್ಕೆ 5 ಕಡೆ ಶಿಬಿರ ನಡೆಸಲಾಗಿದೆ.

ರಕ್ತಕೇಂದ್ರವು 24X7 ಗಂಟೆಗಳ ಕಾರ್ಯನಿರ್ವಹಿಸುತ್ತಿದೆ. ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ ಆಧುನಿಕ ತಂತ್ರಜ್ಞಾನಗಳನ್ನು {SDP (Single Donor Platelets), CLIA, Automated Blood Grouping and Crossmatching} ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಮೆ ಶುಲ್ಕದಲ್ಲಿ ಮತ್ತು ಕೆಲ ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯ ಮೂಲಕ ರಾಜ್ಯಾದ್ಯಂತ ಗುರುತಿಸಿಕೊಂಡಿದೆ.

ಜನರ ನೋವಿಗೆ ದನಿಯಾಗುವ ರಾಷ್ಟ್ರೋತ್ಥಾನ ರಕ್ತಕೇಂದ್ರದ ಚಟುವಟಿಕೆಗಳನ್ನು ಗುರುತಿಸಿದ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ರಕ್ತಚಾಲನಾ ಪರಿಷತ್ 2011–12ನೇ ಸಾಲಿನ ಕರ್ನಾಟಕದ ಅತ್ಯುತ್ತಮ ರಕ್ತನಿಧಿ (Best Blood Bank in Karnataka) ಎಂದು ಪ್ರಮಾಣಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಿದೆ.

ಹೀಗೆ ಸೇವೆಯ ಪಥದಲ್ಲಿ ಮುನ್ನಡೆದುಕೊಂಡು ಬರುತ್ತಿರುವ ರಕ್ತಕೇಂದ್ರವು ಈವರೆಗೆ (ಮಾರ್ಚ್ 31, 2019) 4,193 ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸಿದೆ. 3,72,892 ರಕ್ತದಾನಿಗಳಿಂದ ರಕ್ತ ಸಂಗ್ರಹಿಸಿ, 2,83,806 ರೋಗಿಗಳಿಗೆ (7,12,404 ಯೂನಿಟ್) ರಕ್ತ ಪೂರೈಸಲಾಗಿದೆ.

## 2018–19ನೇ ಸಾಲಿನ ವಿವರ

ಈ ವರ್ಷ ರಾಜ್ಯದ 8 ಜಿಲ್ಲೆಗಳಲ್ಲಿ ಒಟ್ಟು 342 ರಕ್ತದಾನ ಶಿಬಿರಗಳನ್ನು ನಡೆಸಲಾಗಿದೆ.

- ಸ್ವಯಂಸೇವಾ ಸಂಸ್ಥೆಗಳು – 136
- ಸಾಫ್ಟ್‌ವೇರ್ ಕಂಪನಿಗಳು – 85
- ಶಾಲೆಗಳು – 69
- ಕಂಪನಿಗಳು – 52

ರಕ್ತದಾನಿಗಳು – 31,217
ರಕ್ತದ ಯುನಿಟ್ಸ್ – 70,665
ಫಲಾನುಭವಿಗಳು – 23,358

## ಆಸರೆ

- ಜೀವಮಾನವಿಡೀ ನಿರಂತರ ರಕ್ತಪೂರಣದ ಆವಶ್ಯಕತೆ ಇರುವ ತಲಸ್ಸೆಮಿಯಾದಿಂದ ಬಳಲುತ್ತಿರುವ 450 ಮಕ್ಕಳಿಗೆ 15 ರಿಂದ 20 ದಿನಗಳಿಗೊಮ್ಮೆ ನಿರಂತರ ನಿಶ್ಶುಲ್ಕವಾಗಿ ರಕ್ತವನ್ನು ನೀಡಲಾಗುತ್ತಿದೆ.
- ವಿವಿಧ ಆಸ್ಪತ್ರೆಗಳಲ್ಲಿ ಡಯಾಲಿಸಿಸ್‌ಗೆ ಒಳಪಡುತ್ತಿರುವ ಆರ್ಥಿಕವಾಗಿ ಹಿಂದುಳಿದ 153 ರೋಗಿಗಳು ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ. ಇವರಿಗೆ ನಿರಂತರವಾಗಿ ಅತ್ಯಂತ ಕಡಮೆ (ಸಂಸ್ಕರಣ ಶುಲ್ಕದಲ್ಲಿ ರಿಯಾಯಿತಿ) ಬೆಲೆಯಲ್ಲಿ ರಕ್ತವನ್ನು ನೀಡಲಾಗುತ್ತಿದೆ.



ಕರ್ನಾಟಕ ರಾಜ್ಯ ಡ್ರಗ್ ಕಂಟ್ರೋಲರ್ ಇಲಾಖೆಯ ಹೆಚ್ಚುವರಿ ಔಷಧ ನಿಯಂತ್ರಕರಾದ ಅಮರೇಶ್ ತುಂಬಗಿ ಅವರು ರಾಷ್ಟ್ರೋತ್ಥಾನ ರಕ್ತಕೇಂದ್ರಕ್ಕೆ ಲೈಸನ್ಸ್ ವಿತರಿಸಿದರು.

- ನಮ್ಮ ಫಲಾನುಭವಿಗಳಲ್ಲಿ ಸುಮಾರು 45% ಸರ್ಕಾರಿ ಆಸ್ಪತ್ರೆಯಿಂದ ಬರುವ ರೋಗಿಗಳು. (ಬಹುಶಃ ಈ ಪ್ರಮಾಣದಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ರಕ್ತ ವಿತರಿಸುವ ರಕ್ತಕೇಂದ್ರ ಇನ್ನೊಂದಿರಲಾರದು.) ಇವರಿಗೆ ವಿಶೇಷ ರಿಯಾಯಿತಿ ದರದಲ್ಲಿ ರಕ್ತವನ್ನು ಒದಗಿಸಲಾಗುತ್ತಿದೆ.

## ಉಲ್ಲೇಖನೀಯ

- ಹಲವು ಸ್ವಯಂಸೇವಾ ಸಂಸ್ಥೆಗಳು, ಕಂಪೆನಿಗಳು ಹಾಗೂ ಶಾಲಾ ಕಾಲೇಜುಗಳಲ್ಲಿ 10ಕ್ಕೂ ಹೆಚ್ಚು ವರ್ಷಗಳಿಂದ ನಿರಂತರ ರಕ್ತದಾನ ಶಿಬಿರಗಳನ್ನು ನಡೆಸಲಾಗುತ್ತಿದೆ. ಸಿಸ್ಕೋ, ಇನ್ಫೋಸಿಸ್ ಸೇರಿದಂತೆ ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ರಕ್ತದಾನ ಶಿಬಿರಗಳನ್ನು ನಡೆಸಲಾಗುತ್ತಿದೆ. ಸಂಕಲ್ಪ ಇಂಡಿಯಾ ಫೌಂಡೇಷನ್‌ನ ಸಹಕಾರದಿಂದ ಈ ವರ್ಷ 94 ರಕ್ತದಾನ ಶಿಬಿರಗಳನ್ನು ನಡೆಸಲಾಯಿತು.
- ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ 2015ರಲ್ಲಿ ಸುಸಜ್ಜಿತ ಸುರಕ್ಷಿತ ಪ್ಲೇಟ್‌ಲೆಟ್ ಫೆರೆಸಿಸ್ ಯಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 2369 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ. ಈ ವರ್ಷ 238 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.
- ಬೆಂಗಳೂರಿನ ಸಿಸ್ಕೋ ಕಂಪೆನಿಯಲ್ಲಿ ಈ ವರ್ಷ 2 ಬಾರಿ ರಕ್ತದಾನ ಶಿಬಿರ ನಡೆದಿದ್ದು, 1128 ಮತ್ತು 990 ಮಂದಿ ರಕ್ತದಾನ ಮಾಡಿದರು.

- ಫಲಾನುಭವಿಗಳು ಹಾಗೂ ಶಿಬಿರ ಸಂಯೋಜಕರು ರಕ್ತಕೇಂದ್ರದ ಸಿಬ್ಬಂದಿಯ ಸಹಕಾರ ಹಾಗೂ ರಕ್ತದ ಗುಣ2ಮಟ್ಟದ ಬಗ್ಗೆ ಬಹಳ ಪ್ರಶಂಸೆಯ ಮಾತುಗಳನ್ನಾಡುತ್ತಿದ್ದಾರೆ.

**ಅಭ್ಯಾಸ ವರ್ಗಗಳು:** ರಕ್ತನಿಧಿಯ ಸಿಬ್ಬಂದಿಗಳ ತಾಂತ್ರಿಕ ಹಾಗೂ ಸೇವಾ ಗುಣಮಟ್ಟವನ್ನು ವೃದ್ಧಿಸುವ, ಕಾರ್ಯಕ್ಷಮತೆ ಹಾಗೂ ವೈಚಾರಿಕ ಬದ್ಧತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕಳೆದ 7 ವರ್ಷಗಳಿಂದ (ಆಗಸ್ಟ್ 2013) ತಿಂಗಳಿಗೊಮ್ಮೆ ಅಭ್ಯಾಸ ವರ್ಗವನ್ನು ನಡೆಸಲಾಗುತ್ತಿದೆ.

**ನೂತನ ಭವನ ಲೋಕಾರ್ಪಣೆ:** ರಾಷ್ಟ್ರೋತ್ಥಾನ ರಕ್ತ ಕೇಂದ್ರದ ಚಟುವಟಿಕೆಯನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಬೆಂಗಳೂರಿನ ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದ ಸಮೀಪದಲ್ಲಿ ನೂತನ ಭವನ 'ಶ್ರೀಮತಿ ಸುಭದ್ರಾಬೆನ್ ಜಯಂತಿಲಾಲ್ ನಗರದಾಸ್ ಷಾ ಭವನ'ವನ್ನು ನಿರ್ಮಿಸಲಾಗಿದೆ. ಈ ಭವನವನ್ನು ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು 2019ರ ಏಪ್ರಿಲ್ 2ರಂದು ಲೋಕಾರ್ಪಣೆಗೊಳಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಚಾಲಕರಾದ ವಿ. ನಾಗರಾಜ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾದ ಎಸ್.ಆರ್. ರಾಮಸ್ವಾಮಿ, ದಾನಿಗಳಾದ ಜಯಂತಿಲಾಲ್ ನಗರದಾಸ್ ಷಾ ಉಪಸ್ಥಿತರಿದ್ದರು.



ರಾಷ್ಟ್ರಭಕ್ತಿ, ರಾಷ್ಟ್ರೀಯ ಭಾವನೆ, ಭಾರತೀಯ ಸಂಸ್ಕಾರಗಳ ಪುನರ್‌ಜಾಗೃತಿ ಮೂಡಿಸುವಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಕೊಡುಗೆ ಅಪಾರವಾದುದು. ಇಂದು ರಾಷ್ಟ್ರೋತ್ಥಾನವು ದೊಡ್ಡ ವಿಶಾಲ ಮರದಂತೆ ಬೆಳೆದು ನಿಂತಿದೆ. ಸಾವಿರಾರು ಜನರು ಇದರಿಂದ ನೆರಳನ್ನು ಪಡೆಯುತ್ತಿದ್ದಾರೆ. ಖಾಸಗಿಯಾಗಿ ಸ್ವಂತ ಬಲದಿಂದ ವಿವಿಧ ಚಟುವಟಿಕೆಗಳನ್ನು ನಡೆಯುತ್ತಿರುವ ರಾಷ್ಟ್ರೋತ್ಥಾನ ಪರಿಷತ್ ದೇಶದಲ್ಲಿಯೇ ಒಂದು ರೀತಿಯ stand alone ಸಂಸ್ಥೆಯಾಗಿದೆ.

— **ಸಿದ್ಧಲಿಂಗ ಮಹಾಸ್ವಾಮಿಗಳು**, ಸಿದ್ಧಗಂಗಾ ಮಠ, ತುಮಕೂರು



**ಆರೆಸ್ಸೆಸ್‌ನ ಪೂಜ್ಯ ಸರಸಂಘಚಾಲಕರ ಭೇಟಿ:** ನೂತನ ಕಟ್ಟಡಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮೋಹನ್ ಭಾಗವತ್ ಅವರು 2019ರ ಮಾರ್ಚ್ 16ರಂದು ಭೇಟಿ ನೀಡಿ, ವ್ಯವಸ್ಥೆಗಳನ್ನು ವೀಕ್ಷಿಸಿ, ಕಾರ್ಯಕರ್ತರಿಗೆ ಮಾರ್ಗದರ್ಶನ ಮಾಡಿದರು. ಪೂಜ್ಯ ಸರಕಾರ್ಯವಾಹರಾದ ಸುರೇಶ್ ಭಯ್ಯಾಜಿ ಜೋಶಿ, ಸಹ ಸರಕಾರ್ಯವಾಹ ಮುಕುಂದ್ ಸಿ.ಆರ್. ಮತ್ತು ದಕ್ಷಿಣ ಮಧ್ಯ ಕ್ಷೇತ್ರೀಯ ಹಾಗೂ ಕರ್ನಾಟಕ ದಕ್ಷಿಣ ಪ್ರಾಂತದ ಹಲವು ಆರೆಸ್ಸೆಸ್ ಪ್ರಮುಖರು ಉಪಸ್ಥಿತರಿದ್ದರು.



## ಶಾ ದಾಮಜಿ ಜಾದವಜಿ ಛೇಡ ಮೆಮೋರಿಯಲ್ ರಾಷ್ಟ್ರೋತ್ಥಾನ ರಕ್ತನಿಧಿ, ಹುಬ್ಬಳ್ಳಿ

ಉತ್ತರ ಕರ್ನಾಟಕ ಭಾಗದ ಜನರಿಗೆ ನೆರವಾಗುವ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ ಜೂನ್ 2010ರಲ್ಲಿ ಶಾ ದಾಮಜಿ ಜಾದವಜಿ ಛೇಡ ಅವರ ಕಟ್ಟಡದಲ್ಲಿ ರಾಷ್ಟ್ರೋತ್ಥಾನ ರಕ್ತನಿಧಿಯನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಇನ್ಫೋಸಿಸ್ ಫೌಂಡೇಷನ್ ಸಹಕಾರದೊಂದಿಗೆ ರಕ್ತನಿಧಿ ಕಾರ್ಯನಿರ್ವಹಿಸುತ್ತಿದೆ.

- ಸುಸಜ್ಜಿತ ವಾಹನ, ಸಲಕರಣೆಗಳು ಸೇರಿದಂತೆ ರಕ್ತದಾನ ಶಿಬಿರ ನಡೆಸಲು ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ರಕ್ತನಿಧಿ ಹೊಂದಿದೆ.
- ರಕ್ತನಿಧಿಯು 24x7 ಗಂಟೆಗಳ ಕಾರ್ಯನಿರ್ವಹಿಸುತ್ತಿದೆ. ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ ಆಧುನಿಕ ತಂತ್ರಜ್ಞಾನಗಳನ್ನು (SDP, CLIA, Automated Blood Grouping and Crossmatching) ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.
- ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಿಮೆ ಶುಲ್ಕದಲ್ಲಿ ಮತ್ತು ಕೆಲ ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ.



**ಅಂಕಿಅಂಶ:** ರಕ್ತನಿಧಿಯ ವತಿಯಿಂದ 2018–19ನೇ ಸಾಲಿನಲ್ಲಿ ಒಟ್ಟು 104 ರಕ್ತದಾನ ಶಿಬಿರಗಳನ್ನು ನಡೆಸಲಾಗಿದ್ದು, 5406 ಮಂದಿ ರಕ್ತದಾನ ಮಾಡಿದರು. 9266 ಯುನಿಟ್ ರಕ್ತಸಂಗ್ರಹಿಸಿ 5548 ಫಲಾನುಭವಿಗಳಿಗೆ ವಿತರಿಸಲಾಗಿದೆ.

**ಜನಜಾಗೃತಿ ಕಾರ್ಯಕ್ರಮ:** ರಕ್ತದಾನದ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಜೂನ್ 14ರಂದು ಜನಜಾಗೃತಿ ನಡಿಗೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕೆ.ಎಲ್.ಇ. ಯ ನಿರ್ದೇಶಕರಾದ ಶಂಕರ್ ಎ. ಮುನವಳ್ಳಿ, ಹುಬ್ಬಳ್ಳಿ–ಧಾರವಾಢ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ತನುಜಾ ಕೆ.ಎನ್., ಹು–ಧಾ ಜಿಲ್ಲಾ ಸಹಾಯಕ ಔಷಧ ನಿಯಂತ್ರಕರಾದ ಕೆ.ಎಸ್. ಮಲ್ಲಿಕಾರ್ಜುನ್, ಹು–ಧಾ ಮಹಾನಗರ ಪಾಲಿಕೆಯ ಮಹಾಪೌರರಾದ ಸುಧೀರ್ ಸರಾಫ್ ಮುಂತಾದವರು ನಡಿಗೆಯಲ್ಲಿ ಭಾಗವಹಿಸಿದರು. ಧಾರವಾಡ ಹುಬ್ಬಳ್ಳಿಯ ಶಾಲಾಕಾಲೇಜು ಮತ್ತು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 800 ವಿದ್ಯಾರ್ಥಿಗಳು ಭಾಗವಹಿಸಿದರು.

## ಆ) 'ಸಂರಕ್ಷಾ'–ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರ

ಮಕ್ಕಳಲ್ಲಿ ಹುಟ್ಟುವಾಗಲೇ ಇರುವ ಆನುವಂಶಿಕ ನ್ಯೂನತೆಯಾದ ತಲೆಸ್ಸೆಮಿಯಾ ಬಾಧಿತ ಮಗುವಿನ ದೇಹದಲ್ಲಿ ಹಿಮೋಗ್ಲೋಬಿನ್‌ಯುಕ್ತ ಗುಣಮಟ್ಟದ ರಕ್ತದ ಉತ್ಪತ್ತಿಯಾಗುವುದಿಲ್ಲ. ಇಂತಹ ಮಕ್ಕಳು ಉಲ್ಲಾಸದಿಂದಿರಲು ನಿರಂತರ ರಕ್ತಪೂರಣ (Blood Transfusion) ಅನಿವಾರ್ಯ. ಈ ನ್ಯೂನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಹಾಗೂ ಕುಟುಂಬಕ್ಕೆ ನೆರವಾಗುವ ಉದ್ದೇಶದಿಂದ 'ಸಂಕಲ್ಪ ಇಂಡಿಯಾ ಫೌಂಡೇಶನ್'ನ ಸಹಕಾರದೊಂದಿಗೆ 2013ರಲ್ಲಿ 'ಸಂರಕ್ಷಾ' –ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರವನ್ನು ತೆರೆಯಲಾಗಿದೆ.

- ಮಕ್ಕಳಿಗೆ ತಪಾಸಣೆಗೆ ಒಳಪಟ್ಟ ಗುಣಮಟ್ಟದ ರಕ್ತವನ್ನು ನೀಡಲಾಗುತ್ತಿದೆ.
- ರಕ್ತತಪಾಸಣೆ, ರಕ್ತಪೂರಣ ಮಾಡುವುದಲ್ಲದೇ ಫೋಲಿಕ್ ಆ್ಯಸಿಡ್, ಕ್ಯಾಲ್ಸಿಯಂ, ಬಿ–ಕಾಂಪ್ಲೆಕ್ಸ್ ಮತ್ತು ಮಲ್ಟಿ–ವಿಟಮಿನ್ ಮುಂತಾದ ಅಗತ್ಯ ಔಷಧಗಳನ್ನು ಅವರ ಆರ್ಥಿಕ ಸ್ಥಿತಿಗತಿಯನ್ನು ಗಮನಿಸದೆ ಎಲ್ಲರಿಗೂ ಉಚಿತವಾಗಿ ನೀಡಲಾಗುತ್ತಿದೆ.
- ಪ್ರತಿ ಶನಿವಾರ Hydroxyurea Clinic ಮತ್ತು Pretransplant clinicಗಳನ್ನು ನಡೆಸಲಾಗುತ್ತಿದೆ. ಈ ಕ್ಲಿನಿಕ್‌ನಲ್ಲಿ ತಲಸ್ಸೆಮಿಯಾ ಮೇಜರ್ ರೋಗಿಗಳನ್ನು ಗುರುತಿಸಿ ಅವರಿಗೆ Hydroxyurea ಎಂಬ ಔಷಧಿಯನ್ನು ಉಚಿತವಾಗಿ ನೀಡಲಾಗುತ್ತದೆ.

- ಹೃದಯ ಸಂಬಂಧಿ ಸಮಸ್ಯೆ ಇರುವ ಮಕ್ಕಳಲ್ಲಿ ಹಿಮೊಗ್ಲೊಬಿನ್ ಪ್ರಮಾಣವನ್ನು 10–11 gm/dlನಲ್ಲಿ ಕಾಪಾಡಿಕೊಳ್ಳುವುದು ಅತ್ಯಗತ್ಯ. ಇದಕ್ಕಾಗಿ ಅಂತಹ ಮಕ್ಕಳಿಗಾಗಿ ಪ್ರತೀ ಬುಧವಾರ ಸೂಪರ್–ಟ್ರಾನ್ಸ್‌ಫ್ಯೂಷನ್ ನಡೆಸಲಾಗುತ್ತಿದೆ. ಪ್ರಸ್ತುತ 6 ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ
- ನಿರಂತರ ರಕ್ತಪೂರಣದಿಂದ ಕೆಲವು ಮಕ್ಕಳ ರಕ್ತದಲ್ಲಿ ಕಬ್ಬಿಣದ ಅಂಶ ಹೆಚ್ಚಾಗುತ್ತದೆ. ಇದನ್ನು ಹೋಗಲಾಡಿಸಲು ಮಕ್ಕಳಿಗೆ ನಿರಂತರವಾಗಿ Desferal ಇಂಜೆಕ್ಷನ್ ನೀಡಲಾಗುತ್ತಿದೆ. ಪ್ರಸ್ತುತ 13 ಮಕ್ಕಳಿಗೆ ಈ ಇಂಜೆಕ್ಷನ್ ನೀಡಲಾಗುತ್ತಿದೆ.
- ತಲಸ್ಸೆಮಿಯಾ ಪೀಡಿತ ಮಕ್ಕಳಿಗೆ ಮಾತ್ರವಲ್ಲದೇ ಸಂಪೂರ್ಣ ಕುಟುಂಬಕ್ಕೆ ನಿರಂತರವಾಗಿ ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ.

**ಫಲಾನುಭವಿಗಳು:** ಪ್ರಸ್ತುತ 406 ಮಕ್ಕಳು ಸಂರಕ್ಷಾದಲ್ಲಿ ಆರೈಕೆ ಪಡೆಯುತ್ತಿದ್ದಾರೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ 30 ಜಿಲ್ಲೆಗಳು ಹಾಗೂ ಪಶ್ಚಿಮಬಂಗಾಳ, ಒರಿಸ್ಸಾ, ಬಿಹಾರ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಸೇರಿದಂತೆ 8 ರಾಜ್ಯಗಳಿಂದ ತಲಸ್ಸೆಮಿಯಾ ಪೀಡಿತರು ಆರೈಕೆಗಾಗಿ 'ಸಂರಕ್ಷಾ'ಕ್ಕೆ ಬರುತ್ತಿದ್ದಾರೆ.

## ಈ ವರ್ಷದ ಅಂಕಿ–ಅಂಶ

| | |
|---|---|
| ಆರೈಕೆ ಪಡೆಯುತ್ತಿರುವ ಮಕ್ಕಳು | 406 |
| ಹೊಸದಾಗಿ ನೋಂದಾಯಿತ ಮಕ್ಕಳು | 104 |
| ಈ ಮಕ್ಕಳಿಗೆ ನೀಡಲಾದ ಒಟ್ಟು ರಕ್ತದ ಯುನಿಟ್ | 6,741 |

## ಉಪಲಬ್ಧಿ

- ಸಂರಕ್ಷಾದಲ್ಲಿ ಶುಶ್ರೂಷೆ ಪಡೆಯುತ್ತಿರುವ ಬಹುತೇಕ ಎಲ್ಲ ಮಕ್ಕಳಲ್ಲಿ ಇದೀಗ ಆರೋಗ್ಯದಲ್ಲಿ ಸ್ಥಿರತೆ ಕಂಡುಬರುತ್ತಿವೆ. ಅವರ ಎತ್ತರ ಹಾಗೂ ತೂಕದಲ್ಲೂ ಸುಧಾರಣೆಯಾಗಿದೆ. ಗುಣಮಟ್ಟದ ಪರೀಕ್ಷಿತ ರಕ್ತವನ್ನು ನೀಡುತ್ತಿರುವುದರಿಂದ ಮಕ್ಕಳಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚಾಗಿದೆ.
- ಪರಿಣಾಮವಾಗಿ ಪಿತ್ತಕೋಶ (Liver) ಮತ್ತು ಗುಲ್ಮ (ಸ್ಪ್ಲೀನ್–Spleen)ಗಳ ಗಾತ್ರದಲ್ಲಿ ಸುಧಾರಣೆಯಾಗುತ್ತಿದೆ.
- ಉಚಿತವಾಗಿ Hydroxy Urea ಚಿಕಿತ್ಸೆ ನೀಡಲಾಗುತ್ತಿದ್ದು, ಇದರಿಂದ ರಕ್ತಪೂರಣದ ನಡುವಿನ ಅವಧಿಯು ಹೆಚ್ಚಿದೆ. ಇದರಿಂದ ಮಕ್ಕಳ ದೇಹದಲ್ಲಿ Iron Overload ಕಡಮೆಯಾಗಿ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿವೆ. 3 ತಲಸ್ಸೆಮಿಯಾ ಪೀಡಿತ ಮಕ್ಕಳು ಕಳೆದ 10 ತಿಂಗಳಿಂದ ರಕ್ತಪೂರಣ ಮಾಡಿಕೊಂಡಿಲ್ಲ. 4 ಮಕ್ಕಳು 3 ತಿಂಗಳಿಗೊಮ್ಮೆ ರಕ್ತಪೂರಣ ಮಾಡಿಸಿಕೊಳ್ಳುತ್ತಿದ್ದಾರೆ.

ಜೀವನ ನಡೆಸುವುದೇ ಕಷ್ಟವಾಗಿರುವ ನಮಗೆ ಸಾವಿರಾರು ರೂಪಾಯಿ ಖರ್ಚು ಮಾಡಿ ಚಿಕಿತ್ಸೆ ನೀಡುವ ಸಾಮರ್ಥ್ಯ ಇಲ್ಲ. ಉಚಿತ ಆರೈಕೆ ಕೇಂದ್ರ ಸ್ಥಾಪಿಸುವ ಮೂಲಕ ನಮಗೆ ನೆರವಾಗಿರುವ ರಾಷ್ಟ್ರೋತ್ಥಾನಕ್ಕೆ ಕೃತಜ್ಞತೆಗಳು. ಇಲ್ಲಿ ರಕ್ತವನ್ನು ಉಚಿತವಾಗಿ ನೀಡುವುದರ ಜೊತೆಗೆ ಬಹಳಷ್ಟು ಔಷಧಗಳನ್ನೂ ಉಚಿತವಾಗಿ ನೀಡುತ್ತಿದ್ದಾರೆ. ಇಷ್ಟು ಮಾತ್ರವಲ್ಲದೇ ಪ್ರೀತಿ–ಮಮತೆಯಿಂದ ಮಕ್ಕಳೊಂದಿಗೆ ಇರುತ್ತಾರೆ. ಇದು ಮಕ್ಕಳನ್ನು ಮಾನಸಿಕವಾಗಿ ಗಟ್ಟಿಗೊಳಿಸಿದೆ. ಮಕ್ಕಳ ಮುಖದಲ್ಲಿ ನಗು ಕಾಣುವಂತೆ ಮಾಡಿದೆ.

– ಫಲಾನುಭವಿ



- Sickle Cell ರೋಗಿಗಳಿಗೆ ಕೂಡ ಹೈಡ್ರಾಕ್ಸ್ ಯೂರಿಯಾ ನೀಡಲಾಗುತ್ತಿದೆ. ಅದರಿಂದ ಅವರು ನೋವಿಲ್ಲದೇ ಸಹಜ ಜೀವನವನ್ನು ನಡೆಸಲು ಸಾಧ್ಯವಾಗುತ್ತಿದೆ.
- ಪೋಷಕರು ತಮ್ಮ ಮಕ್ಕಳ ಬಗ್ಗೆ ಅಗತ್ಯ ಕಾಳಜಿ ವಹಿಸುತ್ತಿದ್ದಾರೆ. ಮಕ್ಕಳು ಶಾಲೆಗೆ ಹೋಗಲು ಆರಂಭಿಸಿದ್ದಾರೆ. ಶಾಲೆ ಮತ್ತು ಮನೆಯಲ್ಲಿ ಅವರ ಸಾಧನೆ-ನಡವಳಿಕೆಗಳು ಉತ್ತಮಗೊಂಡಿವೆ.

### ಕಾರ್ಯಾಗಾರ

ಮಕ್ಕಳಿಗೆ ಉತ್ಕೃಷ್ಟ ಪರಿಣಾಮಕಾರಿ ಸೇವೆ ಸಿಗುವಂತಾಗಬೇಕು ಎಂಬ ದೃಷ್ಟಿಯಿಂದ ವಿವಿಧ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ.

- ಬೆಂಗಳೂರಿನ ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋವ್ಯಾಸ್ಕುಲರ್ ಸಯನ್ಸ್ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ ಸಂರಕ್ಷಾದಲ್ಲಿ 2018ರ ಜೂನ್ ಮತ್ತು ನವೆಂಬರ್‌ನಲ್ಲಿ Echocardiagraphy Camp ಆಯೋಜಿಸಲಾಯಿತು. ಹತ್ತು ಮತ್ತು ಅಧಿಕ ವರ್ಷದ ತಲಸ್ಸೆಮಿಯಾ ಪೀಡಿತರಿಗಾಗಿ ಈ ಶಿಬಿರ ನಡೆಯಿತು. 2019ರ ಮಾರ್ಚ್‌ನಲ್ಲಿ ಸಂರಕ್ಷಾದಲ್ಲಿ ನಡೆದ ಶಿಬಿರದಲ್ಲಿ ಸಂರಕ್ಷಾ ಮಾತ್ರವಲ್ಲದೇ ಬೆಂಗಳೂರಿನ ಐಜಿಐಸಿಎಚ್ (Indira Gandhi Institute of Child Health), ಬೆಳಗಾವಿಯ ಕೆಎಲ್ಇ ಮತ್ತು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆ ಸೇರಿದಂತೆ ತಲಸ್ಸೆಮಿಯಾ ಪೀಡಿತ ಮಕ್ಕಳು ಭಾಗವಹಿಸಿದರು. ಪ್ರತೀ ಶಿಬಿರದಲ್ಲಿ 100ಕ್ಕೂ ಅಧಿಕ ಮಕ್ಕಳು ಭಾಗವಹಿಸಿದರು.
- 2018ರ ಮೇನಲ್ಲಿ ಬೆಂಗಳೂರಿನ ಪ್ರತಿಷ್ಠಿತ ಸಿಟ್ರಿನ್ ಹೋಟೆಲ್‌ನಲ್ಲಿ ನಡೆದ ಎರಡು ದಿನಗಳ ತಲಸ್ಸೆಮಿಯಾ ಕಾರ್ಯಾಗಾರದಲ್ಲಿ ತಲಸ್ಸೆಮಿಯಾ ನಿರ್ವಹಣೆಯ ಮೂಲಭೂತ ಮತ್ತು ಮಹತ್ತ್ವದ ಅಂಶಗಳ ಕುರಿತು ಚರ್ಚೆ ನಡೆಸಲಾಯಿತು.

## ಇ) ಅಗ್ನಿವೇಶ ಆಯುರ್ವೇದ ಅನುಷ್ಠಾನ

ಆರೋಗ್ಯ ಸಂರಕ್ಷಣೆಗಾಗಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಯುರ್ವೇದ ಪದ್ಧತಿ ಚಾಲ್ತಿಯಲ್ಲಿತ್ತು. ಯಾವುದೇ ಬಾಹ್ಯ ತೊಂದರೆಗಳಿಲ್ಲದೆ ರೋಗವನ್ನು ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ಗುಣಪಡಿಸಬಲ್ಲ ಮತ್ತು ಆರೋಗ್ಯಸ್ಥಿತಿಯನ್ನು ಸ್ಥಿರವಾಗಿ ಕಾಪಾಡಬಲ್ಲ ಚಿಕಿತ್ಸಾ ಕ್ರಮ ಆಯುರ್ವೇದ ಪದ್ಧತಿಯದ್ದು. ತಾತ್ಕಾಲಿಕ ಪರಿಹಾರವನ್ನೇ ನೆಚ್ಚಿಕೊಂಡಿರುವ ಜನಸಾಮಾನ್ಯರ ಮನಃಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಇಂದು ಆಯುರ್ವೇದ ವೈದ್ಯರು ಇನ್ನಿತರ ವೈದ್ಯಕೀಯ ಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಹೀಗಾಗಿ ಆಯುರ್ವೇದ ವೈದ್ಯರನ್ನು ಸಂಘಟಿಸಿ, ಅವರಲ್ಲಿ ವಿಶ್ವಾಸ ತುಂಬುವ ಸಲುವಾಗಿ ಹಾಗೂ ಆಯುರ್ವೇದದ ವಿವಿಧ ಮಜಲುಗಳನ್ನು ಪರಿಚಯಿಸುವ ಮತ್ತು ಅನೇಕ ಸಮಸ್ಯೆಗಳಿಗೆ ಆಯುರ್ವೇದದ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಹಂಚಿಕೊಳ್ಳುವ ಸಲುವಾಗಿ ಅಗ್ನಿವೇಶ ಆಯುರ್ವೇದ ಅನುಷ್ಠಾನ ಪ್ರಾರಂಭವಾಯಿತು.

ಅಗ್ನಿವೇಶ ಆಯುರ್ವೇದ ಅನುಷ್ಠಾನವು ರಾಷ್ಟ್ರೋತ್ಥಾನ ಆರೋಗ್ಯ ಸೇವಾ ಕೇಂದ್ರದ ಚಟುವಟಿಕೆಯಾಗಿದ್ದು ಕಳೆದ 27 ವರ್ಷಗಳಿಂದ ಆಯುರ್ವೇದ ವೈದ್ಯರ ನಡುವೆ ಕೆಲಸ ನಿರ್ವಹಿಸುತ್ತಿದೆ.

**ಸದಸ್ಯರು:** ಬಳ್ಳಾರಿ, ಹಾವೇರಿ, ತುಮಕೂರು, ಬೆಳಗಾವಿ, ಗದಗ, ಬಾಗಲಕೋಟೆ, ಕಲಬುರಗಿ, ಚಿತ್ರದುರ್ಗ, ಮೈಸೂರು ಹಾಗೂ ಬೆಂಗಳೂರು ಸೇರಿದಂತೆ ರಾಜ್ಯದ 16 ಜಿಲ್ಲೆಗಳ ಮತ್ತು ಆಂಧ್ರ ಪ್ರದೇಶ ಹಾಗೂ ಅಮೆರಿಕದ ಆಯುರ್ವೇದ ವೈದ್ಯರು ಅಗ್ನಿವೇಶದ ಸದಸ್ಯತ್ವ ಹೊಂದಿದ್ದಾರೆ. ಪ್ರಸ್ತುತ ಒಟ್ಟು 403 ಆಯುರ್ವೇದ ವೈದ್ಯರು ಸದಸ್ಯತ್ವ ಹೊಂದಿದ್ದಾರೆ.

**ಸದಸ್ಯ ವೈದ್ಯರಿಗಾಗಿ:** ಆಯುರ್ವೇದ ಪದ್ಧತಿಯನ್ನು ಪರಿಣಾಮಕಾರಿಯಾಗಿಸಲು ಹಾಗೂ ಎದುರಾಗುವ ಗೊಂದಲ-ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಆಯುರ್ವೇದ ವೈದ್ಯರಿಗಾಗಿ ವಿವಿಧ ಆಯುರ್ವೇದ ಔಷಧ ಕಂಪೆನಿಗಳ ಸಹಯೋಗಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

- ತಿಂಗಳಿಗೊಮ್ಮೆ ವಿಶಿಷ್ಟ ವಿಷಯಗಳ ಕುರಿತು ಉಪನ್ಯಾಸ–ಸಂವಾದ ಕಾರ್ಯಕ್ರಮಗಳನ್ನು (ಮಾಸಿಕ ನಿರಂತರ ವೈದ್ಯಕೀಯ ಶಿಕ್ಷಣ – ಸಿ.ಎಂ.ಇ.) ನಡೆಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ದೇಶ ಹಾಗೂ ರಾಜ್ಯದ ಪ್ರತಿಷ್ಠಿತ ಆಯುರ್ವೇದ ವೈದ್ಯರು ಆಗಮಿಸಿ ಮಾರ್ಗದರ್ಶನ ಮಾಡುತ್ತಾರೆ. ಈ ವರ್ಷ ಕೇರಳದ ಕಣ್ಣೂರಿನ ಸರ್ಕಾರಿ ಆಯುರ್ವೇದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ। ಪಿ.ಎಂ. ಮಧು (ವಿಷಯ: 'ಚರ್ಮರೋಗ ಚಿಕಿತ್ಸೆಯಲ್ಲಿ ಆಯುರ್ವೇದ ಚಿಕಿತ್ಸಾ ವಿಧಾನದ ಸತ್ತ್ವಗಳು), ಕೇರಳ ಕೋಟಕ್ಕಲ್‌ನ ವಿ.ಪಿ.ಎಸ್.ವಿ. ಆಯುರ್ವೇದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ। ಪ್ರಕಾಶ್ ಮಂಗಲ್‌ಸ್ಸೇರಿ (ಪುರುಷರ ಸಂತಾನಶಕ್ತಿ ಹೀನತೆಗೆ ಆಯುರ್ವೇದ ಚಿಕಿತ್ಸೆ), ಕೇರಳದ ಪ್ರಖ್ಯಾತ ಆಯುರ್ವೇದ ವೈದ್ಯ ಗಂಗಾಧರನ್, ಬೆಂಗಳೂರು ರಾಜಾಜಿನಗರದ ಐಎಸ್‌ಟಿಎ ಮಲ್ಟಿಸ್ಪೆಶಾಲಿಟಿ ಪಂಚಕರ್ಮ ಆಸ್ಪತ್ರೆಯ ನಿರ್ದೇಶಕ ಡಾ। ಯೋಗಾನರಸಿಂಹಯ್ಯ, ಮೈಸೂರಿನ ಪ್ರಕೃತಿ ಆಯುರ್ವೇದ ಪ್ರತಿಷ್ಠಾನದ ಡಾ। ಲಕ್ಷ್ಮೀಪ್ರಿಯ, ಡಾ। ಹೃಷಿಕೇಶ ದಾಮ್ಲೆ, ಬೆಂಗಳೂರಿನ ಸರ್ಕಾರಿ ಆಯುರ್ವೇದ ಕಾಲೇಜಿನ ಬಾಲರೋಗ ವಿಭಾಗದ ಪ್ರಾಧ್ಯಾಪಕ ಡಾ। ರಾಜು, ಡಾ। ಮಮತಾ ಭಾಗವತ್, ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಡಾ। ಅಶೋಕ್ ಸತ್ತುತೆ, ಎಸ್‌ಕೆಎಎಂಸಿಯ ಪ್ರಾಧ್ಯಾಪಕ ಡಾ। ಮಂಜುನಾಥ ಅಡಿಗ ಮುಂತಾದವರು ವೈದ್ಯರು ಆಗಮಿಸಿ ಮಾರ್ಗದರ್ಶನ ಮಾಡಿದರು. ಸುಮಾರು 80ಕ್ಕೂ ಅಧಿಕ ಆಯುರ್ವೇದ ವೈದ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

- ಪ್ರತೀ ತಿಂಗಳು ಆಯುರ್ವೇದ ವೈದ್ಯರಿಗಾಗಿ ವಿಶೇಷ ತರಗತಿಗಳನ್ನು ನಡೆಸಲಾಯಿತು. 2018–19ರಲ್ಲಿ 13 ತರಗತಿಗಳು ನಡೆದವು. ಶ್ರೀ ಬೈದ್ಯನಾಥ ಆಯುರ್ವೇದ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರತೀ ತರಗತಿಗಳಲ್ಲಿ ಸುಮಾರು 70 ಮಂದಿ ವೈದ್ಯರು ಭಾಗವಹಿಸಿದರು.

- ಆಯುರ್ವೇದ ವೈದ್ಯಕೀಯ ಸೇವೆ ಮತ್ತು ವಿಚಾರ ಸಂಕಿರಣಗಳನ್ನು ನಡೆಸಲಾಗುತ್ತಿದೆ.

- ಡಯಾಬಿಟೀಸ್, ಆಮ್ಲಪಿತ್ತ ಸೇರಿದಂತೆ ದೇಹದ ವಿವಿಧ ಭಾಗಗಳಿಗೆದುರಾಗುವ ರೋಗಗಳಿಗೆ ಆಯುರ್ವೇದ ಚಿಕಿತ್ಸಾ ಕ್ರಮಗಳ ಕುರಿತು ಬಸವನಗುಡಿಯ ಅಮೃತ ಆಯುರ್ವೇದ ಸೆಂಟರ್‌ನ ಡಾ. ಪದ್ಮನಾಭ ರಾವ್ ಅವರಿಂದ ತಿಂಗಳಿಗೊಮ್ಮೆ ಪ್ರತೀ 2ನೇ ಭಾನುವಾರ ತರಬೇತಿ ಶಿಬಿರವನ್ನು ನಡೆಸಲಾಗಿದೆ. 95 ಮಂದಿ ಆಯುರ್ವೇದ ವೈದ್ಯರು ಭಾಗವಹಿಸುತ್ತಿದ್ದಾರೆ.



- **ವ್ಯವಹಾರ ತರಬೇತಿ:** ಹೊಸ ಆರ್ಥಿಕ ನೀತಿಗಳ ಬಗೆಗಿನ ವೈದ್ಯರ ಸಂಶಯಗಳನ್ನು ಪರಿಹರಿಸುವ ಸಲುವಾಗಿ ಮಾರ್ಚ್ 28ರಂದು ಬೆಂಗಳೂರಿನ ಶ್ರೀ ರಾಘವೇಂದ್ರ ತೀರ್ಥ ಚಾರ್ಟರ್ಡ್ ಅಕೌಂಟೆಂಟ್ಸ್ ಅವರು ತೆರಿಗೆ ನೀತಿ ಮತ್ತು ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡಿದರು.

## ಧನ್ವಂತರಿ ಜಯಂತಿ

ಧನ್ವಂತರಿ ಜಯಂತಿ ಪ್ರಯುಕ್ತ ಡಿಸೆಂಬರ್ 9ರಂದು ಅಗ್ನಿವೇಶದ ವತಿಯಿಂದ ಬೆಂಗಳೂರಿನ ಕೇಶವಶಿಲ್ಪ ಸಭಾಂಗಣದಲ್ಲಿ 'Ayurvedic Medical Management of Surgical Disorders' ಎಂಬ ವಿಷಯದ ಕುರಿತು ರಾಷ್ಟ್ರಮಟ್ಟದ ವಿಚಾರಸಂಕಿರಣ ಆಯೋಜಿಸಲಾಯಿತು.

ವಿವಿಧ ಅವಧಿಗಳಲ್ಲಿ ಚೆನ್ನೈ, ಕೇರಳ ಹಾಗೂ ಕರ್ನಾಟಕದ 20ಕ್ಕೂ ಅಧಿಕ ಪ್ರತಿಷ್ಠಿತ ಆಯುರ್ವೇದ ವೈದ್ಯರು ಉಪನ್ಯಾಸ ನೀಡಿದರು. ಇಡೀ ದಿನ ನಡೆದ ಕಾರ್ಯಕ್ರಮದಲ್ಲಿ ಸುಮಾರು 800 ಜನ ಡಾಕ್ಟರುಗಳು ಭಾಗವಹಿಸಿದ್ದರು.

**ಸಂಮಾನ:** ಸಂಸ್ಥೆಯ ವತಿಯಿಂದ ಪ್ರತೀ ವರ್ಷ ಆಯುರ್ವೇದದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ವೈದ್ಯರನ್ನು ಗುರುತಿಸಿ, ಸಂಮಾನಿಸಿ ಗೌರವಿಸಲಾಗುತ್ತಿದೆ. ಈ ವರ್ಷ ಮೈಸೂರಿನ ಸರ್ಕಾರೀ ಆಯುರ್ವೇದ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಪ್ರೊ॥ ಡಾ. ಶ್ರೀಕಂಠಮೂರ್ತಿ (90 ವರ್ಷ), ಬಳ್ಳಾರಿಯ ಸರ್ಕಾರೀ ಆಯುರ್ವೇದ

ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಾದ ಡಾ॥ ಎಸ್.ಸಿ. ಹೂಗಾರ್, ಸುಮಾರು 5 ದಶಕಗಳಿಂದ ಆಯುರ್ವೇದ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ ಡಾ. ವಿಷ್ಣು ಬಾಪಟ್ – ಈ ಮೂವರು ಆಯುರ್ವೇದ ಸಾಧಕರಿಗೆ ಅಗ್ನಿವೇಶ ಆಯುರ್ವೇದ ಅನುಷ್ಠಾನವು ನೀಡುವ 'ಅಗ್ನಿವೇಶ ವೈದ್ಯರತ್ನ' ಎಂಬ ಬಿರುದನ್ನು ವಿಜಯನಗರದ ಆದಿಚುಂಚನಗಿರಿ ಮಠದ ಅಧ್ಯಕ್ಷರಾದ ಸೌಮ್ಯನಾಥ ಸ್ವಾಮಿಜೀ ಅವರು ನೀಡಿ ಗೌರವಿಸಿದರು.

## ಈ) ಚಿಕಿತ್ಸಾಲಯಗಳು

**ಹೋಮಿಯೋಪಥಿ ಚಿಕಿತ್ಸಾಲಯ:** ರಾಷ್ಟ್ರೋತ್ಥಾನ ಪರಿಷತ್ತಿನ ಆರೋಗ್ಯಸೇವಾ ಕೇಂದ್ರದ ಒಂದು ಯೋಜನೆಯಾದ ಹೋಮಿಯೋಪಥಿ ಚಿಕಿತ್ಸಾಲಯವು 2000ದಲ್ಲಿ ಪ್ರಾರಂಭವಾಯಿತು. ಜನಸಾಮಾನ್ಯರ ಆರೋಗ್ಯ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಹಾಗೂ ಸುಲಭವಾಗಿ ಪರಿಹಾರ ದೊರಕುವಂತೆ ಮಾಡುವ ಸಲುವಾಗಿ ಕಾರ್ಯನಿರ್ವಹಿಸುತ್ತಿದೆ. ನೂರಾರು ಮಂದಿಯ ಸಮಸ್ಯೆಗಳಿಗೆ ಪರಹಾರ ನೀಡಲಾಗಿದೆ.

**ಆಯುರ್ವೇದ ಚಿಕಿತ್ಸಾಲಯ:** ರಾಷ್ಟ್ರೋತ್ಥಾನ ಪರಿಷತ್ತಿನ ಆರೋಗ್ಯಸೇವಾ ಕೇಂದ್ರದ ಒಂದು ಯೋಜನೆಯಾದ ಆಯುರ್ವೇದ ಚಿಕಿತ್ಸಾಲಯ 2001ರಿಂದ ಆಯುರ್ವೇದ ಚಿಕಿತ್ಸಾ ಪದ್ಧತಿಯನ್ನು ಜನಸಾಮಾನ್ಯರಿಗೆ ತಲಪಿಸುವ ಪ್ರಯತ್ನ ನಡೆಸುತ್ತಿದೆ.





ಕಳೆದ 19 ವರ್ಷಗಳಿಂದ ರಾಷ್ಟ್ರೋತ್ಥಾನದಲ್ಲಿ ಹೋಮಿಯೋಪತಿ ಕ್ಲಿನಿಕ್ ನಡೆಸುತ್ತಿರುವ ಡಾ. ಎನ್.ಎಂ. ಚಂದ್ರಶೇಖರ್ ಅವರಿಗೆ ಕರ್ನಾಟಕ ರಾಜ್ಯ ಹೋಮಿಯೋಪತಿಕ್ ಮೆಡಿಕಲ್ ಅಸೋಸಿಯೇಷನ್ ಹಾಗೂ ರಾಷ್ಟ್ರೋತ್ಥಾನ ಪರಿಷತ್‌ನ ವತಿಯಿಂದ ಸಂಮಾನಿಸಲಾಯಿತು.

ಈ ಚಿಕಿತ್ಸಾಲಯದಲ್ಲಿ ವಿಶೇಷವಾಗಿ ಗಳಗಂಡ (ಥೈರಾಯ್ಡ್) ಸೇರಿದಂತೆ ವಿವಿಧ ರೋಗಗಳಿಗೆ ಆಯುರ್ವೇದ ಪದ್ಧತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಈವರೆಗೆ ಸುಮಾರು 1000ಕ್ಕೂ ಅಧಿಕ ಮಂದಿ ಗಳಗಂಡ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಇವರಿಗೆ ನಿರಂತರ ಮಾರ್ಗದರ್ಶನ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

2018–19ನೇ ಸಾಲಿನಲ್ಲಿ ಸುಮಾರು 173ಮಂದಿ ಗಳಗಂಡ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಇವರಿಗೆ ನಿರಂತರವಾಗಿ ಮಾರ್ಗದರ್ಶನ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಹಲವು ರೋಗಿಗಳ ಆರೋಗ್ಯ ಸುಧಾರಣೆಯಲ್ಲಿದ್ದು, ಹಲವರು ಈ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿದ್ದಾರೆ.

# ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ



'ಸರ್ವೇ ಸಂತು ನಿರಾಮಯಾಃ' ಎಂಬ ಪಾರಂಪರಿಕ ಉಕ್ತಿಯಂತೆ ಎಲ್ಲರೂ ಕಾಯಿಲೆಮುಕ್ತ, ಆದರ್ಶ ಜೀವನವನ್ನು ನಡೆಸುವಂತಾಗಬೇಕೆಂಬ ಆಶಯದಿಂದ ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ 1972ರಲ್ಲಿ ಪ್ರಾರಂಭವಾಯಿತು.

ಕಳೆದ 47 ವರ್ಷಗಳಿಂದ ಯೋಗ ಸಂಬಂಧಿತ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವ ರಾಷ್ಟ್ರೋತ್ಥಾನ ಯೋಗ ವಿಭಾಗವು ಪ್ರಸ್ತುತ ಬೆಂಗಳೂರಿನಲ್ಲಿ ಒಟ್ಟು 9 ಯೋಗಕೇಂದ್ರಗಳನ್ನು – ಜಯನಗರ, ಕೇಶವಶಿಲ್ಪ, ಸುಂಕೇನಹಳ್ಳಿ, ಕುಂದಲಹಳ್ಳಿ, ಸದಾಶಿವನಗರ, ಕಲ್ಯಾಣನಗರ, ಗಾಯಿತ್ರಿನಗರ, ನಾಗರಬಾವಿ ಮತ್ತು ಕಾಮಾಕ್ಷಿಪಾಳ್ಯ – ನಡೆಸುತ್ತಿದೆ.

ಪ್ರತಿನಿತ್ಯ ಬೇರೆ ಬೇರೆ ಅವಧಿಗಳಲ್ಲಿ, ಬೇರೆ ಬೇರೆ ಸ್ತರಗಳಲ್ಲಿ (ಪ್ರವೇಶ, ಅಭ್ಯಾಸ, ಪ್ರಗತ, ಯೋಗ ಚಿಕಿತ್ಸೆ, ವಾರಾಂತ್ಯದ ಯೋಗ ತರಗತಿ, ಮಕ್ಕಳ ಯೋಗ ತರಗತಿಗಳು) ಒಟ್ಟು 126 ಯೋಗ ತರಗತಿಗಳು ನಡೆಯುತ್ತಿವೆ. ಸುಮಾರು 3000 ಯೋಗಬಂಧುಗಳು ಪ್ರತಿನಿತ್ಯ ಯೋಗತರಗತಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಸುಮಾರು 100 ಶಿಕ್ಷಕರು ತರಬೇತಿ ನೀಡುತ್ತಿದ್ದಾರೆ.

## ಯೋಗಶಿಕ್ಷಕರಿಗಾಗಿ

**ವಿಶೇಷ ಪ್ರಾಣಾಯಾಮ ತರಗತಿ:** ಯೋಗಶಿಕ್ಷಕರ ಸಾಮರ್ಥ್ಯವರ್ಧನೆಗಾಗಿ ಶಿಕ್ಷಕರಿಗಾಗಿ ಪ್ರತಿ ಎರಡು ತಿಂಗಳಿಗೊಮ್ಮೆ ವಿಶೇಷ ಪ್ರಾಣಾಯಾಮ ತರಗತಿಗಳನ್ನು ಆಯೋಜಿಸಲಾಯಿತು. ರಾಷ್ಟ್ರೋತ್ಥಾನ ಪರಿಷತ್ತಿನ ನಾಗರಬಾವಿಯಲ್ಲಿರುವ ನಂದಗೋಕುಲದಲ್ಲಿ, ಬನಶಂಕರಿಯ ತಪಸ್ ಕೇಂದ್ರದಲ್ಲಿ, ಫಣಿಸಂದ್ರದ ಸಾಧನಾ ಕೇಂದ್ರದಲ್ಲಿ ಹಾಗೂ ಸದಾಶಿವನಗರದ ಯೋಗ ಕೇಂದ್ರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರಾಣಾಯಾಮ ಅಭ್ಯಾಸ ಹಾಗೂ ಭಾರತೀಯ ಧರ್ಮ, ಸಂಸ್ಕೃತಿ, ಸಮಾಜದಲ್ಲಿ ಶಿಕ್ಷಕರ ಜವಾಬ್ದಾರಿ, ಸ್ವಾತಂತ್ರ್ಯ ಹೋರಾಟಗಾರರ ಪರಿಚಯ ಮುಂತಾದ ವಿಷಯಗಳ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯುತ್ತದೆ. ಪರಿಷತ್ ನಡೆಸುವ ವಿವಿಧ ಪ್ರಕಲ್ಪಗಳ ಪರಿಚಯ ಹಾಗೂ ಅವರೊಂದಿಗೆ ಮುಕ್ತ ಸಂವಾದ ನಡೆಸಲಾಯಿತು. ಪ್ರತಿ ಶಿಬಿರದಲ್ಲಿ ಸುಮಾರು 70 ಮಂದಿ ಶಿಕ್ಷಕರು ಭಾಗವಹಿಸಿದರು.

**ಶಿಕ್ಷಕರ ಸಹಲ್:** ಯೋಗವಿಭಾಗದಲ್ಲಿ ಸೇವೆ ಸಲ್ಲಿಸುವ ಶಿಕ್ಷಕ–ಶಿಕ್ಷಕಿಯರಲ್ಲಿ ಕೌಟುಂಬಿಕ ಭಾವನೆ ಮೂಡಿಸುವ ಸಲುವಾಗಿ ಈ ವರ್ಷ ಜನವರಿ 22ರಂದು ಸಿದ್ದರಬೆಟ್ಟಕ್ಕೆ ಪ್ರವಾಸ ಕೈಗೊಳ್ಳಲಾಯಿತು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಸಾರ್ವತ್ರಿಕ ಚುನಾವಣೆಯಲ್ಲಿ ಜವಾಬ್ದಾರಿಯುತ ನಾಗರಿಕರಾಗಿ ನಮ್ಮ ಪಾತ್ರದ ಕುರಿತು ತಿಳಿಸಿದರು.

**ಹೊಸ ಸಹಾಯಕ ಶಿಕ್ಷಕರ ಸೇರ್ಪಡೆ:** ಅಗತ್ಯಕ್ಕೆ ತಕ್ಕಂತೆ ಹೊಸ ಯೋಗಶಿಕ್ಷಕರನ್ನು ಸೇರ್ಪಡೆಗೊಳಿಸುವ ಸಲುವಾಗಿ ಸಂಸ್ಥೆಯ ಯೋಗಕೇಂದ್ರದಲ್ಲಿ ಹಲವು

ವರ್ಷಗಳಿಂದ ನಿರಂತರವಾಗಿ ಯೋಗಾಭ್ಯಾಸ ಮಾಡುತ್ತ ಬಂದಿರುವ ಆಯ್ದ ಯೋಗಬಂಧುಗಳಿಗೆ ವಿಶೇಷ ಯೋಗತರಬೇತಿ ನೀಡಿ ಅವರನ್ನು ಯೋಗಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಜೊತೆಗೆ ಯೋಗವಿಭಾಗವು ಹತ್ತಕ್ಕೂ ಅಧಿಕ ಪೂರ್ಣಾವಧಿ ಕಾರ್ಯಕರ್ತರನ್ನು ಗುರುತಿಸಿ ಅವರನ್ನು ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗಿದೆ.

ಪ್ರಸಕ್ತ ವರ್ಷದಲ್ಲಿ 26 ಯೋಗಬಂಧುಗಳಿಗೆ ತರಬೇತಿ ನೀಡಿ ಶಿಕ್ಷಕರನ್ನಾಗಿ ಜೋಡಿಸಿಕೊಳ್ಳಲಾಗಿದೆ.

**ಚಿಂತನ-ಮಂಥನ:** ರಾಷ್ಟ್ರೋತ್ಥಾನ ಯೋಗ ವಿಭಾಗದ ಪೂರ್ಣಾವಧಿ ಶಿಕ್ಷಕರ ಚಿಂತನ ಶಕ್ತಿ ಹೆಚ್ಚಿಸುವ ಸಲುವಾಗಿ ಮತ್ತು ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ತಿಂಗಳಿಗೊಮ್ಮೆ ವಿಷಯ ತಜ್ಞರಿಂದ ಸಂವಾದಗಳನ್ನು ಆಯೋಜಿಸಲಾಗುತ್ತಿದೆ.

## ಯೋಗಾಭ್ಯಾಸಿಗಳಿಗಾಗಿ

ಯೋಗಾಭ್ಯಾಸದ ಜೊತೆಜೊತೆಗೆ ಯೋಗಬಂಧುಗಳಲ್ಲಿ ಸಾಮಾಜಿಕ ಕಾಳಜಿ, ಸಾಂಸ್ಕೃತಿಕ ಪರಂಪರೆ ಬಗೆಗೆ ಜಾಗೃತಿ-ಹೆಮ್ಮೆ ಮೂಡಿಸುವ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ತಿಂಗಳಿಗೊಂದು ಉಪನ್ಯಾಸ:** ಯೋಗಾಭ್ಯಾಸದ ಜೊತೆ ಜೊತೆಗೆ ಯೋಗಬಂಧುಗಳಲ್ಲಿ ಸಾಮಾಜಿಕ ಕಾಳಜಿಯನ್ನು ಬೆಳೆಸುವ, ಸಾಂಸ್ಕೃತಿಕ ಪರಂಪರೆ ಪರಿಚಯಿಸುವ ಮೂಲಕ ದೇಶದ ಬಗ್ಗೆ ಹೆಮ್ಮೆ ಮೂಡಿಸುವ, ಕುಟುಂಬದಲ್ಲಿ ಸಾಮರಸ್ಯವನ್ನು ಬೆಳೆಸುವ, ಆರೋಗ್ಯವಂತ ವ್ಯಕ್ತಿಗೆ ದೃಢ ಶರೀರ, ಸ್ವಸ್ಥ ಮನಸ್ಸು ಹಾಗೂ ವಿವಿಧ ಕಾಯಿಲೆಗಳು ಮತ್ತು ಅದಕ್ಕೆ ಪರಿಹಾರ ಮುಂತಾದ ವಿಷಯಗಳ ಕುರಿತು ಉಪನ್ಯಾಸ ಕಾರ್ಯಗಳನ್ನು ಆಯೋಜಿಸಲಾಗುತ್ತಿದೆ.






ಕಳೆದ 11 ವರ್ಷಗಳಿಂದ ನಿರಂತರವಾಗಿ ಮಾಸಿಕ ಉಪನ್ಯಾಸ ಕಾರ್ಯಕ್ರಮ ನಡೆಯುತ್ತಿದ್ದು, ಪ್ರಸ್ತುತ ಕೇಶವಶಿಲ್ಪ, ಜಯನಗರ, ಸದಾಶಿವನಗರ, ಕುಂದಲಹಳ್ಳಿ, ಕಾಮಾಕ್ಷಿಪಾಳ್ಯ, ನಾಗರಬಾವಿ ಮತ್ತು ಕಲ್ಯಾಣನಗರ ಯೋಗಕೇಂದ್ರಗಳಲ್ಲಿ ನಿರಂತರವಾಗಿ ನಡೆಯುತ್ತಿದೆ. ಉಪನ್ಯಾಸ ಕಾರ್ಯಕ್ರಮದಲ್ಲಿ 80ಕ್ಕೂ ಅಧಿಕ ಯೋಗಾಭ್ಯಾಸಿಗಳು ಭಾಗವಹಿಸಿದರು.

**ವಿವಿಧ ಉತ್ಸವಗಳ ಆಚರಣೆ:** ಯೋಗಾಭ್ಯಾಸಿಗಳಲ್ಲಿ ಭಾರತೀಯ ಮೌಲ್ಯಗಳ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ರಥಸಪ್ತಮಿಯ ಪ್ರಯುಕ್ತ ಸಾಮೂಹಿಕ ಸೂರ್ಯನಮಸ್ಕಾರ, ಸಾಮರಸ್ಯ ಹಾಗೂ ಏಕತೆಯ ಸಂಕೇತ ಸಾರುವ ರಕ್ಷಾಬಂಧನ, ಗುರುಪೂರ್ಣಿಮೆಯ ನಿಮಿತ್ತ ಪತಂಜಲಿ ನಮನ, ಆಯುಧಪೂಜೆ ಮುಂತಾದ ಉತ್ಸವಗಳನ್ನು ಆಚರಿಸಲಾಯಿತು.

ವಿವಿಧ ಯೋಗಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಮಕೃಷ್ಣಾಶ್ರಮದ ಮಂಗಳನಾಥಾನಂದ ಸ್ವಾಮಿಜೀ, ಸಂಸ್ಕೃತ ತಜ್ಞರಾದ ನಾಗರಾಜ ಶರ್ಮಾ, ಎನ್.ಎಂ.ಆರ್.ವಿ. ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ಡಾ॥ ಎಸ್. ರಂಗನಾಥ್ ಮತ್ತು ಖ್ಯಾತ ಆಯುರ್ವೇದ ತಜ್ಞ ಡಾ. ಅನಂತ ರಾಮನ್ ಅವರು ಉಪನ್ಯಾಸ ನೀಡಿದರು.

**ಸೇವಾಚಟುವಟಿಕೆಗೆ ಸಹಭಾಗಿತ್ವ:** ಯೋಗಾಭ್ಯಾಸಿಗಳಲ್ಲಿ ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಅರಿವು ಮೂಡಿಸುವ ಸಲುವಾಗಿ ತರಗತಿವಾರು ಸೇವಾ ಚಟುವಟಿಕೆಗಳಿಗೆ ಭೇಟಿ ನೀಡಿ ಸಂವಾದ ಕಾರ್ಯಕ್ರಮ ವರ್ಷಪೂರ್ತಿ ನಡೆಯಿತು. ರಾಷ್ಟ್ರೋತ್ಥಾನ ಪರಿಷತ್ ನಡೆಸುವ ಗೋಶಾಲೆ, ತಲಸ್ಸೆಮಿಯಾ ಚಟುವಟಿಕೆಗಳಿಗೆ ಯೋಗವಿಭಾಗದ 9 ಯೋಗಕೇಂದ್ರದ ಸುಮಾರು 40ಕ್ಕೂ ಅಧಿಕ ತರಗತಿಗಳ ಯೋಗಾಭ್ಯಾಸಿಗಳು ಭೇಟಿ ನೀಡಿದರು. ಗೋಶಾಲೆಯಲ್ಲಿ ಗೋವುಗಳೊಂದಿಗೆ ಸಮಯ ಕಳೆದು, ವೃಂದಾವನದಲ್ಲಿ ಗಿಡಗಳನ್ನು ನೆಟ್ಟರು. ತಲಸ್ಸೆಮಿಯಾ ಮಕ್ಕಳ ಆರೋಗ್ಯ ವಿಚಾರಿಸಿ, ಅವರಿಗೆ ಧೈರ್ಯ ತುಂಬಿ ಹಣ್ಣುಹಂಪಲು ವಿತರಿಸಿದರು.

**ರಕ್ತದಾನ ಶಿಬಿರ:** ಯೋಗಬಂಧುಗಳಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಉದ್ದೇಶದಿಂದ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಈ ವರ್ಷ ಕೇಶವಶಿಲ್ಪ, ಜಯನಗರ, ಕಲ್ಯಾಣನಗರ, ಕುಂದಲಹಳ್ಳಿ, ಸದಾಶಿವನಗರ ಯೋಗಕೇಂದ್ರಗಳಲ್ಲಿ ಎರಡು ಬಾರಿ (2018ರ ಜೂನ್ ಮತ್ತು 2019 ಫೆಬ್ರುವರಿ) ರಕ್ತದಾನ ಶಿಬಿರ ನಡೆಯಿತು. ಒಟ್ಟು 580ಕ್ಕೂ ಅಧಿಕ ಯೋಗಬಂಧುಗಳು ರಕ್ತದಾನ ಮಾಡಿದರು.

## ವಿದ್ಯಾರ್ಥಿಗಳಿಗಾಗಿ

**ಮಕ್ಕಳ ಯೋಗ ತರಗತಿ:** ಮಕ್ಕಳ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕಾಗಿ ಪ್ರತಿ ಭಾನುವಾರ ಜಯನಗರ, ಸದಾಶಿವನಗರ, ಕಲ್ಯಾಣನಗರ, ಕೇಶವಶಿಲ್ಪ ಯೋಗಕೇಂದ್ರಗಳಲ್ಲಿ 'ಮಕ್ಕಳ ವಾರಾಂತ್ಯದ ತರಗತಿ'ಗಳನ್ನು ನಡೆಸಲಾಗುತ್ತಿದೆ. 100ಕ್ಕೂ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**ಮಕ್ಕಳ ಬೇಸಿಗೆ ಶಿಬಿರ:** ರಾಷ್ಟ್ರೋತ್ಥಾನ ಯೋಗ ವಿಭಾಗದ ವತಿಯಿಂದ ಕೇಶವಶಿಲ್ಪ, ಜಯನಗರ ಹಾಗೂ ಸದಾಶಿವನಗರ ಯೋಗಕೇಂದ್ರದಲ್ಲಿ 10 ದಿನಗಳ ಬೇಸಿಗೆ ಶಿಬಿರ ನಡೆಯಿತು. ಬೆಳಿಗ್ಗೆ 8 ರಿಂದ 12 ಗಂಟೆಯವರೆಗೆ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಬೌದ್ಧಿಕ, ಶಾರೀರಿಕ, ಮಾನಸಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಚಟುವಟಿಕೆಗಳನ್ನು ನಡೆಸಲಾಯಿತು. ಮಕ್ಕಳಿಗೆ ಯೋಗ, ಪ್ರಾಣಾಯಾಮ, ದೇಶಭಕ್ತರ ಜೀವನಚರಿತ್ರೆ, ರಾಮಾಯಣ, ಮಹಾಭಾರತ ಮುಂತಾದ ವಿವಿಧ ನೀತಿ ಕಥೆಗಳು ಹಾಗೂ ಭಜನೆ, ದೇಶಭಕ್ತಿ ಗೀತೆಗಳು ಮತ್ತು ಆಟಗಳ ಮೂಲಕ ಮಕ್ಕಳ ಸಮಗ್ರ ವಿಕಾಸಕ್ಕೆ ಪೂರಕವಾದಂತಹ ಚಟುವಟಿಕೆಗಳನ್ನು ಮಾಡಿಸಲಾಯಿತು.

ಶಿಬಿರದಲ್ಲಿ ಕೇಶವಶಿಲ್ಪದಲ್ಲಿ 45 ಮಕ್ಕಳು, ಜಯನಗರದಲ್ಲಿ 42 ಮಕ್ಕಳು ಹಾಗೂ ಸದಾಶಿವನಗರದಲ್ಲಿ 40 ಮಕ್ಕಳು ಭಾಗವಹಿಸಿದ್ದರು.

## ಇತರ ಚಟುವಟಿಕೆಗಳು

### ನೃತ್ಯ-ಸಂಗೀತ ಕೇಂದ್ರ

ಸಂಗೀತಾಸಕ್ತರಿಗೆ ಸಂಗೀತದ ಕುರಿತು ತರಬೇತಿ ನೀಡುವ ಉದ್ದೇಶದಿಂದ ಜಯನಗರ (2013ರಲ್ಲಿ), ಸದಾಶಿವನಗರ (2016) ಮತ್ತು ಸುಂಕೇನಹಳ್ಳಿಯಲ್ಲಿ (2018) ರಾಷ್ಟ್ರೋತ್ಥಾನ ನೃತ್ಯ-ಸಂಗೀತ ಕೇಂದ್ರವನ್ನು ಪ್ರಾರಂಭಿಸಲಾಯಿತು. ತಬಲಾ, ಮೃದಂಗ, ಸುಗಮಸಂಗೀತ, ಕರ್ನಾಟಕ ಸಂಗೀತ, ಭರತನಾಟ್ಯ, ಕಥಕ್, ವೀಣೆ ಹಾಗೂ ಕೀಬೋರ್ಡ್ ತರಗತಿಗಳು ನಡೆಯುತ್ತಿವೆ.

ಪ್ರಸ್ತುತ 200ಕ್ಕೂ ಅಧಿಕ ಮಂದಿ ಸಂಗೀತ ನೃತ್ಯ ಕೇಂದ್ರದ ಪ್ರಯೋಜನ ಪಡೆಯುತ್ತಿದ್ದಾರೆ.

- **ಪ್ರತಿಭಾ ಪ್ರದರ್ಶನ:** ಪ್ರತಿ ಎರಡು ವರ್ಷಕ್ಕೊಮ್ಮೆ ಜಯನಗರ ಕೇಂದ್ರದ ಕಲಾಭ್ಯಾಸಿಗಳಿಗಾಗಿ ಪ್ರತಿಭಾ ಪ್ರದರ್ಶನ ಕಾರ್ಯಕ್ರಮವನ್ನು



ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿಯ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ಜನವರಿ 19ರಂದು ನಡೆಯಿತು. ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಉದ್ಘಾಟಿಸಿದರು. 500ಕ್ಕೂ ಅಧಿಕ ಕಲಾಸಕ್ತರು ಭಾಗವಹಿಸಿದರು. ಸದಾಶಿವನಗರ ಕಲಾಕೇಂದ್ರದ ಅಭ್ಯಾಸಿಗಳಿಂದ 2019ರ ಫೆಬ್ರುವರಿ ತಿಂಗಳಲ್ಲಿ ಪ್ರತಿಭಾ ಪ್ರದರ್ಶನ ನಡೆಯಿತು.

- ಜಯನಗರ ನೃತ್ಯಕಲಾ ಕೇಂದ್ರದ 16 ಮಂದಿ ಕಲಾಭ್ಯಾಸಿಗಳು ಕರ್ನಾಟಕ ಸರ್ಕಾರದ ವತಿಯಿಂದ ನಡೆಸಲ್ಪಡುವ ಜ್ಯೂನಿಯರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ. 14 ಮಂದಿ ಕಲಾಭ್ಯಾಸಿಗಳು 90% ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

### ಫಿಟ್ನೆಸ್ ಸೆಂಟರ್

ಇಂದಿನ ಯಾಂತ್ರಿಕ ಮತ್ತು ವೇಗದ ಬದುಕಿನಿಂದ ಬದಲಾದ ಜೀವನಶೈಲಿಯಲ್ಲಿಯೂ ಸದೃಢ ದೇಹವನ್ನು ಹೊಂದುವ ಹಾಗೂ ಆರೋಗ್ಯವನ್ನು ಸುರಕ್ಷಿತವಾಗಿಡುವ ಕಳಕಳಿಯವರಿಗಾಗಿ ಆಧುನಿಕ ಜೀವನ ಶೈಲಿಗೆ ಸರಿಹೊಂದುವಂತಹ ಫಿಟ್ನೆಸ್ ಸೆಂಟರ್‌ನ್ನು ಜಯನಗರ, ಸುಂಕೇನಹಳ್ಳಿ, ಸದಾಶಿವನಗರ ಕೇಂದ್ರದಲ್ಲಿ ಫಿಟ್ನೆಸ್ ಸೆಂಟರ್ ಕಾರ್ಯನಿರ್ವಹಿಸುತ್ತಿವೆ. ಎಲ್ಲ ವಯೋಮಾನದವರು ಬೇರೆ ಬೇರೆ ಅವಧಿಗಳಲ್ಲಿ ಇದರ ಲಾಭ ಪಡೆಯುತ್ತಿದ್ದಾರೆ.

- ರಾಷ್ಟ್ರೋತ್ಥಾನ ಫಿಟ್‌ನೆಸ್ ಸೆಂಟರ್ ವತಿಯಿಂದ 2018ರ ಏಪ್ರಿಲ್‌ನಲ್ಲಿ ಮಕ್ಕಳಿಗಾಗಿ ಒಂದು ತಿಂಗಳ ಫಿಟ್‌ಕಿಡ್ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸ್ವಯಂ ರಕ್ಷಣಾ ತರಗತಿಗಳು, ಮೂಲಭೂತ ಕೃಷಿ ತರಗತಿಗಳು, ಸಾಂಪ್ರದಾಯಿಕ ದೇಸಿ ನೃತ್ಯ ಹಾಗೂ ಒಂದು ದಿನದ ಚಾರಣ ಕಾರ್ಯಕ್ರಮವನ್ನು ಆಯೋಜಿಸಲಾಯಿತು.
- ಬೆಂಗಳೂರಿನ ಟಿ.ಸಿ.ಎಸ್. ಕಂಪೆನಿಯವರು ಆಯೋಜಿದ 10 ಕಿ.ಮೀ. ಓಟದ ಸ್ಪರ್ಧೆಯಲ್ಲಿ ನಮ್ಮ ಕೇಂದ್ರದಿಂದ 100 ಜನರು ಭಾಗವಹಿಸಿದರು. ಇದಕ್ಕಾಗಿ ಅವರಿಗೆ 12 ವಾರಗಳ ವಿಶೇಷ ತರಬೇತಿಯನ್ನು ನೀಡಲಾಯಿತು.

- ಫಿಟ್‌ನೆಸ್ ಬಂಧುಗಳಿಗಾಗಿ ಕಳೆದ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ತುಮಕೂರಿನ ನಿಜಗಲ್ ಬೆಟ್ಟಕ್ಕೆ ಚಾರಣವನ್ನು ಏರ್ಪಡಿಸಲಾಯಿತು. ಎರಡೂ ಕೇಂದ್ರಗಳಿಂದ ಸುಮಾರು 100 ಜನರು ಭಾಗವಹಿಸಿದರು
- 2018ರ ಡಿಸೆಂಬರ್‌ನಲ್ಲಿ ಜಯನಗರ ಹಾಗೂ ಸದಾಶಿವನಗರ ಕೇಂದ್ರದ ಬಂಧುಗಳಿಗಾಗಿ ಫಿಟ್–ಮೆನ್ ಹಾಗೂ ಫಿಟ್–ವುಮನ್ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಎರಡೂ ಕೇಂದ್ರಗಳಿಂದ 95 ಬಂಧುಗಳು ಭಾಗವಹಿಸಿದರು.
- ಪ್ರಸುತ್ತ ಒಂದು ಸಾವಿರಕ್ಕೂ ಹೆಚ್ಚು ಮಂದಿ ಫಿಟ್‌ನೆಸ್ ಸೆಂಟರ್‌ನ ಲಾಭವನ್ನು ಪಡೆಯುತ್ತಿದ್ದಾರೆ.

## ಕರಾಟೆ ತರಗತಿಗಳು

ಆತ್ಮರಕ್ಷಣೆ ಕಲೆಯಾದ ಕರಾಟೆಯ ತರಗತಿಗಳು ಜಯನಗರ ಕೇಂದ್ರದಲ್ಲಿ ನಡೆಯುತ್ತಿವೆ. ಸ್ಕೂಲ್ ಆಫ್ ಇಂಡಿಯನ್ ಕರಾಟೆಯ ಮಾಸ್ಟರ್ ಸುರೇಶ್ ಎಸ್. ರಾವ್ ಅವರ ಮಾರ್ಗದರ್ಶನದಲ್ಲಿ ಜಯನಗರ ಯೋಗಕೇಂದ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ಕರಾಟೆ ತರಗತಿಗಳು ನಡೆಯುತ್ತಿವೆ. ಸಾವಿರಾರು ವಿದ್ಯಾರ್ಥಿಗಳು ಇದರ ಲಾಭ ಪಡೆದಿದ್ದಾರೆ.

- ವಿವಿಧ ಕೇಂದ್ರದ ವಿದ್ಯಾರ್ಥಿಗಳಿಗಾಗಿ ಎರಡು ವರ್ಷಕ್ಕೊಮ್ಮೆ ಕರಾಟೆ ಪಂದ್ಯಾವಳಿ ಆಯೋಜಿಸಲಾಗುತ್ತದೆ. ಈ ವರ್ಷ ಡಿಸೆಂಬರ್ 2 ಹಾಗೂ 3ರಂದು ನಡೆದ ಪಂದ್ಯಾವಳಿಯಲ್ಲಿ ವಿಜೇತರಿಗೆ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಆಡಳಿತ ಮಂಡಳಿ ಸದಸ್ಯ ಕೆ.ಎಸ್. ನಾರಾಯಣ್ ಅವರು ಪ್ರಶಸ್ತಿ ವಿತರಿಸಿದರು.
- ಕೋರಮಂಗಲದಲ್ಲಿ ಆಗಸ್ಟ್ 11ರಿಂದ 2ದಿನಗಳ ಕಾಲ ನಡೆದ ರಾಷ್ಟ್ರೀಯ ಮಟ್ಟದ ಚಾಂಪಿಯನ್‌ಶಿಪ್‌ನಲ್ಲಿ 14 ವಿದ್ಯಾರ್ಥಿಗಳು ಭಾಗವಹಿಸಿದರು.





ಕರಾಟೆ ಮತ್ತು ಕುಮುಟೆ ವಿಭಾಗದಲ್ಲಿ ಭಾಗವಹಿಸಿದ ಎಲ್ಲರೂ ಪ್ರಶಸ್ತಿಗಳನ್ನು ಪಡೆದರು.

- ಸ್ಕೂಲ್ ಆಫ್ ಇಂಡಿಯನ್ ಕರಾಟೆ (ರಿ) ವತಿಯಿಂದ 2018 ರ ನವೆಂಬರ್ 26ರಂದು ನಡೆದ ಇಂಟರ್‌ಸ್ಕೂಲ್ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದರು.
- ಡಿಸೆಂಬರ್ 1 ಮತ್ತು 2 ರಂದು ನಡೆದ ಕರಾಟೆ ತರಗತಿಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ 13 ವಿದ್ಯಾರ್ಥಿಗಳಿಗೆ ಬ್ಲಾಕ್ ಬೆಲ್ಟ್‌ನ್ನು ನೀಡಲಾಯಿತು.
- **ಹೊಸ ಶಾಖೆ:** 2018ನೇ ನವೆಂಬರ್‌ನಿಂದ ಸದಾಶಿವನಗರ ಯೋಗ ಕೇಂದ್ರದಲ್ಲಿ ನೂತನ ಕರಾಟೆ ತರಗತಿಗಳನ್ನು ಆರಂಭಿಸಲಾಯಿತು.

## ರಾಷ್ಟ್ರೋತ್ಥಾನ ಅಂಗಮರ್ದನ ಚಿಕಿತ್ಸೆ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರ

ಜಯನಗರದಲ್ಲಿರುವ ಅಜಿತಸ್ಮೃತಿಯಲ್ಲಿ ಕಳೆದ 16 ವರ್ಷಗಳಿಂದ ರಾಷ್ಟ್ರೋತ್ಥಾನ ಅಂಗಮರ್ದನ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

- ಕಳೆದ ಒಂದು ವರ್ಷದ ಅವಧಿಯಲ್ಲಿ 1000 ಮಂದಿ ಅಂಗಮರ್ದನ ಮತ್ತು ಉಗಿಸ್ನಾನದ ಲಾಭವನ್ನು ಪಡೆದುಕೊಂಡಿದ್ದಾರೆ.
- ಪಾರ್ಶ್ವವಾಯು, ಪಾರ್ಕಿನ್ಸನ್, ಬೆನ್ನುನೋವು, ಗಂಟುನೋವು, ರಕ್ತದೊತ್ತಡ ಮುಂತಾದ ತೊಂದರೆಗಳಿಂದ ನರಳುತ್ತಿರುವವರೂ ಇದರ ಲಾಭಪಡೆದು, ತಮ್ಮ ದೈಹಿಕ ಬದಲಾವಣೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ರಾಷ್ಟ್ರೋತ್ಥಾನ ಗೋಶಾಲೆ

## ಭಾರತೀಯ ದೇಶಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆ

ಅನಾದಿಕಾಲದಿಂದಲೂ ಭಾರತದಲ್ಲಿ ಗೋವಿಗೆ ಪೂಜ್ಯಸ್ಥಾನವನ್ನು ನೀಡಲಾಗಿದೆ. ಗೋವು ಕೇವಲ ಹಾಲು ಕೊಡುವ ಪ್ರಾಣಿಯಲ್ಲ. ಮಾನವ ಜೀವನದ ವಿಕಾಸದ ಪ್ರತಿಹಂತದಲ್ಲೂ ಗೋವಿಗೆ ಪ್ರಮುಖವಾದ ಸ್ಥಾನವನ್ನು ನೀಡಿ, ಅದನ್ನು ದೇವತೆಗಳ ಮೂಲಸ್ಥಾನ ಎಂದು ನಂಬಿದವರು ಭಾರತೀಯರು. ಆದರೆ ವಿದೇಶೀ ಮಾನಸಿಕತೆಯ ಪರಿಣಾಮದಿಂದಾಗಿ ಗೋವನ್ನು ಹಾಲು ಕೊಡುವ ಯಂತ್ರವಾಗಿ ಚಿತ್ರಿಸಲಾಗುತ್ತಿದೆ. ಈ ಮಾನಸಿಕತೆಯ ಭರಾಟೆಯಲ್ಲಿ ಗೋವಿನ ಮಹಾನತೆ ಮರೆಯಾಗುತ್ತಿದೆ. ಹಸುವನ್ನು ಕೇವಲ ಹಾಲಿನ ಮೂಲವೆಂದು ಪರಿಗಣಿಸಿ, ಭಾರತೀಯ ಗೋತಳಿಗಳನ್ನು ಅಲಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ದೇಶೀಯ (ಭಾರತೀಯ) ತಳಿಗಳ ಸಂರಕ್ಷಣೆ, ಸಂವರ್ಧನೆ ಮತ್ತು ಸಂಶೋಧನೆಗಾಗಿ ದೊಡ್ಡಬಳ್ಳಾಪುರ ಸಮೀಪದ ಶ್ರೀ ಘಾಟಿಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನ 'ಶ್ರೀಮಾಧವ ಸೃಷ್ಟಿ'ಯಲ್ಲಿ ಗೋಶಾಲೆಯನ್ನು ನಡೆಸಿಕೊಂಡು ಬರುತ್ತಿದೆ.

- ಗೋಪಾಲನೆಗೆ ಯೋಗ್ಯವಾದ ಈ ಪರಿಸರದಲ್ಲಿ ಗುಜರಾತಿನ ಗೀರ್, ಹರ್ಯಾಣದ ಸಾಹೀವಾಲ್, ರಾಜಸ್ಥಾನದ ಕಾಂಕ್ರೆಜ್, ರಾಜಸ್ಥಾನ–ಹರ್ಯಾಣದ ಕಾರ್‌ಪಾರ್ಕರ್, ಮಹಾರಾಷ್ಟ್ರದ ದೇವನಿ, ದಕ್ಷಿಣ ಒಳನಾಡಿನ ಹಳ್ಳಿಕಾರ್, ಮಲೆನಾಡಿನ ಗಿಡ್ಡ, ಹೊಂಗೋಲ್, ಜವಾರಿ, ಅಮೃತಮಹಲ್ ಸೇರಿದಂತೆ 10 ತಳಿಗಳ ಸಂರಕ್ಷಣೆ ಮಾಡಲಾಗುತ್ತಿದೆ.
- ಎತ್ತು, ಹೋರಿ, ದನ ಹಾಗೂ ಕರುಗಳು ಸೇರಿದಂತೆ ಒಟ್ಟು 500ಕ್ಕೂ ಅಧಿಕ ಜಾನುವಾರುಗಳಿಗೆ ಆಶ್ರಯ ನೀಡಲಾಗಿದೆ.
- ತಳಿಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ.
- ಸಗಣಿಯನ್ನು ಬಳಸಿ ಕಾಂಪೋಸ್ಟ್, ಎರೆಗೊಬ್ಬರ ಹಾಗೂ ಅಗ್ನಿಹೋತ್ರಗಳನ್ನು ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ನೀಡಲಾಗುತ್ತಿದೆ.
- ಗೋಸಾಕಣೆ, ಹೈನುಗಾರಿಕೆ, ಸಾವಯವ ಕೃಷಿ, ಪ್ರಕೃತಿಚಿಕಿತ್ಸೆ ಇವುಗಳಲ್ಲಿ ಸಮನ್ವಯ ಸಾಧಿಸುವ ಕಾರ್ಯಯೋಜನೆ ರೂಪಿಸಲಾಗಿದೆ.
- **ಸ್ವಾವಲಂಬೀ ವಿದ್ಯುತ್ ವ್ಯವಸ್ಥೆ:** ಗೋಶಾಲೆಯಲ್ಲಿ ಸೌರಶಕ್ತಿ ಮತ್ತು ಗೋಬರ್ ಗ್ಯಾಸ್ ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಎಲ್ಲ ಬೋರ್‌ವೆಲ್‌ಗಳಿಗೆ ಸೌರವಿದ್ಯುತ್ ಅಳವಡಿಸಲಾಗಿದೆ. ಗೋಶಾಲೆಗಳ ಬೆಳಕಿನ ವ್ಯವಸ್ಥೆ ಸಂಪೂರ್ಣ ಸೌರಶಕ್ತಿಯಿಂದಲೇ ನಡೆಯುತ್ತಿದೆ.
- ಎರೆಗೊಬ್ಬರ ಘಟಕದ ಮೂಲಕ ಎರೆಗೊಬ್ಬರ ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ಈ ಎರೆಗೊಬ್ಬರವನ್ನು ನೀಡಲಾಗುತ್ತಿದೆ. 22 ತೊಟ್ಟಿಗಳಿರುವ ಎರೆಗೊಬ್ಬರ ಘಟಕ ಕಾರ್ಯ ನಿರ್ವಹಿಸುತ್ತಿದೆ.



- ಗೋಶಾಲೆಯಲ್ಲಿ ಗೋಮೂತ್ರ ಅರ್ಕ, ಧೂಪ, ಜೀವಾಮೃತ, ಘನ ಜೀವಾಮೃತ, ಕೀಟ ನಿಯಂತ್ರಕ, ಬರಣಿ, ದಂತಮಜ್ಜನ, ಗೋಚೂರ್ಣ, ಗೋಮಯ ಭಸ್ಮಗಳನ್ನು ತಯಾರಿಸಿ ರೈತರಿಗೆ ಕಡಮೆ ದರದಲ್ಲಿ ಮಾರಾಟ ಮಾಡುವ ಗುರಿಯಿಂದ ಕಾರ್ಯ ಪ್ರಾರಂಭಿಸಲಾಗಿದೆ.

- **ಉಚಿತ ಹೋರಿ/ಎತ್ತು ವಿತರಣೆ:** ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ನೆರವಾಗುವ ಉದ್ದೇಶದಿಂದ ಉಚಿತ ಹೋರಿ ಹಾಗೂ ಎತ್ತುಗಳನ್ನು ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. 2011ರಲ್ಲಿ ಪ್ರಾರಂಭಗೊಂಡ ಈ ಯೋಜನೆಯಲ್ಲಿ ಈವರೆಗೆ 220 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ ವಿತರಿಸಲಾಗಿದೆ. ಈ ವರ್ಷ ಒಟ್ಟು 20 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ (ಮಂಡ್ಯ, ದೊಡ್ಡಬಳ್ಳಾಪುರ, ಗೌರಿಬಿದನೂರು, ಪಾಂಡವಪುರ, ಮೇಲುಕೋಟೆ, ಹಿರಿಯೂರು, ಮದ್ದೂರು ಮುಂತಾದ ಗ್ರಾಮೀಣ ಭಾಗದವರಿಗೆ) ನೀಡಲಾಗಿದೆ. ರೈತರು ತಮ್ಮ ಗದ್ದೆಗಳ ಉಳುಮೆಗಾಗಿ ಇವುಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಆರೈಕೆ ಮಾಡಲು ಅಸಾಧ್ಯವಾದಾಗ ಪುನಃ ಗೋಶಾಲೆಗೆ ಹಿಂತಿರುಗಿಸಬೇಕು. ಯಾವುದೇ ಕಾರಣಕ್ಕೂ ಮಾರಾಟ ಮಾಡುವಂತಿಲ್ಲ ಎಂಬ ಒಪ್ಪಂದದ ಮೇರೆಗೆ ಇವುಗಳನ್ನು ನೀಡಲಾಗುತ್ತಿದೆ.

- **ಇತರ ಗೋಶಾಲೆಗಳಿಗೆ ಹೋರಿ ವಿತರಣೆ:** ದೇಶಿ ಗೋವುಗಳ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಗೋಶಾಲೆಗಳಿಗೆ ಅಗತ್ಯ ನೆರವು ನೀಡಲು ರಾಷ್ಟ್ರೋತ್ಥಾನ ಗೋಶಾಲೆ ನಿರ್ಧರಿಸಿದೆ. ಇದರ ಪ್ರಾರಂಭಿಕ ಹಂತವಾಗಿ ತಳಿ ಅಭಿವೃದ್ಧಿಗಾಗಿ ಅನೇಕ ಗೋಶಾಲೆಗಳಿಗೆ ದೇಶಿ ಹೋರಿಯನ್ನು ನೀಡಲಾಗುತ್ತಿದೆ. ಈ ವರ್ಷ ಕನ್ಯಾಕುಮಾರಿಯ ಗೋಶಾಲೆ, ಚಿಕ್ಕಬಳ್ಳಾಪುರದ ಸೇವಾವನ ಸೇರಿದಂತೆ 5 ಗೋಶಾಲೆಗಳಿಗೆ ಉತ್ತಮ ಗುಣಮಟ್ಟದ ಹೋರಿಗಳನ್ನು ನೀಡಲಾಗಿದೆ.

- ರಾಜ್ಯದ ವಿವಿಧ ಭಾಗಗಳಿಂದ ಗೋ ಸಾಕಣೆಯ ಕುರಿತು ಅಧ್ಯಯನಕ್ಕಾಗಿ, ತರಬೇತಿಗಾಗಿ ಭೇಟಿ ನೀಡುತ್ತಿದ್ದಾರೆ.

- ಗೋಶಾಲೆಯಲ್ಲಿನ ಗೋ ಸಾಕಣೆಯ ಕುರಿತು ರಾಜ್ಯದ ವಿವಿಧ ಭಾಗಗಳ ರೈತರು ಹಾಗೂ ಹೈನುಗಾರಿಕಾ ಇಲಾಖೆಯವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

- ರಾಜ್ಯದ ವಿವಿಧೆಡೆಗಳಲ್ಲಿ ನಡೆಯುವ ಗೋಶಾಲೆ ಸಂಬಂಧಿತ ಕಾರ್ಯಾಗಾರ, ಉತ್ಸವಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಲಾಗುತ್ತಿದೆ.

- 40 ಮಂದಿ ಗೋಪಾಲಕರು ಕೆಲಸ ನಿರ್ವಹಿಸುತ್ತಿದ್ದಾರೆ.



## ಉತ್ಸವಗಳು

ಗೋಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಲ್ಲಿ ಸಹೋದರತೆ ಮೂಡಿಸುವ ಹಾಗೂ ನಮ್ಮ ಪರಂಪರೆ ಸಂಸ್ಕೃತಿಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಶ್ರೀರಾಮನವಮಿ, ರಕ್ಷಾಬಂಧನ, ಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ, ಆಯುಧಪೂಜೆ, ದೀಪಾವಳಿ, ಮಕರಸಂಕ್ರಾಂತಿ, ಯುಗಾದಿ, ವಿವೇಕಾನಂದ ಜಯಂತಿ ಮುಂತಾದ ಉತ್ಸವಗಳನ್ನು ನಿರಂತರವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

**ವಿಶೇಷ ಕಾರ್ಯಚಟುವಟಿಕೆ**

# ವೃಂದಾವನ

## ಕಾಡುಬೆಳೆಸುವ ವಿಶೇಷ ಯೋಜನೆ

ಭೂಮಿ, ಕಾಡು ಮತ್ತು ದೇಶಿ ಗೋವುಗಳ ನಡುವೆ ಅವಿನಾಭಾವ ಸಂಬಂಧವಿದೆ. ಈ ವಾಸ್ತವದ ಮೇಲೆ ಗೋಶಾಲೆಯ 20 ಎಕರೆ ಪರಿಸರದಲ್ಲಿ ಕಾಡನ್ನು ಬೆಳೆಸುವ ಯೋಜನೆಯನ್ನು ರಾಷ್ಟ್ರೋತ್ಥಾನ ಪರಿಷತ್ ಕೈಗೆತ್ತಿಕೊಂಡಿದೆ. ಈ ಯೋಜನೆಗೆ 'ವೃಂದಾವನ' ಎಂದು ಹೆಸರಿಡಲಾಗಿದೆ.

**ಉದ್ಘಾಟನೆ:** ವೃಂದಾವನ ಯೋಜನೆಯ ಉದ್ಘಾಟನಾ ಕಾರ್ಯಕ್ರಮ 2018ರ ಜುಲೈ 8ರಂದು ನಡೆಯಿತು. ಖ್ಯಾತ ಪರಿಸರ ತಜ್ಞ ಡಾ. ಯಲ್ಲಪ್ಪ ರೆಡ್ಡಿ ಅವರು ಉದ್ಘಾಟಿಸಿದರು. ವಿಜಯವಾಣಿ ದಿನಪತ್ರಿಕೆಯ ಸಂಪಾದಕ ಕೆ.ಎನ್. ಚನ್ನೇಗೌಡ, ಬೆಂಗಳೂರಿನ ICAR-NDRIನ ಮುಖ್ಯಸ್ಥರಾದ ಡಾ॥ ಕೆ.ಪಿ. ರಮೇಶ್, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು. ಅಂದು 'ಮಹಾವನ' ಪರಿಕಲ್ಪನೆಯಲ್ಲಿ ಯಲ್ಲಪ್ಪ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ವಿವಿಧ ಸ್ವಯಂಸೇವಾ ಸಂಸ್ಥೆಗಳ 300ಕ್ಕೂ ಅಧಿಕ ಸ್ವಯಂಸೇವಕರು 100 ವಿವಿಧ ಬಗೆಯ 1200 ಸಸಿಗಳನ್ನು ನೆಟ್ಟರು.



- ಸುಪ್ರಸಿದ್ಧ ಮಾಕಳಿ ಗುಡ್ಡದ ಸಾಮೀಪ್ಯದ 20 ಎಕರೆ ಜಾಗದಲ್ಲಿ 4 ಪರಿಕಲ್ಪನೆಯಲ್ಲಿ ಕಾಡು ನಿರ್ಮಾಣ
- ಖ್ಯಾತ ಪರಿಸರ ತಜ್ಞ ಡಾ. ಯಲ್ಲಪ್ಪ ರೆಡ್ಡಿ ಅವರ ಮಾರ್ಗದರ್ಶನ
- ಔಷಧೀಯ, ಆಯುರ್ವೇದೀಯ ಗುಣಗಳಿರುವ ಸಾಂಪ್ರದಾಯಿಕ ಸ್ಥಳೀಯ ಪ್ರಾಣಿಪಕ್ಷಿಸಂಕುಲಕ್ಕೆ ಪೂರಕ ಸಸ್ಯಗಳು
- ಸಂಪೂರ್ಣ ಸೋಲಾರ್ ಶಕ್ತಿಯನ್ನು ಬಳಸಿ ನೀರಾವರಿ ವ್ಯವಸ್ಥೆ



- ಹನಿ ನೀರು ವ್ಯರ್ಥವಾಗದಂತೆ ಜಲಸಂರಕ್ಷಣೆಯ ಯೋಜನೆ
- ಪ್ರಾರಂಭಿಕ ಹಂತವಾಗಿ 5 ಎಕರೆ ಜಾಗದಲ್ಲಿ 'ಮಹಾವನ' ರೂಪುಗೊಳ್ಳಲಿದ್ದು, ಮುಂದೆ ಇಲ್ಲಿ ತಪೋವನ, ಶ್ರೀವನ ಹಾಗೂ ವಸುಧೈವ ಕುಟುಂಬಕಂ – ಈ ನಾಲ್ಕು ವಿಶಿಷ್ಟ ಪರಿಕಲ್ಪನೆಗಳಲ್ಲಿ ಕಾಡು ರೂಪುಗೊಳ್ಳಲಿದೆ.
- ಪ್ರಾರಂಭಿಕ ಹಂತವಾಗಿ ಪ್ರಸ್ತುತ 5 ಎಕರೆ ಜಾಗದಲಿ 2300 ಗಿಡಗಳನ್ನು ನೆಡಲಾಗಿದೆ.
- ಸಾರ್ವಜನಿಕರ ಸಹಭಾಗಿತ್ವಕ್ಕಾಗಿ ಕನಿಷ್ಠ 1000 ರೂ. ದೇಣಿಗೆ ನೀಡಿದರೆ ವೃಂದಾವನದಲ್ಲಿ 2 ಮರಗಳನ್ನು ಬೆಳೆಸುವ ಯೋಜನೆ ರೂಪಿಸಲಾಗಿದ್ದು, ಸುಮಾರು 500 ಮಂದಿ ದೇಣಿಗೆ ನೀಡಿ ಹೆಸರು ನೋಂದಾಯಿಸಿಕೊಂಡಿದ್ದಾರೆ.



## ನನ್ನ 30 ವರ್ಷಗಳ ಕನಸು ಇದೀಗ ನನಸಾಗುತ್ತಿದೆ.

ಕಾಡು ಬೆಳೆಸುವುದೆಂದರೆ ಕೇವಲ ಗಿಡನೆಟ್ಟು ಮರ ಬೆಳೆಸುವುದಷ್ಟೇ ಅಲ್ಲ. ಅದರಿಂದ ಭೂಮಿಯ ಕೆಳಗಿನ ಇಪ್ಪತ್ತು ಅಡಿ ಹಾಗೂ ಮೇಲಿನ ನೂರು ಅಡಿಗಳಿಗೂ ಮಿಕ್ಕಿ ಒಂದು ಆರೋಗ್ಯಕರ ವಾತಾವರಣ ನಿರ್ಮಾಣವಾಗಬೇಕು. ರಾಷ್ಟ್ರೋತ್ಥಾನ ಪರಿಷತ್‌ನ 'ವೃಂದಾವನ' ಯೋಜನೆಯಲ್ಲಿ ಅಂತಹ ಒಂದು ವನ ನಿರ್ಮಾಣವಾಗಲಿದೆ. ರಾಷ್ಟ್ರೋತ್ಥಾನ ಗೋಶಾಲೆಯ ಈ ಪರಿಸರದಲ್ಲಿ ಪ್ರಸ್ತುತ ವರ್ಷ 'ಮಹಾವನ' ರೂಪುಗೊಳ್ಳಲಿದ್ದು, ಬಳಿಕ ಮುಂದೆ ಇಲ್ಲಿ ತಪೋವನ, ಶ್ರೀವನಗಳನ್ನು ರೂಪಿಸಲಾಗುವುದು. ಈ ಸಸಿಗಳು ಬೆಳೆದು ದೊಡ್ಡದಾಗಿ ಕಾಡು ನಿರ್ಮಾಣಗೊಂಡ ನಂತರ ಇಡೀ ದಿನ ಇಲ್ಲಿನ ಮರಗಳ ಮಧ್ಯದಲ್ಲಿ ಕುಳಿತು ಕಾಲ ಕಳೆದರೂ ಸಾಕು; ಹಲವಾರು ಅನಾರೋಗ್ಯದ ಸಮಸ್ಯೆಗಳನ್ನು ನಿವಾರಣೆ ಮಾಡುವಂತಹ ಶಕ್ತಿ ಇಲ್ಲಿನ ಗಾಳಿಗೆ ಬರಲಿದೆ. ಒಂದು ವನವನ್ನು ನಿರ್ಮಿಸಬೇಕು ಎನ್ನುವ ನನ್ನ 30 ವರ್ಷಗಳ ಕನಸು ಈ 'ವೃಂದಾವನ' ಯೋಜನೆಯ ಮೂಲಕ ನನಸಾಗುತ್ತಿದೆ, ಸಾಕಾರವಾಗುತ್ತಿದೆ.

– **ಡಾ॥ ಯಲ್ಲಪ್ಪ ರೆಡ್ಡಿ,** ಖ್ಯಾತ ಪರಿಸರ ತಜ್ಞರು, ಯೋಜನೆಯ ಮಾರ್ಗದರ್ಶಕರು

# ನಾಲ್ಕು ವಿಶಿಷ್ಟ ಪರಿಕಲ್ಪನೆ

ಭೂಮಿ, ಕಾಡು ಮತ್ತು ದೇಶೀಯ ಗೋವುಗಳ ನಡುವೆ ಅವಿನಾಭಾವ ಸಂಬಂಧವಿದೆ. ಇದನ್ನು ಅರಿತು ಗೋಶಾಲೆಯ 20 ಎಕರೆ ಪರಿಸರದಲ್ಲಿ ವೈವಿಧ್ಯಮಯ ದೇಶೀಯ ಸಸಿಗಳನ್ನು ಬೆಳೆಸಲು ಒತ್ತು ನೀಡಲಾಗಿದೆ. ಪ್ರಸ್ತುತ ವರ್ಷ ಮೊದಲ ಹಂತದಲ್ಲಿ 5 ಎಕರೆ ಜಾಗದಲ್ಲಿ 'ಮಹಾವನ' ರೂಪುಗೊಳ್ಳಲಿದ್ದು, ಬಳಿಕ ಮುಂದೆ ಇಲ್ಲಿ ತಪೋವನ, ಶ್ರೀವನ ಹಾಗೂ ವಸುಧೈವ ಕುಟುಂಬಕಂ – ಈ ನಾಲ್ಕು ವಿಶಿಷ್ಟ ಪರಿಕಲ್ಪನೆಗಳಲ್ಲಿ ಕಾಡು ರೂಪುಗೊಳ್ಳಲಿದೆ.

## ಮಹಾವನ

ಮಹಾವನದಲ್ಲಿ ಅರಳಿ, ಆಲ, ಅತ್ತಿ, ಮಹಾಗನಿ, ಹಲಸು, ಬೇವು, ಅಶೋಕ, ಅರ್ಜುನ, ತ್ರಿಫಲ, ರುದ್ರಾಕ್ಷ, ನಾಗಲಿಂಗ, ಸಂಪಿಗೆ, ಕಾಡುಸಂಪಿಗೆ, ಮಾವು ಅಲ್ಲದೆ ಬಿಲ್ವದ 9 ಪ್ರಕಾರದ ಗಿಡಗಳನ್ನು ಬೆಳೆಸಲಾಗುತ್ತದೆ. ಮಹಾವನದಲ್ಲಿ ಮನುಷ್ಯರ ಹಸ್ತಕ್ಷೇಪಕ್ಕೆ ಅವಕಾಶ ಇರುವುದಿಲ್ಲ. ಪ್ರಾಣಿಗಳು ನಿರ್ಭಯ ವಾತಾವರಣದಲ್ಲಿ ಸಂಚರಿಸಬೇಕೆಂದು ಗೋವುಗಳಿಗೆ, ಇತರ ಪ್ರಾಣಿಗಳಿಗೆ ಮಾತ್ರ ಪ್ರವೇಶ.

## ಶ್ರೀವನ

ಶ್ರೀವನದಲ್ಲಿ ಪಕ್ಷಿಗಳನ್ನು ಆಕರ್ಷಿಸುವ ಹಣ್ಣುಗಳ ಗಿಡ ಬೆಳೆಸಲು ಆದ್ಯತೆ. ಈ ಮೂಲಕ ಪಕ್ಷಿಸಂಕುಲ ಹೆಚ್ಚಿಸುವುದು, ಬೀಜೋತ್ಪಾದನೆಗೆ ಆದ್ಯತೆ ನೀಡುವುದು ಗುರಿ.

## ತಪೋವನ

ತಪೋವನದಲ್ಲಿ ಪಂಚವಟಿ, ನಕ್ಷತ್ರ ವನ, ರಾಶಿ ವನ, ನವಗ್ರಹ ವನ ನಿರ್ಮಿಸಲಾಗುತ್ತದೆ. ಮನುಷ್ಯನ ಒತ್ತಡ, ತಲ್ಲಣ ಕಳೆಯುವಂಥ, ದಿವ್ಯಾನುಭೂತಿ ಒದಗಿಸಿ ನಿಸರ್ಗದೊಂದಿಗೆ ತಾದಾತ್ಮ್ಯ ಸಾಧಿಸುವ ಉದ್ದೇಶ ತಪೋವನದ್ದು.

## ವಸುಧೈವ ಕುಟುಂಬಕಂ

ವಿಷ್ಣುವನ್ನು ಕೇಂದ್ರವಾಗಿಸಿ ನಿರ್ಮಿಸಲಾಗುವ ಈ ವನದಲ್ಲಿ ವಿಷ್ಣುಪಂಚಾಯತನ, ಶಿವ ಪಂಚಾಯತನ, ದೇವೀ ಪಂಚಾಯತನ, ಸಪ್ತರ್ಷಿವನ, ಪಂಚವಟಿ ವನ, ವಿನಾಯಕ ವನ, ಸರಸ್ವತಿ ವನ, ಅಶೋಕವನ, ನಂದನ ವನ, ನವಗ್ರಹ ವನ, ನಕ್ಷತ್ರ ವನ, ರಾಶಿ ವನಗಳಿರುತ್ತವೆ.

ಈ ನಾಲ್ಕೂ ಪರಿಕಲ್ಪನೆಗಳಲ್ಲಿ ಔಷಧೀಯ ಗುಣಗಳಿರುವ, ಆಯುರ್ವೇದದಲ್ಲಿ ಮಹತ್ತ್ವ ಪಡೆದಿರುವ ಗಿಡಗಳನ್ನು ನೆಟ್ಟು ಔಷಧ ತಯಾರಿಕೆಗೆ ಬಳಸುವ ಉದ್ದೇಶವಿದೆ. ಎರಡು ಭಾಗಗಳಲ್ಲಿ ವಿಶಿಷ್ಟ ರೀತಿಯ ಕಲ್ಯಾಣಿಗಳು ರಚನೆಯಾಗಲಿವೆ. ಈ ಕಲ್ಯಾಣಿಯ ನೀರಿನಲ್ಲಿ ರೋಗನಿರೋಧಕ ಶಕ್ತಿ ಇರುವುದರಿಂದ ಇದನ್ನು ಕೇವಲ ಕುಡಿಯಲು ಬಳಸಲಾಗುತ್ತದೆ.

**ಕಾಂಪೌಂಡ್‌ನಲ್ಲಿ ಪಂಚವಲ್ಕ:** ಇನ್ನು ಗೋಶಾಲೆಯ 110 ಎಕರೆ ಜಾಗದ ಸುತ್ತಲೂ ಕಾಂಪೌಂಡ್‌ನಂತೆ 20 ಅಡಿ ಅಗಲದಲ್ಲಿ 'ಪಂಚವಲ್ಕ' ಪರಿಕಲ್ಪನೆಯಲ್ಲಿ ಅರಳಿ, ಆಲ, ಅತ್ತಿ, ಅಗಸೆ, ನುಗ್ಗೆಗಳನ್ನು ಬೆಳೆಯಲಾಗುತ್ತದೆ.



# ಶೈಕ್ಷಣಿಕ ಸಂಸ್ಥೆಗಳು

ಸಾಮಾಜಿಕ ವ್ಯವಸ್ಥೆಯ ಉಪಕ್ರಮದ ಮೇಲೆ ಪ್ರಭಾವ ಬೀರಬಲ್ಲ ಬಹುಪ್ರಮುಖ ಅಂಗ ಶೈಕ್ಷಣಿಕ ಕ್ಷೇತ್ರ, ಸುಶಿಕ್ಷಿತ, ಸುಸಂಸ್ಕೃತ ಸಮಾಜದ ನಿರ್ಮಾಣಕ್ಕಾಗಿಯೇ ಹುಟ್ಟಿಕೊಂಡ ರಾಷ್ಟ್ರೋತ್ಥಾನ ಪರಿಷತ್, ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಹೆಸರಿನಲ್ಲಿ ಮಹತ್ತ್ವದ ಮೈಲಿಗಲ್ಲುಗಳನ್ನಿಡುತ್ತಿದೆ. ವಿದ್ಯಾರ್ಥಿಗಳನ್ನು ಸಮರ್ಥ, ಸುಯೋಗ್ಯ ನಾಗರಿಕರನ್ನಾಗಿ ರೂಪಿಸುವ ಉದ್ದೇಶದಿಂದ 1972ರಲ್ಲಿ ಬಳ್ಳಾರಿಯ ಹಗರಿಬೊಮ್ಮನ ಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳು ಇಂದು 22 ಶಿಶುಮಂದಿರಗಳು, 13 ಪ್ರಾಥಮಿಕ ಶಾಲೆಗಳು, 10 ಪ್ರೌಢಶಾಲೆ ಹಾಗೂ ಒಂದು ವಸತಿ ಶಾಲೆಯೂ ಸೇರಿದಂತೆ ಒಟ್ಟು 6 ಕೇಂದ್ರೀಯ ಪಠ್ಯಕ್ರಮಾಧಾರಿತ (CBSE) ಶಾಲೆ ಹಾಗೂ 2 ಪದವಿಪೂರ್ವ ಕಾಲೇಜುಗಳ ಮೂಲಕ ರಾಜ್ಯಾದ್ಯಂತ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ.



## ಶಿಶುಮಂದಿರಗಳು

| ಕ್ರ.ಸಂ | ಶಿಶುಮಂದಿರಗಳು | ಸಂಖ್ಯೆ |
|---|---|---|
| 1 | ರಾಷ್ಟ್ರೋತ್ಥಾನ ಶಿಶುಮಂದಿರ, ಕಲಬುರ್ಗಿ | 1 |
| 2 | ರಾಷ್ಟ್ರೋತ್ಥಾನ ಶಿಶುಮಂದಿರ, ಕೆರೂರು ಗ್ರಾಮಾಂತರ | 1 |
| 3 | ರಾಷ್ಟ್ರೋತ್ಥಾನ ಶಿಶುಮಂದಿರ, ಧಾರವಾಡ ಗ್ರಾಮಾಂತರ | 5 |
| 4 | ರಾಷ್ಟ್ರೋತ್ಥಾನ ಶಿಶುಮಂದಿರ, ಹುಬ್ಬಳ್ಳಿ | 1 |
| 5 | ರಾಷ್ಟ್ರೋತ್ಥಾನ ಶಿಶುಮಂದಿರ, ದಾವಣಗೆರೆ | 1 |
| 6 | ಶಾರದಾ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 7 | ಸರಸ್ವತಿ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 8 | ಜ್ಞಾನಭಾರತಿ ಶಿಶುಮಂದಿರ, ಚಿತ್ರದುರ್ಗ | 1 |
| 9 | ಲಯನ್ಸ್ ಸೇವಾಭಾರತಿ ಶಿಶುಮಂದಿರ, ಬೆಂಗಳೂರು | 1 |
| 10 | ಸಾಂದೀಪನ ಶಿಶುಮಂದಿರ, ಬೆಂಗಳೂರು | 1 |
| 12 | ರಾಷ್ಟ್ರೋತ್ಥಾನ ಶಿಶುಮಂದಿರ, ಹೊಳೆಹೊನ್ನೂರು & ಗ್ರಾಮಾಂತರ | 7 |
| 13 | ಜೈ ಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಶಿಶುಮಂದಿರ, ಬೆಂಗಳೂರು | 1 |
| | **ಒಟ್ಟು ಸಂಖ್ಯೆ** | **22** |

## ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಪಠ್ಯಕ್ರಮ ಶಾಲೆಗಳು

1 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಧಾರವಾಡ (ಗಂಡು ಮಕ್ಕಳ ವಸತಿ ಶಾಲೆ)
2 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಥಣಿಸಂದ್ರ, ಬೆಂಗಳೂರು
3 ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ರಾಮಮೂರ್ತಿನಗರ, ಬೆಂಗಳೂರು
4 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಬನಶಂಕರಿ, ಬೆಂಗಳೂರು
5 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ
6 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ದಾವಣಗೆರೆ

## ರಾಜ್ಯ ಪಠ್ಯಕ್ರಮ ಪ್ರಾಥಮಿಕ ಶಾಲೆಗಳು

1. ರಾಷ್ಟ್ರೋತ್ಥಾನ ವಿದ್ಯಾಲಯ, ಕಲಬುರ್ಗಿ
2. ರಾಮಕೃಷ್ಣ ವಿದ್ಯಾಮಂದಿರ, ಕೆರೂರು
3. ರಾಷ್ಟ್ರೋತ್ಥಾನ ವಿದ್ಯಾಲಯ, ಧಾರವಾಡ
4. ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹುಬ್ಬಳ್ಳಿ
5. ರಾಷ್ಟ್ರೋತ್ಥಾನ ವಿದ್ಯಾಲಯ, ದಾವಣಗೆರೆ
6. ರಾಷ್ಟ್ರೋತ್ಥಾನ ಹಿರಿಯ ಪ್ರಾಥಮಿಕ ಶಾಲೆ, ಹಗರಿಬೊಮ್ಮನಹಳ್ಳಿ
7. ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆಹೊನ್ನೂರು
8. ಸಾಂದೀಪನ ವಿದ್ಯಾಭವನ, ಶ್ರೀರಾಂಪುರ, ಬೆಂಗಳೂರು
9. ಲಯನ್ಸ್ ಸೇವಾಭಾರತಿ ವಿದ್ಯಾಲಯ, ಉಲ್ಲಾಳು ಉಪನಗರ, ಬೆಂಗಳೂರು
10. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ, ಕಲ್ಯಾಣನಗರ, ಬೆಂ.
11. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
12. ಶಾರದಾ ಆಂಗ್ಲ ಮಾಧ್ಯಮಿಕ ವಿದ್ಯಾಲಯ, ಹಗರಿಬೊಮ್ಮನಹಳ್ಳಿ
13. ರಾಷ್ಟ್ರೋತ್ಥಾನ ವಿದ್ಯಾಲಯ, ಮುಂಗಾನಹಳ್ಳಿ

## ರಾಜ್ಯ ಪಠ್ಯಕ್ರಮ ಪ್ರೌಢಶಾಲೆಗಳು

1. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪ್ರೌಢಶಾಲೆ, ದಾವಣಗೆರೆ
3. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹೊಳೆಹೊನ್ನೂರು
4. ವಿಕಾಸ ಪ್ರೌಢಶಾಲೆ, ರಾಮಮೂರ್ತಿನಗರ, ಬೆಂಗಳೂರು
5. ಪತ್ತಿ ಆದಿನಾರಣಯ್ಯ ರಾಮಲಕ್ಷ್ಮಮ್ಮ ಪ್ರೌಢಶಾಲೆ, ಮುಂಗಾನಹಳ್ಳಿ, (ಚಿಂತಾಮಣಿ) (2)
6. ಶಾರದಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
7. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
8. ಸಾಂದೀಪನ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಶ್ರೀರಾಂಪುರ, ಬೆಂಗಳೂರು
9. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಪ್ರೌಢಶಾಲೆ, ಕಲ್ಯಾಣನಗರ, ಬೆಂಗಳೂರು
10. ಶ್ರೀ ಬೀರೇಶ್ವರ ಗ್ರಾಮಾಂತರ ಪ್ರೌಢಶಾಲೆ, ಅಬ್ಬೂರುದೊಡ್ಡಿ, ಚನ್ನಪಟ್ಟಣ

## ಪದವಿಪೂರ್ವ ಕಾಲೇಜುಗಳು

1. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು, ಥಣಿಸಂದ್ರ

## ಸಂಕಲ್ಪನಾ

ಭಾರತವನ್ನು ಸರ್ವರೀತಿಗಳಲ್ಲಿಯೂ ಪರಮ ವೈಭವ ಸ್ಥಿತಿಗೆ ಕೊಂಡೊಯ್ಯುವುದರಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ಪಾತ್ರ ಮಹತ್ತ್ವದ್ದು ಎಂಬುದನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೋತ್ಥಾನ ಪರಿಷತ್ 'ಸಂಕಲ್ಪನಾ' ಎಂಬ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.

### ಅ) ಶಿಕ್ಷಕರಿಗಾಗಿ

ಶಿಕ್ಷಕರಿಗೆ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಪರಿಣಾಮಕಾರಿಯಾಗಿಸುವ ಸಲುವಾಗಿ ಶಿಕ್ಷಕರಿಗಾಗಿ ವಿವಿಧ ಕಾರ್ಯಾಗಾರ, ಪ್ರಶಿಕ್ಷಣ ವರ್ಗಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಯೋಜನಾ ಬೈಠಕ್:** 2019–20ನೇ ಶೈಕ್ಷಣಿಕ ವರ್ಷದ ಯೋಜನಾ ಬೈಠಕ್‌ನ್ನು ಫೆಬ್ರುವರಿ 25ರಂದು ಬೆಂಗಳೂರಿನ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು.

- ರಾಜ್ಯ ಪಾಠ್ಯಕ್ರಮ ಕ್ರಿಯಾಸಮಿತಿಯ ಸಂಯೋಜಕ ಹೊ.ರಾ. ರಾಜಾರಾಮ್ ಅವರ ನೇತೃತ್ವದಲ್ಲಿ 5 ಅಂಶಗಳ (ಶಿಕ್ಷಣ, ಸಂಸ್ಕಾರ, ಸಾಮಾಜಿಕ ಚಟುವಟಿಕೆಗಳು, ದಾಖಲೆಗಳು, ಮೂಲಭೂತ ಸೌಕರ್ಯಗಳು) ಆಧಾರದ ಮೇಲೆ ಯೋಜನೆಯನ್ನು ತಯಾರಿಸಲಾಯಿತು.
- ಶಾಲೆಯು ಸಾಮಾಜಿಕ ಪರಿವರ್ತನಾ ಕೇಂದ್ರವಾಗಿ ಹೇಗೆ ಕಾರ್ಯ ನಿರ್ವಹಿಸಬೇಕು, ಅದಕ್ಕಾಗಿ ನಾವು ನಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳಬೇಕಾದ ಚಟುವಟಿಕೆಗಳ ಕುರಿತು ಚಿಂತನೆ ನಡೆಸಲಾಯಿತು.

**ಮುಖ್ಯಶಿಕ್ಷಕರ ಬೈಠಕ್:** ಮಾದರಿ ಶಾಲೆಯನ್ನು ರೂಪಿಸುವ ಕುರಿತು ಚಿಂತನೆ ನಡೆಸುವ ಸಲುವಾಗಿ ರಾಜ್ಯ ಪಠ್ಯಕ್ರಮ ಶಾಲೆಗಳ ಮುಖ್ಯಶಿಕ್ಷಕರ ಬೈಠಕ್ 2018ರ ಜುಲೈ 7 ಮತ್ತು 8ರಂದು ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಕಛೇರಿಯಲ್ಲಿ ನಡೆಯಿತು. ಎಲ್ಲ ರಾಷ್ಟ್ರೋತ್ಥಾನ ಶಾಲೆಯ ಮುಖ್ಯಶಿಕ್ಷಕರು ಉಪಸ್ಥಿತರಿದ್ದರು.

- ಕಳೆದ ವರ್ಷ ಶಾಲೆಗಳಲ್ಲಿ ನಡೆಸಿದ ಪ್ರಯೋಗಗಳು ಮತ್ತು ಅವುಗಳ ಪರಿಣಾಮಗಳನ್ನು ಹಂಚಿಕೊಳ್ಳಲಾಯಿತು. ಚರ್ಚೆ ನಡೆಸಲಾಯಿತು.
- ಶೇ. 100 ರಷ್ಟು ಫಲಿತಾಂಶ ಹಾಗೂ ಮಕ್ಕಳ ಮನೋವಿಕಾಸದ ಚಟುವಟಿಕೆಗಳ ಕುರಿತು ಚರ್ಚೆ–ಸಂವಾದ ನಡೆಸಲಾಯಿತು.

**ವಿಭಾಗವಾರು ಮುಖ್ಯಸ್ಥರ ಸಭೆ:** ಬೋಧನೆಯಲ್ಲಿ ಪಂಚಮುಖಿ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವ ಹಾಗೂ ಶೈಕ್ಷಣಿಕ ವರ್ಷದ ವಾರ್ಷಿಕ ಪಾಠಯೋಜನೆಯನ್ನು ತಯಾರಿಸಲು ಮಾರ್ಚ್ 3 ಮತ್ತು 4ರಂದು ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ರಾಷ್ಟ್ರೋತ್ಥಾನ ಸಿಬಿಎಸ್‌ಇ ಶಾಲೆಗಳ ವಿಭಾಗವಾರು ಮುಖ್ಯಸ್ಥರ ಸಭೆಯನ್ನು ಆಯೋಜಿಸಲಾಯಿತು.

ಎಲ್ಲ ವಿದ್ಯಾಕೇಂದ್ರಗಳ ವಿಭಾಗಪ್ರಮುಖರು ಪರಸ್ಪರ ಚರ್ಚಿಸಿ 1 ರಿಂದ 10ನೆಯ ತರಗತಿಯ ವರೆಗಿನ ವಾರ್ಷಿಕ ಪಾಠ್ಯ ಯೋಜನೆ (ಬೋಧನೆ ಹಾಗೂ ಮೌಲ್ಯಮಾಪನ, ಸಂಪನ್ಮೂಲಗಳ ಕ್ರೋಢೀಕರಣ, ಚಟುವಟಿಕೆಗಳ ಅಳವಡಿಸುವಿಕೆ ಕುರಿತು) ಸಿದ್ಧಪಡಿಸಿದರು.

**ಶಿಕ್ಷಕರ ಪುನಶ್ಚೇತನ ಶಿಬಿರ:** ರಾಷ್ಟ್ರೋತ್ಥಾನ ಪರಿಷತ್ತಿನ ಎಲ್ಲ ಶಾಲೆಗಳಿಗೆ (ಸಿ.ಬಿ.ಎಸ್.ಇ. ಮತ್ತು ರಾಜ್ಯ ಪಠ್ಯಕ್ರಮ ಶಾಲೆಗಳೂ ಸೇರಿದಂತೆ) ಹೊಸದಾಗಿ ನೇಮಕವಾದ ಶಿಕ್ಷಕರಿಗಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮೇ 7 ರಿಂದ 11ರ ತನಕ 5 ದಿನಗಳ ಕಾಲ ಶಿಕ್ಷಕರ ಪುನಶ್ಚೇತನ ಶಿಬಿರ ನಡೆಯಿತು.

- ಬೆಂಗಳೂರಿನ ವ್ಯಾಸ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ರಾಮಚಂದ್ರಭಟ್ ಕೋಟೆಮನೆ ಅವರು ಮುಖ್ಯ ಅಭ್ಯಾಗತರಾಗಿ ಆಗಮಿಸಿ 'ಭಾರತೀಯ ಗುರು ಪರಂಪರೆ'ಯ ಬಗೆಗೆ ಮಾರ್ಗದರ್ಶನ ಮಾಡಿದರು.
- ವಿವಿಧ ಅವಧಿಗಳಲ್ಲಿ ನಡೆದ ಶಿಬಿರದಲ್ಲಿ ಶಿಕ್ಷಣದ ಮಹತ್ತ್ವ, ಜಾತ್ಯತೀತತೆ ಮತ್ತು ಭಾರತೀಯ ಸಂಸ್ಕೃತಿ, ನಮ್ಮ ಇತಿಹಾಸ ಮತ್ತು ಅದರ ವಿಕೃತಿ, ಇತಿಹಾಸವನ್ನು ಓದಬೇಕಾದ ಅಗತ್ಯತೆ, ಪಂಚಮುಖಿ ಶಿಕ್ಷಣ ಮುಂತಾದ ವಿಷಯಗಳ ಕುರಿತು ಭಾಷಣ, ಸಂವಾದ ಹಾಗೂ ಚರ್ಚೆ ನಡೆಯಿತು.



**ಸಿ.ಬಿ.ಎಸ್.ಇ. ಶಿಕ್ಷಕರ ಸಾಮರ್ಥ್ಯ ಸಂವರ್ಧನಾ ಶಿಬಿರ:** ರಾಷ್ಟ್ರೋತ್ಥಾನ ಪರಿಷತ್ತಿನ ಸಿಬಿಎಸ್‌ಇ ಶಾಲೆಗಳ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರವು ರಾಮಮೂರ್ತಿನಗರ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮೇ 16 ರಿಂದ 18ರ ವರೆಗೆ ನಡೆಯಿತು.

- ಶಿಬಿರದಲ್ಲಿ ಶಿಕ್ಷಕರುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ವಿವಿಧ ಅವಧಿಗಳಲ್ಲಿ ಕಲಿಕೆಯಲ್ಲಿ ಚಟುವಟಿಕೆಗಳ ಮಹತ್ತ್ವ, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪದೋಷಗಳು, ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆ, ಇತಿಹಾಸದ ಕಲಿಕೆಯ ಮಹತ್ತ್ವ, ಭಾರತೀಯತೆ ಹಾಗೂ ಯೋಗಜೀವನದ ಮಹತ್ತ್ವದ ಕುರಿತು ಸಂವಾದ ನಡೆಯಿತು.
- ಖ್ಯಾತ ವಾಗ್ಮಿ ಗುರುರಾಜ್ ಕರಜಗಿ ಅವರು ಗುರು ಮತ್ತು ಶಿಕ್ಷಕರ ನಡುವಿನ ವ್ಯತ್ಯಾಸ ಎಂಬ ವಿಷಯದ ಕುರಿತು ಮಾತನಾಡಿದರು. ರಾಷ್ಟ್ರೋತ್ಥಾನದ 6 ಸಿ.ಬಿ.ಎಸ್.ಇ ಶಾಲೆಗಳ ಸುಮಾರು 500 ಶಿಕ್ಷಕರು ಶಿಬಿರದಲ್ಲಿ ಭಾಗವಹಿಸಿದರು.

**ಶಿಕ್ಷಕರ ಪುನಶ್ಚೇತನ ಶಿಬಿರ:** ಸಿಬಿಎಸ್‌ಇ ಶಾಲೆಗಳ ಶಿಕ್ಷಕರಿಗಾಗಿ ಅಕ್ಟೋಬರ್ 22 ಮತ್ತು 23ರಂದು ಬೆಂಗಳೂರಿನ ಥಣಿಸಂದ್ರ, ಬನಶಂಕರಿ ಮತ್ತು ರಾಮಮೂರ್ತಿನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸಿ.ಬಿ.ಎಸ್.ಇ. ಶಿಕ್ಷಕರ ಪುನಶ್ಚೇತನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

- ರಾಷ್ಟ್ರೋತ್ಥಾನ ನಡೆಸುತ್ತಿರುವ ಥಣಿಸಂದ್ರ ಹಾಗೂ ಹಗರಿಬೊಮ್ಮನಹಳ್ಳಿ ಶಾಲೆಗಳ ಶಿಕ್ಷಕರಿಗಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ, ರಾಮಮೂರ್ತಿನಗರ ಹಾಗೂ ಧಾರವಾಡದ ಶಾಲೆಗಳ ಶಿಕ್ಷಕರಿಗಾಗಿ ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮತ್ತು ಬನಶಂಕರಿಯ ಹಾಗೂ ದಾವಣಗೆರೆ ಶಾಲೆಗಳ ಶಿಕ್ಷಕರಿಗಾಗಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಹೀಗೆ 3 ಕಡೆಗಳಲ್ಲಿ ಸಿ.ಬಿ.ಎಸ್.ಇ. ಶಿಕ್ಷಕರ ಪುನಶ್ಚೇತನ ಶಿಬಿರ ನಡೆಯಿತು. ಒಟ್ಟು 600 ಮಂದಿ ಶಿಕ್ಷಕರು ಶಿಬಿರದಲ್ಲಿ ಭಾಗವಹಿಸಿದರು.



- ಬೆಂಗಳೂರಿನ ಮಲ್ಲೇಶ್ವರಂನ ಎಂ.ಇ.ಎಸ್. ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಗಣೇಶ ಭಟ್ಟ, ಶಿಕ್ಷಣ ತಜ್ಞರಾದ ಡಾ. ಲಕ್ಷ್ಮೀನಾರಾಯಣ್ ಹಾಗೂ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಾದ ನಿರಂಜನ್ ದಾಸ್ (ಕ್ರಿಯಾ ಸಂಶೋಧನೆ), ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು ಮಹಾನಗರ ಪ್ರಚಾರ ಪ್ರಮುಖ್ ರಾಧಾಕೃಷ್ಣ ಹೊಳ್ಳ (ಇಸ್ರೇಲ್‌ನ ಹೈಫಾ ಕದನ) ಹಾಗೂ ಆರೆಸ್ಸೆಸ್‌ನ ಹಿರಿಯ ಕಾರ್ಯಕರ್ತ ಪ್ರಮೋದ್ (ಪ್ರಾಚೀನ ಹಾಗೂ ಆಧುನಿಕ ಭಾರತದ ಸಾಧನೆಗಳು), ಬೆಂಗಳೂರು ದಕ್ಷಿಣ ವಿಭಾಗ ಕಾಲೇಜು ವಿದ್ಯಾರ್ಥಿ ಪ್ರಮುಖರಾದ ರಾಜೇಶ್ ಪದ್ಮಾರ್ (ಭಾರತೀಯ ಚಿಂತನೆಗಳು ಮತ್ತು ಸಂಸ್ಕೃತಿಯ ಪುನರುತ್ಥಾನ), ಯೂಥ್ ಫಾರ್ ಸೇವಾ ಸಂಸ್ಥೆಯ ಸದಸ್ಯೆ ಡಾ. ಆರತಿ ವಿಜಯಕುಮಾರ್ (ಧಾರ್ಮಿಕ ಭಾರತ), ಎನ್. ಎಮ್.ಕೆ.ಆರ್.ವಿ. ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಎಸ್. ಆರ್. ಲೀಲಾ (ಮಹಾಭಾರತದ ಪ್ರಸ್ತುತತೆ) ಮತ್ತು ಪದ್ಮಶ್ರೀ ಡಾ. ಪ್ರಸಾದ್ (ಭಾರತೀಯ ಹಬ್ಬಗಳು) ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ಶಿಕ್ಷಕರ ಪ್ರಶಿಕ್ಷಣ ವರ್ಗ:** ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸುತ್ತಮುತ್ತಲಿನ ಶಾಲೆಗಳ ವಿಕಾಸಕ್ಕಾಗಿ ನವೆಂಬರ್ 18 ಮತ್ತು 19 ರಂದು (ಎರಡು ದಿನಗಳ ಕಾಲ) ಶಿಕ್ಷಕರ ಪ್ರಶಿಕ್ಷಣ ವರ್ಗ ನಡೆಯಿತು.

ವಿವಿಧ ಅವಧಿಗಳಲ್ಲಿ ನಡೆದ ವರ್ಗದಲ್ಲಿ ಪ್ರಜ್ಞಾಪ್ರವಾಹದ ಪ್ರಮುಖರಾದ ರಘುನಂದನ್, ಪರಿಷತ್ತಿನ ಖಜಾಂಚಿ ಗಣಪತಿ ಹೆಗಡೆ, ಬಿ.ಜೆ.ಪಿ. ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ತೇಜಸ್ವೀ ಸೂರ್ಯ, ರಾಜ್ಯ ಪಠ್ಯಕ್ರಮ ಕ್ರಿಯಾ ಸಮಿತಿಯ ಪ್ರಮುಖರಾದ ಹೊ.ರಾ. ರಾಜಾರಾಮ್ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

ತರಬೇತಿ ಶಿಬಿರದಲ್ಲಿ ವಿವಿಧ ಜಿಲ್ಲೆಗಳ 14 ಶಾಲೆಗಳ ಶಿಕ್ಷಕರು ಮತ್ತು ಆಡಳಿತ ಮಂಡಳಿ ಸದಸ್ಯರು ಸೇರಿದಂತೆ ಒಟ್ಟು 350 ಮಂದಿ ಆಗಮಿಸಿದರು.

**ಯೋಗ ಶಿಕ್ಷಕರ ಕಾರ್ಯಾಗಾರ:** ರಾಷ್ಟ್ರೋತ್ಥಾನ ಶಾಲೆಗಳ ಯೋಗಶಿಕ್ಷಕರಿಗಾಗಿ ಡಿಸೆಂಬರ್ 21 ಮತ್ತು 22ರಂದು ಸಂವಿತ್ ಸಂಶೋಧನಾ ಯೋಗ ಪಠ್ಯಕ್ರಮ ಎಂಬ ವಿಷಯದ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಯಿತು.

- ವಿವಿಧ ಅವಧಿಗಳಲ್ಲಿ ನಡೆದ ಶಿಬಿರದಲ್ಲಿ ಎಸ್-ವ್ಯಾಸ ಫೌಂಡೇಷನ್‌ನ ಪ್ರಾಧ್ಯಾಪಕರಾದ ಸುಬ್ರಹ್ಮಣಿಯಂ, ಬೆಂಗಳೂರಿನ ನಿಮ್ಹಾನ್ಸ್ ಸಂಶೋಧನಾ ಕೇಂದ್ರದ ಸದಸ್ಯರಾದ ವೇದಮೂರ್ತಿ (ಅಷ್ಟಾಂಗ ಯೋಗದ ಪ್ರಾಕಾರಗಳು ಹಾಗೂ ವೈಶಿಷ್ಟ್ಯತೆಗಳು), ರಾಷ್ಟ್ರೋತ್ಥಾನದ ಸಿ.ಬಿ.ಎಸ್.ಇ. ಶಾಲೆಗಳ ಸಹ ಸಂಚಾಲಕರಾದ ಗಜಾನನ್ ಲೋಂಡೆ (ಸಂವಿತ್‌ನ ಯೋಗ ಫಾರ್ ಸ್ಕೂಲ್ ಪಠ್ಯಕ್ರಮದ ಉಪಯೋಗ ಮತ್ತು ನಿಯಮಗಳು) ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

- ಕಾರ್ಯಾಗಾರದಲ್ಲಿ ರಾಷ್ಟ್ರೋತ್ಥಾನದ 6 ಸಿ.ಬಿ.ಎಸ್.ಇ. ಶಾಲೆಗಳ 17 ಯೋಗ ಶಿಕ್ಷಕರು ಭಾಗವಹಿಸಿದರು.

**ಶಿಕ್ಷಕರ ಕಾರ್ಯಾಗಾರ:** ರಾಷ್ಟ್ರೋತ್ಥಾನ ಸಿ.ಬಿ.ಎಸ್.ಇ. ಶಾಲೆಯ ಶಿಕ್ಷಕರಿಗಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಡಿಸೆಂಬರ್ 21 ಮತ್ತು 22ರಂದು 2 Remodelled Structure of Evaluation ಎಂಬ ವಿಷಯದ ಬಗ್ಗೆ ಒಂದು ದಿನದ ಕಾರ್ಯಾಗಾರ ನಡೆಯಿತು.

- ಬಿಜಾಪುರದ ಶಾರದಾ ಪಬ್ಲಿಕ್ ಶಾಲೆಯ ಪ್ರಧಾನಾಚಾರ್ಯರಾದ ಜಿಮೇಶ್ ಪಾಲ್ ಅವರು ಮೌಲ್ಯಮಾಪನದ ಕುರಿತು ಮಾಹಿತಿ ನೀಡಿದರು.

- ರಾಷ್ಟ್ರೋತ್ಥಾನದ 6 ಶಾಲೆಗಳ 60 ಶಿಕ್ಷಕರು ಭಾಗವಹಿಸಿದರು.

- ಥಣಿಸಂದ್ರ ಶಾಲೆಯ ತರಗತಿ ಶಿಕ್ಷಕರು ಮತ್ತು ಸಹಾಯಕ ಶಿಕ್ಷಕರು ಆಯ್ದ ಹತ್ತು ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ಪೂರ್ವ ನಿಯೋಜಿತ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು.

**ಸಮಾಲೋಚನೆ:** ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಸಮಾಲೋಚನ ಕಾರ್ಯಕ್ರಮ ಜುಲೈ 16 ಮತ್ತು 17ರಂದು ನಡೆಯಿತು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಶಿಕ್ಷಕರ ವಿಷಯ ಮುಖ್ಯಸ್ಥರೊಂದಿಗೆ ಚರ್ಚಿಸಿ ಹೊಸ ಬದಲಾವಣೆ ಪ್ರಯೋಗಗಳ ಚರ್ಚೆ ನಡೆಸಿದರು.



**ಶಿಕ್ಷಕ-ಸಿಬ್ಬಂದಿ ವರ್ಗದ ಕುಟುಂಬ ಮಿಲನ:** ನಮ್ಮ ಶಾಲೆಗೂ ಹಾಗೂ ಶಿಕ್ಷಕ-ಸಿಬ್ಬಂದಿ ಕುಟುಂಬಕ್ಕೂ ವಿಶಿಷ್ಟವಾದ ಸಂಬಂಧವಿದೆ. ಈ ಸಂಬಂಧಗಳ ಜಾಗೃತಿಗಾಗಿ ವಿವಿಧ ವಿದ್ಯಾಲಯ/ಕೇಂದ್ರಗಳಲ್ಲಿ ಶಿಕ್ಷಕ-ಸಿಬ್ಬಂದಿ ವರ್ಗದ ಕುಟುಂಬ ಮಿಲನ ಕಾರ್ಯಕ್ರಮ ನಡೆಯಿತು. ರಾಷ್ಟ್ರೋತ್ಥಾನದ ಪ್ರಮುಖರೊಂದಿಗೆ ಮುಕ್ತ ಚರ್ಚೆ ಸಂವಾದ ನಡೆಯಿತು. ಹಗರಿಬೊಮ್ಮನಹಳ್ಳಿಯ ಕಾರ್ಯಕ್ರಮದಲ್ಲಿ ಸ್ಥಳೀಯ ನಂದೀಪುರದ ಪೂಜ್ಯ ಶ್ರೀ ಮಹೇಶ್ವರ ಸ್ವಾಮಿಜೀ ಅವರು ಆಶೀರ್ವಚನ ನೀಡಿದರು.

**ಪ್ರತಿಭಾ ಪ್ರದರ್ಶನ:** ಶಿಕ್ಷಕರಲ್ಲಿರುವ ಪ್ರತಿಭಾ ವಿಕಾಸಕ್ಕಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ಶಿಕ್ಷಕರ ಪ್ರತಿಭಾ ಪ್ರದರ್ಶನ ಕಾರ್ಯಕ್ರಮದಲ್ಲಿ ಶಿಕ್ಷಕರು ನೃತ್ಯ, ನಾಟಕ, ಸಂಗೀತ, ಕರಕುಶಲ ಕಲೆ ಹಾಗೂ ತಬಲ, ಕೀಬೋರ್ಡ್ ವಾದನಗಳ ತರಬೇತಿ ಪಡೆದು ಪ್ರದರ್ಶಿಸಿದರು.

## ಆ) ಪೋಷಕರಿಗಾಗಿ

ಶಾಲೆ ಹಾಗೂ ಶಾಲಾ ಸಂಬಂಧಿತರ ನಡುವೆ ಕೌಟುಂಬಿಕ ಮನೋಭಾವ ಮೂಡಿಸುವ ಸಲುವಾಗಿ ಹಾಗೂ ಮಕ್ಕಳ ವಿಕಾಸಕ್ಕೆ ಶಿಕ್ಷಕರು ಹಾಗೂ ಪೋಷಕರು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂಬ ಚಿಂತನೆಯಿಂದ ಪರಿಷತ್ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಪೋಷಕರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಳ್ಳುವ ವಿವಿಧ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ನಡೆಸಲಾಗುತ್ತಿದೆ.

**ಪೋಷಕರ ಸಭೆ:** ಶಾಲಾ ಚಟುವಟಿಕೆಗಳು ಹಾಗೂ ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಪರಿಚಯಿಸುವ ಸಲುವಾಗಿ ನಿರ್ದಿಷ್ಟ ದಿನಗಳಿಗೊಮ್ಮೆ ಶಾಲಾ ಪೋಷಕರ ಸಭೆಯನ್ನು ನಿರಂತರವಾಗಿ ನಡೆಸಲಾಗುತ್ತಿದೆ.

**ಪೋಷಕರ ಅಭ್ಯಾಸ ವರ್ಗ:** ಪೋಷಕರ ಜವಾಬ್ದಾರಿಯನ್ನು ಅವರಿಗೆ ಮನನ ಮಾಡುವ ಸಲುವಾಗಿ ನಮ್ಮ ಶಾಲೆಗಳಲ್ಲಿ ಪೋಷಕರ ಅಭ್ಯಾಸ ವರ್ಗಗಳನ್ನು ನಡೆಸಲಾಗುತ್ತಿದೆ. ವಿದ್ಯಾಭಾರತಿಯ ರಾಜ್ಯ ಉಪಾಧ್ಯಕ್ಷರಾದ ಪರಮೇಶ್ವರ ಹೆಗಡೆ (ಧಾರವಾಡದ ರಾ. ವಿದ್ಯಾಕೇಂದ್ರ), ಅಂಕಣಕಾರ್ತಿ, ಲೇಖಕಿ, ಶ್ರೀರಂಜನಿ ದತ್ತಾತ್ರೀ (ದಾವಣಗೆರೆಯ ನಿಟ್ಟುವಳ್ಳಿಯ ರಾ. ವಿದ್ಯಾಲಯ) ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ಪೋಷಕರ ಪುನಶ್ಚೇತನ ಶಿಬಿರ:** ಜೂನ್ 3ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಪೋಷಕರ ಪುನಶ್ಚೇತನ ಶಿಬಿರ ನಡೆಯಿತು. ತರಗತಿವಾರು ಗುಂಪುಗಳಲ್ಲಿ ನಡೆದ ಶಿಬಿರದಲ್ಲಿ ಪಾಠ ಮತ್ತು ಪಠ್ಯೇತರ ಕಲಿಕೆಯಲ್ಲಿ ಪಂಚಮುಖೀ ಶಿಕ್ಷಣದ ಅಳವಡಿಕೆಯ ಕುರಿತು ಮಾಹಿತಿ ನೀಡಲಾಯಿತು.

**ಮಾತೃಮಂದಿರ :** ವಿದ್ಯಾಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿರುವವರು ಹಾಗೂ ಇತರ ಮಹಿಳೆಯರಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಸಲುವಾಗಿ ಕೆಲ ವಿದ್ಯಾಲಯ/ಕೇಂದ್ರಗಳಲ್ಲಿ ಮಾತೃಮಂದಿರಗಳು ಕಾರ್ಯನಿರ್ವಹಿಸುತ್ತಿವೆ.

- ಹಗರಿಬೊಮ್ಮನಹಳ್ಳಿಯ ಶಾರದಾ ಮತ್ತು ಸರಸ್ವತಿ ಶಿಶುಮಂದಿರಗಳ ಮಾತೃಮಂದಿರದ ಪಾಲಕರಿಗಾಗಿ ಆಗಸ್ಟ್ 3ರಂದು ಮನೆಮದ್ದು ತರಬೇತಿ ಕಾರ್ಯಕ್ರಮ ನಡೆಯಿತು. ಸ್ಥಳೀಯ ಖ್ಯಾತ ಆಯುರ್ವೇದ ವೈದ್ಯ ಹನುಮಂತ ಮಳಲಿ ಅವರು ಆಗಮಿಸಿ ಮಾರ್ಗದರ್ಶನ ಮಾಡಿದರು. 'ಸ್ತ್ರೀಯರ ಅಲಂಕಾರಿಕ ವಸ್ತುಗಳ ತಯಾರಿಕಾ ತರಬೇತಿ' ಕಾರ್ಯಕ್ರಮದಲ್ಲಿ ಶಾರದಾ ಶಿಶುಮಂದಿರದ ಪಾಲಕರಾದ ಶಿಲ್ಪ ಅವರು ಬಳೆ, ಸರ, ಕಿವಿಯ ಜುಮುಕಿ ಮುಂತಾದವುಗಳ ತಯಾರಿಕೆಯನ್ನು ಕಲಿಸಿಕೊಟ್ಟರು.

**ಕುಟುಂಬ ಮಿಲನ:** ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ಕುಟುಂಬ ಮಿಲನ ಕಾರ್ಯಕ್ರಮ ನಡೆಯಿತು. ಕುಟುಂಬ ಪ್ರಬೋಧನದ ಉತ್ತರ ಪ್ರಾಂತ ಸಂಯೋಜಕರಾದ ನಾಗರಾಜ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು. 100ಕ್ಕೂ ಹೆಚ್ಚು ದಂಪತಿಗಳು ಆಗಮಿಸಿದರು.

**ಸ್ಪರ್ಧೆಗಳು:** ನಮ್ಮ ವಿವಿಧ ವಿದ್ಯಾಕೇಂದ್ರ/ವಿದ್ಯಾಲಯಗಳಲ್ಲಿ ಪೋಷಕರಿಗಾಗಿ ರಂಗೋಲಿ, ಚಿತ್ರಕಲೆ ಸ್ಪರ್ಧೆಗಳು ಹಾಗೂ ಕ್ರೀಡಾಕೂಟ ನಡೆಸಲಾಯಿತು. ವಿಜೇತರಿಗೆ ಬಹುಮಾನ ವಿತರಿಸಿದರು.

**ಪೋಷಕರ ರಕ್ತದಾನ ಶಿಬಿರ:** ಪೋಷಕರು ಹಾಗೂ ಸಾರ್ವಜನಿಕರಿಗಾಗಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಯಿತು. ರಕ್ತದಾನಿಗಳಿಗೆ ತುಳಸಿ ಗಿಡ ಮತ್ತು ಪುಸ್ತಕಗಳನ್ನು ಸ್ಮರಣಿಕೆಯಾಗಿ ನೀಡಲಾಯಿತು.

- ರಾಮಮೂರ್ತಿನಗರ ಜೆಜಿಆರ್ ವಿದ್ಯಾಕೇಂದ್ರದಲ್ಲಿ ರಕ್ತದಾನ ಶಿಬಿರದಂದು ಕಲಾಮೇಳ ಕಾರ್ಯಕ್ರಮವನ್ನು ಆಯೋಜಿಸಿ ವಿದ್ಯಾರ್ಥಿಗಳು ಮತ್ತು ಕಲಾ ಶಿಕ್ಷಕರು ತಯಾರಿಸಿದ ಕರಕುಶಲ ವಸ್ತುಗಳನ್ನು ಪ್ರದರ್ಶಿಸಲಾಯಿತು. ಕಲಾಮೇಳದಲ್ಲಿ ಸಂಗ್ರಹವಾದ ಹಣವನ್ನು ಬಡ ಮತ್ತು ಅನಾಥ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ 'ಯಶೋಧ ಗೃಹ' ಯೋಜನೆಗೆ ನೀಡಲಾಯಿತು.
- ಬೆಂಗಳೂರಿನ ಬನಶಂಕರಿ, ರಾಮಮೂರ್ತಿನಗರ ಹಾಗೂ ಥಣಿಸಂದ್ರದಲ್ಲಿ ವರ್ಷದಲ್ಲಿ ಎರಡು ಬಾರಿ ರಕ್ತದಾನ ಶಿಬಿರ ನಡೆದಿದ್ದು, ಒಟ್ಟು 1200ಕ್ಕೂ ಅಧಿಕ ಮಂದಿ ರಕ್ತದಾನ ಮಾಡಿದರು.

## ಇ) ಹಳೆ ವಿದ್ಯಾರ್ಥಿಗಳಿಗಾಗಿ

**ಹಳೆ ವಿದ್ಯಾರ್ಥಿಗಳ ಕೂಟ (ರೂಟ್ಸ್):** ರಾಷ್ಟ್ರೋತ್ಥಾನದ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ಸಮಾಜದ ಅನೇಕ ಪ್ರತಿಷ್ಠಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ



ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸುವ ಸಲುವಾಗಿ ಆಯಾ ಶಾಲೆಗಳಲ್ಲಿ ರೂಟ್ಸ್ (Roots ರಾಷ್ಟ್ರೋತ್ಥಾನ ಓಲ್ಡ್ ಸ್ಟೂಡೆಂಟ್ ಆರ್ಗನೈಸೇಷನ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಸೊಸೈಟಿ) ಸಮಾವೇಶಗಳನ್ನು ನಡೆಸಲಾಗುತ್ತಿದೆ. ತನ್ಮೂಲಕ ಹಳೆವಿದ್ಯಾರ್ಥಿಗಳನ್ನು ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ.

### ಈ) ವಿದ್ಯಾರ್ಥಿಗಳಿಗಾಗಿ

**ಸೃಷ್ಟಿ–ಸಂಚಾರಿ ಶಿಬಿರ :** ವಿದ್ಯಾರ್ಥಿಗಳಿಗೆ ಗ್ರಾಮಜೀವನದ ಬಗೆಗೆ ಅರಿವು ಮೂಡಿಸುವ ಸಲುವಾಗಿ ಅಕ್ಟೋಬರ್ 11 ರಿಂದ 17ರ ವರೆಗೆ 7 ದಿನಗಳ ಕಾಲ ಸೃಷ್ಟಿ–ಸಂಚಾರಿ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಪ್ರೌಢಶಾಲೆಗಳ ಆಯ್ದ 54 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

- ಗ್ರಾಮಗಳಲ್ಲಿ ಉಳಿದುಕೊಂಡು ಅಲ್ಲಿಯ ಜನರ ಜೀವನಕ್ರಮ, ಕೃಷಿ, ಅಲ್ಲಿನ ಸ್ಥಿತಿ–ಗತಿ, ಪರಸ್ಪರ ಭಾವನಾತ್ಮಕ ಸಂಬಂಧಗಳನ್ನು ತಿಳಿದುಕೊಳ್ಳುವುದು ಶಿಬಿರದ ಉದ್ದೇಶವಾಗಿತ್ತು.
- ಆರೆಸ್ಸೆಸ್‌ನ ಅಖಿಲ ಭಾರತೀಯ ಸಹ ಸರಕಾರ್ಯವಾಹ ಮುಕುಂದ್ ಅವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ಅನ್ವೇಷಣಾ ಕಾರ್ಯಗಾರ:** ರಾಷ್ಟ್ರೋತ್ಥಾನ ಪರಿಷತ್ತಿನ ಸಿಬಿಎಸ್‌ಇ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಗಸ್ಟ್ 10ರಿಂದ ಎರಡು ದಿನಗಳ 'ಇಂಧನ ಉಳಿತಾಯ' ಎಂಬ ವಿಷಯದ ಕುರಿತ 'ಅನ್ವೇಷಣಾ' ಕಾರ್ಯಗಾರವನ್ನು ಏರ್ಪಡಿಸಲಾಯಿತು.

- ವಸತಿ ಸಹಿತವಾಗಿ ನಡೆದ ಈ ಕಾರ್ಯಾಗಾರದಲ್ಲಿ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತಿನ ಸಿಬಿಎಸ್‌ಇ ಶಾಲೆಗಳ 8 ರಿಂದ 10ನೇ ತರಗತಿಯ ಒಟ್ಟು 64 ವಿದ್ಯಾರ್ಥಿಗಳು ಭಾಗವಹಿಸಿದರು.
- ವಿದ್ಯಾರ್ಥಿಗಳು ವಿವಿಧ ಮಾದರಿಗಳನ್ನು ತಯಾರಿಸಿ ಅವುಗಳ ಮಾಹಿತಿಯನ್ನು ಹಂಚಿಕೊಂಡರು. ಬೆಂಗಳೂರಿನ RVCE (ರಾಷ್ಟ್ರೀಯ ವಿದ್ಯಾಲಯ ಕಾಲೇಜ್ ಆಫ್ ಇಂಜಿನಿಯರಿಂಗ್) ಕಾಲೇಜಿನ ವಿದ್ಯಾರ್ಥಿಗಳು ಆಗಮಿಸಿ ಕೃಷಿ ಕ್ಷೇತ್ರದಲ್ಲಿ ತಾವು ಮಾಡಿದ ಉತ್ಪನ್ನವನ್ನು ಪ್ರದರ್ಶಿಸಿ ಮಾರ್ಗದರ್ಶನ ಮಾಡಿದರು.
- ವಿದ್ಯಾರ್ಥಿಗಳು ವಿವಿಧ ವಿಷಯಗಳಿಗೆ ಅನುಗುಣವಾಗಿ ಸ್ಥಳದಲ್ಲಿಯೇ ಮಾದರಿಗಳನ್ನು ತಯಾರಿಸಿ, ಪ್ರದರ್ಶಿಸಿ, ತಮ್ಮ ಕಲ್ಪನೆಯನ್ನು ಪ್ರಸ್ತುತಪಡಿಸಿದರು.



- ಅಗ್ನಿ ಸುಮುಖ ಕಂಪೆನಿಯ ಮಾಲೀಕರಾದ ಹರಿ ರಾವೋಜಿ ಉದ್ಘಾಟಿಸಿದರು. ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸೈನ್ಸ್‌ನ ಪ್ರೊ. ವೇಣುಗೋಪಾಲ್, ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಫಿಸಿಕ್ಸ್ ಮತ್ತು ಬೇಸಿಕ್ ಸೈನ್ಸ್ ವಿಭಾಗದ ಡೀನ್ ನರಸಿಂಹ ಆರ್ಯಚಿತ್, ಆರ್.ವಿ.ಸಿ.ಇ. ಕಾಲೇಜಿನ ಪ್ರಾಧ್ಯಾಪಕರಾದ ಕೇಂದ್ರಣ್ಣ ಸ್ವಾಮಿ, ವಿಜ್ಞಾನಿ ಮೈತ್ರಿ ಅವರು ಉಪಸ್ಥಿತರಿದ್ದರು.

**ಸಂಸ್ಕೃತ ಸಪ್ತಾಹ:** ವಿದ್ಯಾರ್ಥಿಗಳಲ್ಲಿ ಸಂಸ್ಕೃತದ ಕುರಿತು ಆಸಕ್ತಿ ಮೂಡಿಸುವ ಸಲುವಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಗಸ್ಟ್ 23ರಿಂದ 31ರವರೆಗೆ ಸಂಸ್ಕೃತ ಸಪ್ತಾಹವನ್ನು ಆಚರಿಸಲಾಯಿತು.

- ಪ್ರತೀದಿನ ಸಂಸ್ಕೃತದ ಅಭ್ಯಾಸ ಹಾಗೂ ಸಂಸ್ಕೃತದ ಕುರಿತು ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಸಪ್ತಾಹದ ಕೊನೆಯಲ್ಲಿ ವಿದ್ಯಾರ್ಥಿಗಳು ಸಂಸ್ಕೃತದಲ್ಲಿ ವಿವೇಕಾನಂದರ ಜೀವನಚರಿತ್ರೆಯನ್ನು ಬಿಂಬಿಸುವ ರೂಪಕವನ್ನು ಪ್ರದರ್ಶಿಸಿದರು.

**22 ಭಾಷೆಗಳ ಬಹುಭಾಷಾ ಸಂವಾದ:** ವಿದ್ಯಾರ್ಥಿಗಳಿಗೆ ಭಾರತೀಯ ಭಾಷೆಗಳನ್ನು ಹಾಗೂ ಭಾಷಾ ವೈಶಿಷ್ಟ್ಯವನ್ನು ಪರಿಚಯಿಸುವ ಸಲುವಾಗಿ 'ಏಕ ಭಾರತ – ಶ್ರೇಷ್ಠ ಭಾರತ' ಪರಿಕಲ್ಪನೆಯಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನವೆಂಬರ್ ತಿಂಗಳಿನಲ್ಲಿ 22 ದಿನಗಳ ಕಾಲ 'ಭಾಷಾ ಸಂವಾದ' ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವಿದ್ಯಾರ್ಥಿಗಳು ಪ್ರತೀ ದಿನ ವಿವಿಧ ಭಾಷೆಗಳಲ್ಲಿ ಮಾತನಾಡಿ, ಆ ಭಾಷೆಗಳ ಮಹತ್ತ್ವವನ್ನು ಪರಿಚಯಿಸಿದರು.

## ಅನುಭವಧಾರೆ



ಮಕ್ಕಳಲ್ಲಿ ಗುರುಹಿರಿಯರನ್ನು ಗೌರವಿಸುವುದರ ಪ್ರಾಮುಖ್ಯತೆಯ ಅರಿವು ಮೂಡಿಸುವ ಸಲುವಾಗಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಗಸ್ಟ್ 11ರಂದು ಅನುಭವಧಾರೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

- ಅಜ್ಜಅಜ್ಜಿ, ತಂದೆತಾಯಿ, ಮೊಮ್ಮಕ್ಕಳು – ಹೀಗೆ ಮೂರು ತಲೆಮಾರುಗಳನ್ನು ಒಂದೆಡೆ ಸೇರಿಸುವ ಪ್ರಯತ್ನ ಈ ಕಾರ್ಯಕ್ರಮದಲ್ಲಿ ನಡೆಯಿತು.
- ಬಳ್ಳಾರಿಯ ಕೊಟ್ಟೂರಿನ ಡೋಣೂರು ಶ್ರೀ ಚಾನುಕೋಟಿ ಮಠದ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಜೀ ದಿವ್ಯ ಸಾನ್ನಿಧ್ಯ ವಹಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿವಮೊಗ್ಗ ವಿಭಾಗ ಪ್ರಚಾರಕರಾದ ಬಾಲಕೃಷ್ಣ ಕಿಣಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

**ವಸತಿ ಸಹಿತ ಪ್ರಭೋದಿನಿ ಶಿಬಿರ:** ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಎದುರಿಸುವ ಬಗೆಗೆ ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ಸಕ್ಷಮಗೊಳಿಸುವ ಸಲುವಾಗಿ ಹಗರಿಬೊಮ್ಮನಹಳ್ಳಿ, ಮುಂಗಾನಹಳ್ಳಿ ಹಾಗೂ ಹೊಳೆಹೊನ್ನೂರು ಶಾಲೆಯಲ್ಲಿ ಜನವರಿಯಿಂದ ವಸತಿ ಸಹಿತ ಪ್ರಭೋದಿನಿ ಶಿಬಿರ ನಡೆಯಿತು. ವಿದ್ಯಾರ್ಥಿಗಳಿಗಾಗಿ ಗುಂಪು ಚರ್ಚೆ, ವಿಶೇಷ ತರಬೇತಿ, ಸಮಸ್ಯೆ–ಗೊಂದಲಗಳ ಪರಿಹಾರ ಮುಂತಾದ ಚಟುವಟಿಕೆಗಳು ನಡೆಯಿತು.

**ಚಿತ್ರಕಲಾ ಪ್ರದರ್ಶನ:** ಮಕ್ಕಳ ಕ್ರಿಯಾಶೀಲತೆಯನ್ನು ಉತ್ತೇಜಿಸುವ ಸಲುವಾಗಿ ಜನವರಿ 11ರಂದು ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರದಲ್ಲಿ ಚಿತ್ರಕಲಾ ಸ್ಪರ್ಧೆ ಮತ್ತು ಪ್ರದರ್ಶನ ಕಾರ್ಯಕ್ರಮ ನಡೆಯಿತು. ಚಿತ್ರದುರ್ಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕ್ಷಕರಾದ ಪಿ. ಸಾಯಿಪ್ರಸಾದ್ ಹಾಗೂ ವನ್ಯಜೀವಿ ಛಾಯಗ್ರಾಹಕ ಕಾರ್ತಿಕ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

**ಸ್ವದೇಶಿ ಸಪ್ತಾಹ:** ಸೆಪ್ಟೆಂಬರ್ 24ರಿಂದ ನವೆಂಬರ್ 1ರ ತನಕ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸ್ವದೇಶಿ ಸಪ್ತಾಹವನ್ನು ಹಮ್ಮಿಕೊಳ್ಳಲಾಯಿತು. ಸ್ವದೇಶಿ ಕಲ್ಪನೆ ಹಾಗೂ ಮಹತ್ತ್ವ, ಆಯುರ್ವೇದ ಪದ್ಧತಿ, ಆಹಾರ ಪದ್ಧತಿ, ವೇಷಭೂಷಣ, ಐತಿಹಾಸಿಕ ಸ್ಮಾರಕಗಳು, ತಾಂತ್ರಿಕತೆಯಲ್ಲಿನ ಅಭಿವೃದ್ಧಿ ಮುಂತಾದ ವಿಷಯಗಳನ್ನು ತಿಳಿಸುವ ಮೂಲಕ ದೇಶದ ವೈಶಿಷ್ಟ್ಯತೆಗಳನ್ನು ಪರಿಚಯಿಸುವ ಉದ್ದೇಶದಿಂದ ನಡೆದ ಸಪ್ತಾಹದಲ್ಲಿ ಪ್ರತೀ ದಿನ ವಿವಿಧ ವಿಷಯಗಳ ಕುರಿತು ಉಪನ್ಯಾಸ ಹಾಗೂ ಚಟುವಟಿಕೆಗಳನ್ನು ಆಯೋಜಿಸಲಾಯಿತು.

**ಉಚಿತ ನೇತ್ರ ತಪಾಸಣಾ ಶಿಬಿರ:** ಮಕ್ಕಳ ಆರೋಗ್ಯ ರಕ್ಷಣೆಯ ಹಿನ್ನೆಲೆಯಲ್ಲಿ ವಿವಿಧ ಶಿಬಿರಗಳನ್ನು ಆಯೋಜಿಸಲಾಯಿತು.

ಧಾರವಾಡದ ಮುಮ್ಮಿಗಟ್ಟಿಯ ರಾಷ್ಟ್ರೋತ್ಥಾನ ವಿದ್ಯಾಲಯ ಹಾಗೂ ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಯಿತು. ಧಾರವಾಡದ ಹಿರಿಯ ನೇತ್ರ ತಜ್ಞರಾದ ಡಾ॥ ವಿ.ವಿ. ಮನಗುಳಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಡಾ॥ ವಿ.ವಿ. ಮನಗುಳಿ ಅವರು ಒಂದು ಮಗುವಿನ 10ನೇ ತರಗತಿಯವರೆಗಿನ ಶಾಲಾ ಶುಲ್ಕವನ್ನು ಭರಿಸುವುದಾಗಿ ತಿಳಿಸಿದರು.

# ದೆಹಲಿಯಲ್ಲಿ ಉಪರಾಷ್ಟ್ರಪತಿ ಹಾಗೂ ರಕ್ಷಣಾ ಸಚಿವರೊಂದಿಗೆ ಸಂವಾದ

ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ 13 ದಿನಗಳ ಪ್ರವಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವಿಶೇಷವಾಗಿ ವಿದ್ಯಾರ್ಥಿಗಳು ಮಾನಸಿಕ, ಬೌದ್ಧಿಕ ವಿಕಾಸದ ಹಿನ್ನೆಲೆಯಿಂದ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಣೆಯ ಜೊತೆಗೆ ಪ್ರತಿಷ್ಠಿತ ವ್ಯಕ್ತಿಗಳೊಂದಿಗೆ ಸಂವಾದವನ್ನು ನಡೆಸಿದರು.

- ದೆಹಲಿಯ ಉಪರಾಷ್ಟ್ರಪತಿಗಳ ಹಾಗೂ ರಕ್ಷಣಾ ಇಲಾಖೆಗೆ ಭೇಟಿ ನೀಡಿದ ವಿದ್ಯಾರ್ಥಿಗಳು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಹಾಗೂ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಪ್ರತ್ಯೇಕವಾಗಿ ಸಂವಾದ ನಡೆಸಿದರು. ರಕ್ಷಣಾ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಸರ್ಜಿಕಲ್ ಸ್ಟ್ರೈಕ್ ನಡೆದ ರೀತಿಯನ್ನು ವಿವರಿಸಿದರು.
- ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಹಾಗೂ ಅವರ ಬೌದ್ಧಿಕ ಸಾಮರ್ಥ್ಯಗಳ ಬಗೆಗೆ ಆಯಾ ಇಲಾಖೆಗಳು ಸಾಮಾಜಿಕ ಜಾಲತಾಣದಲ್ಲಿ (ಟ್ವಿಟ್ಟರ್ ಮತ್ತು ಫೇಸ್‌ಬುಕ್‌ನಲ್ಲಿ) ಮೆಚ್ಚುಗೆ ವ್ಯಕ್ತಪಡಿಸಿದವು. ನಿರ್ಮಲಾ ಸೀತಾಮನ್ ಅವರೇ ಸ್ವತಃ ಮೆಚ್ಚುಗೆ ವ್ಯಕ್ತಪಡಿಸಿದರು.
- ಬೆಂಗಳೂರಿನಿಂದ ದೆಹಲಿ ಮಾರ್ಗವಾಗಿ ಶಿಮ್ಲಾಗೆ ತೆರಳಿ ಅಲ್ಲಿ ಸಾಂಗ್ಲಾ, ಸ್ಪೀಲೌ, ರಿಕಾಂಗ್ ಪಿಓ, ನಮ್‌ಗೀಯಾ ಮುಂತಾದ ಚೈನಾ ಗಡಿಭಾಗಗಳಿಗೆ ಭೇಟಿ ನೀಡಿ ಅಲ್ಲಿನ ಜನರು ಹಾಗೂ ಸೈನಿಕರೊಂದಿಗೆ ಸಂವಾದ ನಡೆಸಿದರು. ಶಿಮ್ಲಾದ ಹನುಮಂತನ ಮಂದಿರ, ದೆಹಲಿಯ ಅಕ್ಷರಧಾಮ, ಕುತುಬ್‌ಮಿನಾರ್, ಆಗ್ರಾ, ಮಥುರಾ ಹಾಗೂ ದೆಹಲಿಯ ಸರೋಜಿನಿ ಮಾರ್ಕೆಟ್‌ಗೆ ಭೇಟಿ ನೀಡಿ ವೀಕ್ಷಿಸಿದರು.
- ಒಟ್ಟು 27 ವಿದ್ಯಾರ್ಥಿಗಳು ಹಾಗೂ 3 ಶಿಕ್ಷಕಿಯರು ಸೇರಿದಂತೆ ಒಟ್ಟು 35 ಮಂದಿ ಭಾಗವಹಿಸಿದರು.












# ರಾಷ್ಟ್ರೋತ್ಥಾನ ಶೈಕ್ಷಣಿಕ ಸಂಸ್ಥೆಗಳು ನಡೆಸಿದ ಸಮಾನ ಕಾರ್ಯಕ್ರಮಗಳು

ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಪೂರಕ ಶಿಕ್ಷಣ ನೀಡುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಿದ ಸಮಾನ ಕಾರ್ಯಕ್ರಮಗಳು ಇಂತಿವೆ.

## ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ

ನೂತನ ಶೈಕ್ಷಣಿಕ ವರ್ಷಾರಂಭದ ಸಂದರ್ಭದಲ್ಲಿ ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಸಲುವಾಗಿ ವಿದ್ಯಾರಂಭ ಕಾರ್ಯಕ್ರಮವನ್ನು ಹಾಗೂ ಹೊಸದಾಗಿ ಸೇರ್ಪಡೆಗೊಂಡ ಚಿಣ್ಣರಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

- ಶಿವಮೊಗ್ಗದ ರಾಮಕೃಷ್ಣ ಆಶ್ರಮದ ವಿನಯಾನಂದ ಸ್ವಾಮಿಜೀ (ಹೊಳೆಹೊನ್ನೂರು), ದಾವಣಗೆರೆಯ ವಿರಕ್ತ ಮಠದ ಪೂಜ್ಯ ಶ್ರೀ ಬಸವಪ್ರಭು ಮಹಾಸ್ವಾಮಿಜೀ (ದಾವಣಗೆರೆ), ಭಾರತೀಯ ಶಿಕ್ಷಣ ಮಂಡಳಿಯ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿ ಶಂಕರಾನಂದ (ಧಾರವಾಡ), ದಾವಣಗೆರೆಯ ಶ್ರೀರಾಮಕೃಷ್ಣ ಆಶ್ರಮದ ತ್ಯಾಗೇಶ್ವರಾನಂದ ಮಹಾರಾಜ (ದಾವಣಗೆರೆ), ಬೆಂಗಳೂರಿನ ರಾಮಕೃಷ್ಣ ಮಠದ ಶ್ರೀಗಿರಿಜಾತ್ಮಾನಂದ ಸ್ವಾಮಿಜೀ (ಬನಶಂಕರಿ), ಕೆ.ಆರ್. ಪುರದ ರಾಮಕೃಷ್ಣ ಮಠದ ಪೂಜ್ಯ ಶ್ರೀ ಚಂದ್ರೇಶಾನಂದ ಸ್ವಾಮಿಜೀ (ಕಲ್ಯಾಣನಗರ), ಕೆ.ಆರ್. ಪುರಂನ ಸಾಧನಾ ಕೇಂದ್ರದ ಪೂಜ್ಯ ಶ್ರೀ ಚಂದ್ರೇಶಾನಂದ ಸ್ವಾಮಿಜೀ (ರಾಮಮೂರ್ತಿನಗರ), ಬೆಂಗಳೂರಿನ ರಾಮಕೃಷ್ಣ ಮಠದ ಶ್ರೀ ನಿಷ್ಠಾತ್ಮಾನಂದ ಸ್ವಾಮಿಜೀ (ಥಣಿಸಂದ್ರ), ಹುಬ್ಬಳ್ಳಿಯ ಚಿನ್ಮಯ ಮಿಷನ್‌ನ ಪೂಜ್ಯ ಕೃತಾತ್ಮಾನಂದ ಸ್ವಾಮಿಜೀ (ಹುಬ್ಬಳ್ಳಿ), ಶ್ರೀ ಚರಂತೇಶ್ವರ ಮಹಾಸ್ವಾಮಿಗಳು (ಹಗರಿಬೊಮ್ಮನಹಳ್ಳಿಯ ಶಾರದಾ ಶಿಶುಮಂದಿರ), ಹೃಷಿಕೇಶದಲ್ಲಿರುವ ಯೋಗತಜ್ಞ ಪರಮಪೂಜ್ಯ ಮಹಾಂತ ದೇವರು ಸ್ವಾಮಿಜೀ (ಧಾರವಾಡದ ಮುಮ್ಮಿಗಟ್ಟಿ) ಮುಂತಾದವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಕ್ಕಳ ಕೈಯಲ್ಲಿ ಓಂಕಾರ ಬರೆಸಿ ಅಕ್ಷರಾಭ್ಯಾಸ ಮಾಡಿಸಿದರು.






- ದಾವಣಗೆರೆಯಲ್ಲಿ ನಡೆದ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ್ಯ ಪ್ರಚಾರಕರಾದ ಗುರುಪ್ರಸಾದ್ ಹಾಗೂ 2018–19ರ ಶೈಕ್ಷಣಿಕ ವರ್ಷದ 'ಉನ್ನತಿ' (ರಿಜಿಸ್ಟ್ರೇಷನ್ ಓಪನಿಂಗ್ ಸೆರಮನಿ) ಕಾರ್ಯಕ್ರಮದಲ್ಲಿ ಖ್ಯಾತ ಹೋಮಿಯೊಪತಿ ವೈದ್ಯರಾದ ಡಾ. ಆರತಿ ಸುಂದರೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿದರು.
- ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ 7 ಶಿಶುಮಂದಿರದ ಮಕ್ಕಳು ಉಪಸ್ಥಿತರಿದ್ದರು.

## ಶಾಲಾ ಮಂತ್ರಿಮಂಡಲ

ದೇಶದ ನೀತಿ–ನಿರ್ಧಾರಗಳನ್ನು ನಿರ್ಧರಿಸುವ ಮಹತ್ತ್ವದ ರಾಜಕೀಯ ವ್ಯವಸ್ಥೆಯ ಬಗೆಗೆ, ಚುನಾವಣೆ, ಸೂಕ್ತ ಅಭ್ಯರ್ಥಿಗಳ ಆಯ್ಕೆ, ಚುನಾಯಿತ ಮಂತ್ರಿಮಂಡಲದ ಕಾರ್ಯಚಟುವಟಿಕೆಗಳ ಬಗೆಗೆ ಹಾಗೂ ದೇಶದ ಪ್ರಜಾಪ್ರಭುತ್ವದ ಬಗೆಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಶಾಲಾ ಮಂತ್ರಿಮಂಡಲ ರಚನೆ ಮಾಡಲಾಗುತ್ತಿದೆ.

- ಮತದಾನದ ಮೂಲಕ ಶಾಲಾ ಸಂಸತ್ತಿನ ಪ್ರತಿನಿಧಿಗಳ ಆಯ್ಕೆ ಮಾಡಿ, ಮತದಾನ, ಪ್ರತಿಜ್ಞಾವಿಧಿ ಹಾಗೂ ನಿರಂತರ ಸಂಸತ್ ಅಧಿವೇಶನ (ಶಾಲಾ ಮಂತ್ರಿಮಂಡಲದ ಅಧಿವೇಶನ)ಗಳನ್ನು ನಡೆಸಲಾಗುತ್ತಿದೆ.
- ವಿವಿದೆಡೆಗಳಲ್ಲಿ ನಡೆದ ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ನ್ಯಾ। ಎ.ಎಂ. ನಳಿನಿಕುಮಾರಿ (ಥಣಿಸಂದ್ರ), ಮುಖ್ಯಮಂತ್ರಿ ಪದಕ ಪಡೆದ ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್ ಡಿ.ಕೆ. ಶೇಖರ್ (ಬನಶಂಕರಿ), ಭಾರತೀಯ ಸೇನೆಯಲ್ಲಿ 26 ವರ್ಷಗಳಿಂದ ಸೇವೆಸಲ್ಲಿಸಿದ ಕರ್ನಲ್ ಕೆ.ಎನ್. ಘೋರ್ಪಡೆ ಹಾಗೂ ನಮಸ್ತೆ ಕ್ರೆಡಿಟ್‌ನ ಸಿ.ಇ.ಓ. ಕೃಷ್ಣನ್ ಪರಮೇಶ್ವರನ್ (ಕಲ್ಯಾಣನಗರ) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಪ್ರತಿಜ್ಞಾವಿಧಿ ಬೋಧಿಸಿದರು.



## ವ್ಯಕ್ತಿತ್ವ ವಿಕಸನ ಶಿಬಿರ/ ಬೇಸಿಗೆ ಶಿಬಿರ

ಮಕ್ಕಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿ ಅವರ ಬೌದ್ಧಿಕ, ಮಾನಸಿಕ ಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನದ ವಿದ್ಯಾಸಂಸ್ಥೆಗಳಲ್ಲಿ ಬೇಸಿಗೆ ಶಿಬಿರ/ವ್ಯಕಿತ್ವ ವಿಕಸನ ಶಿಬಿರ (ಚಿಗುರು ಇತ್ಯಾದಿ) ಗಳನ್ನು ನಡೆಸಲಾಗುತ್ತಿದೆ.

- ಹುಬ್ಬಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ (14 ದಿನಗಳ ಕಾಲ), ಲಯನ್ಸ್ ಸೇವಾಭಾರತಿ ವಿದ್ಯಾಲಯ (ಒಂದು ವಾರ) ಹಾಗೂ ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಕ್ತಿತ್ವ ವಿಕಸನ ಶಿಬಿರ ನಡೆಯಿತು.
- ಶಿಬಿರದಲ್ಲಿ ಮಕ್ಕಳಿಗೆ ಹಾಡು, ಕಥೆ, ಶ್ಲೋಕ, ಯೋಗ, ಸಂಸ್ಕೃತ ಸಂಭಾಷಣೆಯ ಮಾರ್ಗದರ್ಶನ ಹಾಗೂ ಅನುಶಾಸನ, ಸಮಯ ಪಾಲನೆ, ಶಿಸ್ತುಗಳ ಕುರಿತು ಜಾಗೃತಿ ಮೂಡಿಸಲಾಯಿತು.
- ಲಯನ್ಸ್ ಸೇವಾಭಾರತಿಯಲ್ಲಿ ನಡೆದ ಶಿಬಿರದಲ್ಲಿ ಬೆಂಗಳೂರಿನ ಶ್ರೀಸುಬ್ರಹ್ಮಣ್ಯ ಎಜುಕೇಷನ್ ಟ್ರಸ್ಟ್‌ನ ಸಂಸ್ಥಾಪಕರಾದ ಡಾ. ಮಂಜಪ್ಪ ವಿಜಯಪುರ (ಯೋಗದ ಮಹತ್ತ್ವ, ಉಪಯೋಗ ಮತ್ತು ಅಳವಡಿಕೆ), ಖ್ಯಾತ ವಕೀಲರಾದ ಪ್ರಕಾಶ್ (ಭಾರತೀಯ ಸಂಸ್ಕೃತಿ ಮತ್ತು ಸಂಸ್ಕಾರ) ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು. ಅನುಪಯುಕ್ತ ವಸ್ತುಗಳಿಂದ ಅಲಂಕಾರಿಕ ವಸ್ತುಗಳ ತಯಾರಿಕೆ, ಚಿತ್ರಗಳ ರಚನೆ ಹಾಗೂ ಬಣ್ಣ ತುಂಬುವ ವಿಧಾನ, ದಿನಚರಿಯುಕ್ತ ಜೀವನದ ಮಹತ್ತ್ವ ಮುಂತಾದವನ್ನು ತಿಳಿಸಿಕೊಡಲಾಯಿತು.

## ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ರಾಷ್ಟ್ರೋತ್ಥಾನ ಪರಿಷತ್‌ನ ಅನೇಕ ಶಾಲೆಗಳಲ್ಲಿ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಯಿತು.

- ಯೋಗದ ಕುರಿತು ಮಕ್ಕಳಲ್ಲಿ ಆಸಕ್ತಿ ಮೂಡಿಸುವ ಸಲುವಾಗಿ ಯೋಗಾಸನ ಪ್ರದರ್ಶನ, ಯೋಗಾಸನ ಸ್ಪರ್ಧೆ, ಯೋಗಪಿರಮಿಡ್ಡುಗಳ ರಚನೆ, ಸಾಮೂಹಿಕ ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ರಾಷ್ಟ್ರೋತ್ಥಾನ ಶಾಲೆಗಳ ವತಿಯಿಂದ ಯೋಗದಿನದ ಪ್ರಯುಕ್ತ ಸುತ್ತಮುತ್ತಲಿನ ಸರ್ಕಾರೀ ಹಾಗೂ ಅರೆ ಸರ್ಕಾರೀ ಶಾಲೆಗಳಲ್ಲಿ ಕನಿಷ್ಠ ಒಂದು ವಾರಗಳ ಕಾಲ ಉಚಿತ ಯೋಗ ಶಿಬಿರಗಳನ್ನು ಆಯೋಜಿಲಾಯಿತು. ಹೀಗೆ ಒಟ್ಟು 40ಕ್ಕೂ ಅಧಿಕ ಶಾಲೆಗಳಲ್ಲಿ ಉಚಿತ ಯೋಗ ಶಿಬಿರ ನಡೆಯಿತು. ಈ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಯೋಗದಿನದಂದು ರಾಷ್ಟ್ರೋತ್ಥಾನ ಶಾಲೆಗಳಿಗೆ ಆಗಮಿಸಿ ಯೋಗ ಪ್ರದಶಿಸಿದರು.
- 4ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ಡಾ. ಗಾಯತ್ರಿ ದೇವರಾಜ್ (ದಾವಣಗೆರೆ), ಆರ್ಟ್ ಆಫ್ ಲೀವಿಂಗ್‌ನ ಆನಂದ್ ಪಾಟೀಲ್ ಮತ್ತು ಪತಂಜಲಿ ಯೋಗ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಪ್ರಸನ್ನಕುಮಾರ್ (ಚಿತ್ರದುರ್ಗ), ಆರ್ಟ್ ಆಫ್ ಲಿವಿಂಗ್‌ನ ಮೀನಾ ವಾಗ್ರೇ (ಕಲ್ಯಾಣನಗರದ ಜೆಜಿಆರ್‌ವಿ), ಖ್ಯಾತ ಹೃದಯ ತಜ್ಞೆ ವಿಜಯಲಕ್ಷ್ಮಿ ಬಾಳೆಕುಂದ್ರಿ, ಭಾರತೀಯ ಸೇನೆಯ ನಿವೃತ್ತ ಲೆಫ್ಟಿನೆಂಟ್ ಗಿರೀಶ್ ಕಶ್ಯಪ್ (ಬನಶಂಕರಿ), ಬೆಂಗಳೂರಿನ ಶ್ರೀ ರವಿಶಂಕರ ವಿದ್ಯಾಮಂದಿರ ಟ್ರಸ್ಟ್‌ನ ನಿರ್ವಾಹಕರಾದ ಆಚಾರ್ಯ ಪ್ರಶಾಂತ್ ವಿ. ಕುಮಾರ್ (ಥಣಿಸಂದ್ರ), ಹಗರಿಬೊಮ್ಮನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶೇಖರ್ ಹೊರಪೇಟೆ (ಹಗರಿಬೊಮ್ಮನಹಳ್ಳಿ), ಆರೋಗ್ಯ ಭಾರತಿಯ ಧಾರವಾಡ ವಿಭಾಗದ ಸಂಯೋಜಕ ಮುತ್ತಪ್ಪ ನಲವಡಿ (ಹುಬ್ಬಳ್ಳಿ) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

- ಬನಶಂಕರಿ ವಿದ್ಯಾಕೇಂದ್ರದ ವತಿಯಿಂದ ಸಾರ್ವಜನಿಕರಲ್ಲಿ ಯೋಗದ ಅರಿವು ಮೂಡಿಸಲು ಬನಶಂಕರಿಯ ಪ್ರಮುಖ ಸ್ಥಳಗಳಲ್ಲಿ ಬೀದಿಯೋಗ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

**ವಾರ್ಷಿಕ ಕ್ರೀಡೋತ್ಸವ:** ಮಕ್ಕಳ ಕ್ರೀಡಾಸಾಮರ್ಥ್ಯವನ್ನು ಹೊರತರುವ ಸಲುವಾಗಿ ರಾಷ್ಟ್ರೋತ್ಥಾನದ ಎಲ್ಲ ಶಾಲೆಗಳಲ್ಲಿ ಕ್ರೀಡೋತ್ಸವ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು.

- ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಮಾನಿಸಲಾಯಿತು.
- ರಾಷ್ಟ್ರಮಟ್ಟದ ಅಥ್ಲೆಟಿಕ್ಸ್ ಕ್ರೀಡಾಪಟು ಏಕಲವ್ಯ ಪ್ರಶಸ್ತಿ ಪುರಸ್ಕೃತ ಎಂ.ಕೆ. ಆಶಾ, ಅಂತರರಾಷ್ಟ್ರೀಯ ಮಟ್ಟದ ಶಾಟ್‌ಪುಟ್ ಆಟಗಾರ್ತಿ ಲಿಖಿತ ಹೆಚ್.ಎನ್. (ಥಣಿಸಂದ್ರದ ರಾ. ವಿದ್ಯಾಕೇಂದ್ರ), ಅಂತರರಾಷ್ಟ್ರೀಯ ಹಾಕಿ ತಂಡದ ಕ್ರೀಡಾಪಟು ದೇವರಾಜಮ್ಮ, ಭಾರತೀಯ ಅಥ್ಲೆಟಿಕ್ ತಂಡದ ತರಬೇತುದಾರರಾದ ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ವಿ.ಆರ್. ಬೀಡೂಜಿ (ರಾಮಮೂರ್ತಿನಗರದ ಜೆಜಿಆರ್ ವಿದ್ಯಾಕೇಂದ್ರ) ಮುಂತಾದವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

## ಸಂಕಲ್ಪ

10ನೇ ತರಗತಿ ವಿದ್ಯಾಭ್ಯಾಸ ಪೂರೈಸಿ ಶಾಲೆಯಿಂದ ಬೀಳ್ಕೊಡಲಿರುವ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ವರ್ಷದ ಅಂತ್ಯದ ವೇಳೆಗೆ ಆಯಾ ವಿದ್ಯಾಸಂಸ್ಥೆಗಳಲ್ಲಿ 'ಸಂಕಲ್ಪ' ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಪೂಜ್ಯ ಸ್ವಾಮಿಜೀಗಳ ಹಾಗೂ ಸಮಾಜದ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ ವಿದ್ಯಾರ್ಥಿಗಳು ಭಾರತ ದೇಶದ ನಕ್ಷೆಯ ಚಿತ್ರದ ಮೇಲೆ ದೀಪ ಬೆಳಗಿಸಿ ಭಾರತಕ್ಕಾಗಿ ಬದುಕುವ ಸಂಕಲ್ಪ ಕೈಗೊಂಡರು.





## ವಾರ್ಷಿಕೋತ್ಸವ

ಮಕ್ಕಳಲ್ಲಿ ಅಡಕವಾಗಿರುವ ಸುಪ್ತಪ್ರತಿಭೆಗಳನ್ನು ಹೊರಹೊಮ್ಮಿಸುವ ಸಲುವಾಗಿ ಪರಿಷತ್‌ನ ಎಲ್ಲ ವಿದ್ಯಾಸಂಸ್ಥೆಗಳಲ್ಲಿ ಪ್ರತೀವರ್ಷ ಡಿಸೆಂಬರ್–ಜನವರಿ ತಿಂಗಳಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ.

- ನರ್ಸರಿ, ಪ್ರಾಥಮಿಕ, ಹಿರಿಯ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಿವಿಧ ಶೀರ್ಷಿಕೆಗಳಲ್ಲಿ ವಾರ್ಷಿಕೋತ್ಸವ (ರಾಷ್ಟ್ರೋತ್ಸವ) ನಡೆಯಿತು. ವಿದ್ಯಾರ್ಥಿಗಳು ಆಯಾ ಶೀರ್ಷಿಕೆಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.
- ಕಳೆದ ಶೈಕ್ಷಣಿಕ ಸಾಲಿನಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು
- ಚಿತ್ರದುರ್ಗದ ಖ್ಯಾತ ನ್ಯಾಯಾವಾದಿ ಡಿ.ಕೆ. ಶೀಲಾ, ಚಿತ್ರದುರ್ಗದ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ರುದ್ರಮುನಿ (ಚಿತ್ರದುರ್ಗ), ಬೆಸ್ಕಾಂನಲ್ಲಿ ಹಣಕಾಸು ನಿರ್ದೇಶಕರಾಗಿರುವ ಆರ್.ಸಿ. ಚೇತನ್, ಬಿ.ವಿ.ಜಿ. ಇಂಡಿಯಾ ಪ್ರೈ. ಲಿ.ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಸನ್ನ ಶಾಸ್ತ್ರಿ, ಡೇವಿನ್ ಇಂಟರ್‌ನ್ಯಾಷನಲ್ ಶಾಲೆಯ ನಿರ್ವಾಹಕರಾದ ಶ್ವೇತಾ, ಎ.ಎನ್.ಝಡ್. ಆಪರೇಷನ್ಸ್ ಅಂಡ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ವ್ಯವಸ್ಥಾಪಕರಾದ ಜಯಶ್ರೀ ಗಂಗಯ್ಯ (ಥಣಿಸಂದ್ರ), ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಸಹಪ್ರಾಂತ ಸಂಘಚಾಲಕರಾದ ಅರವಿಂದರಾವ್ ದೇಶಪಾಂಡೆ (ಧಾರವಾಡ), ಭಾರತೀಯ ಸೇನೆಯ ನಿವೃತ್ತ ಸೇನಾಧಿಕಾರಿ ಕ್ಯಾಪ್ಟನ್ ಪವನ್‌ಕುಮಾರ್, ದಾವಣಗೆರೆಯ ಲೋಕಸಭಾ ಸದಸ್ಯರಾದ ಜಿ.ಎಂ. ಸಿದ್ದೇಶ್ವರ, ದಾವಣಗೆರೆ ನಗರದ ಖ್ಯಾತ ವೈದ್ಯರಾದ ಡಾ. ಯಶವಂತ್, ಮಾಯಕೊಂಡ ವಿಧಾನಸಭಾ ಶಾಸಕರಾದ ಪ್ರೊ. ಲಿಂಗಣ್ಣ (ದಾವಣಗೆರೆಯ ರಾ. ವಿದ್ಯಾಕೇಂದ್ರ), ಹುಬ್ಬಳ್ಳಿ ನಗರ ವಲಯದ ಕ್ಷೇತ್ರ ಶಿಕ್ಷಣ ಸಂಯೋಜಕ ಪ್ರಭಾಕರ (ಹುಬ್ಬಳ್ಳಿ), ಅಂತಾರಾಷ್ಟ್ರೀಯ ಕ್ರೀಡಾಪಟು ರಮೇಶ ಪೂಜಾರಿ (ಧಾರವಾಡದ ರಾ. ವಿದ್ಯಾಕೇಂದ್ರ), ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಸಹ ಕಾರ್ಯವಾಹ ತಿಪ್ಪೇಸ್ವಾಮಿ (ಹಗರಿಬೊಮ್ಮನಹಳ್ಳಿ ರಾ. ವಿದ್ಯಾಕೇಂದ್ರ ಸಿ.ಬಿ.ಎಸ್.ಇ. ಶಾಲೆ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

# ವಿವಿಧ ದಿನಾಚರಣೆಗಳು

ಮಕ್ಕಳಲ್ಲಿ ಸಾಮಾಜಿಕ ಕಳಕಳಿ ಹಾಗೂ ದೇಶ–ಧರ್ಮ–ಸಂಸ್ಕೃತಿಯ ಬಗೆಗೆ ಅಭಿಮಾನ, ಗೌರವ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ವಿವಿಧ ದಿನಾಚರಣೆಗಳನ್ನು ಆಚರಿಸಲಾಗುತ್ತಿದೆ.

**ವಿಶ್ವ ಪರಿಸರ ದಿನಾಚರಣೆ:** ಪರಿಸರದ ಬಗೆಗೆ ಜಾಗೃತಿ ಹಾಗೂ ಅದನ್ನು ಉಳಿಸಿ, ಪೋಷಿಸುವ ಅಗತ್ಯದ ಬಗೆಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆಯು ಜೂನ್ 5ನ್ನು ವಿಶ್ವ ಪರಿಸರ ದಿನ ಎಂದು ಘೋಷಿಸಿತು. ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರದ ಮಹತ್ತ್ವದ ಬಗ್ಗೆ ಮಕ್ಕಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಜೂನ್ 5ರಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- ವಿದ್ಯಾರ್ಥಿಗಳು ನೀರಿನ ಮಿತಬಳಕೆ ಬಗ್ಗೆ, ಪರಿಸರದ ಸ್ವಚ್ಛತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಹಾಗೂ ಶಾಲೆಯ ಆವರಣವನ್ನು ಪ್ಲಾಸ್ಟಿಕ್ ಮುಕ್ತವಾಗಿಸುವ ಪ್ರತಿಜ್ಞೆಯನ್ನು ಸ್ವೀಕರಿಸಿದರು.
- ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ಬೀದಿಗಳಲ್ಲಿ ಜಾಥಾ, ನಾಟಕ ಕಾರ್ಯಕ್ರಮ ನಡೆಯಿತು.



- ವಿದ್ಯಾರ್ಥಿಗಳಿಗೆ ಬೀಜಗಳನ್ನು ನೀಡಿ ಮನೆಯಲ್ಲಿ ಅವುಗಳನ್ನು ನೆಟ್ಟು ಗಿಡ ಬೆಳೆಸುವಂತೆ ಮಾರ್ಗದರ್ಶನ ಮಾಡಲಾಯಿತು.



**ವಿಶ್ವ ಜನಸಂಖ್ಯಾ ದಿನಾಚರಣೆ:** ಜನಸಂಖ್ಯೆಯ ಬಗೆಗೆ ಜಾಗೃತಿ ಮೂಡಿಸುವ ಸಲುವಾಗಿ ವಿಶ್ವಸಂಸ್ಥೆ 1989ರಲ್ಲಿ ಜೂನ್ 11ನ್ನು ವಿಶ್ವ ಜನಸಂಖ್ಯಾ ದಿನ ಎಂದು ಘೋಷಿಸಿದೆ. ಜನಸಂಖ್ಯೆಯು ತೀವ್ರಗತಿಯಲ್ಲಿ ಏರಿಕೆಯಾಗುತ್ತಿರುವುದರಿಂದ ಜನಸಂಖ್ಯಾ ಸ್ಫೋಟ ಎಂಬ ಶಬ್ದ ಎಲ್ಲೆಡೆ ಕೇಳಿಬರುತ್ತಿದೆ. ಆದರೆ ಜನಸಂಖ್ಯೆ ಯಾವುದೇ ದೇಶಕ್ಕೆ ಹೊರೆಯಲ್ಲ; ಜನಸಂಖ್ಯೆ ಪ್ರತಿಯೊಂದು ದೇಶದ ಸಂಪನ್ಮೂಲ. ಅದರ ಅಸಮತೋಲಿತ ಏರಿಕೆಯನ್ನು ತಡೆಗಟ್ಟಬೇಕಾದ ಹಾಗೂ ಪ್ರಸ್ತುತ ಇರುವ ಜನಸಂಪನ್ಮೂಲವನ್ನು ಸದುಪಯೋಗಪಡಿಸಿಕೊಳ್ಳುವ ಪ್ರಯತ್ನ ನಡೆಯಬೇಕಾದ ಅಗತ್ಯವಿದೆ. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಶಾಲೆಗಳಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತಿದೆ.

**ರಾಷ್ಟ್ರೀಯ ವಿಜ್ಞಾನ ದಿನಾಚರಣೆ:** ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಕುರಿತು ಆಸಕ್ತಿ–ಅರಿವು ಮೂಡಿಸುವ ಸಲುವಾಗಿ ಮಾರ್ಚ್ 2ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

**ಸ್ವದೇಶೀ ಸಪ್ತಾಹ:** ತನ್ನತನ ಹಾಗೂ ಸ್ವಾಭಿಮಾನವನ್ನು ಜಾಗೃತಗೊಳಿಸುವ ಸಲುವಾಗಿ ರಾಷ್ಟ್ರೋತ್ಥಾನದ ವಿವಿಧ ವಿದ್ಯಾಸಂಸ್ಥೆಗಳಲ್ಲಿ ಸ್ವದೇಶೀ ದಿನಾಚರಣೆಯನ್ನು ಆಚರಿಸಲಾಯಿತು. ಕೆಲವು ವಿದ್ಯಾಸಂಸ್ಥೆಗಳಲ್ಲಿ ಸೆಪ್ಟೆಂಬರ್ 16ರಿಂದ 23ರವರೆಗೆ ಸ್ವದೇಶೀ ಸಪ್ತಾಹವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಂದ ವಿವಿಧ ಸ್ವದೇಶೀ ಕ್ರೀಡೆಗಳ ಅಭ್ಯಾಸ ಹಾಗೂ ಪ್ರದರ್ಶನ; ಭಾರತೀಯತೆ ಮೆರೆಯುವ ಕಿರುನೃತ್ಯ ಪ್ರದರ್ಶನ ನಡೆಯಿತು. ಸ್ವದೇಶೀ ಆಹಾರ ಪದ್ಧತಿ, ಔಷಧೀಯ ಸಸ್ಯಗಳು ಮತ್ತು ಅವುಗಳಿಂದಾಗುವ ಉಪಯೋಗಗಳ ಕುರಿತು ತಿಳಿಸಿಕೊಡಲಾಯಿತು.

ಕನ್ನಡ ರಾಜ್ಯೋತ್ಸವ (ನವೆಂಬರ್ 1) ರಾಷ್ಟ್ರಭಾಷಾ ದಿನ, ವಿಶ್ವ ರಕ್ತದಾನಿಗಳ ದಿನಾಚರಣೆ (ಜೂನ್ 6), ರಾಷ್ಟ್ರೀಯ ಗ್ರಂಥಾಲಯ ದಿನಾಚರಣೆ (ಆಗಸ್ಟ್ 13), ಓಝೋನ್ ದಿನಾಚರಣೆ ಮುಂತಾದ ದಿನಾಚರಣೆಗಳನ್ನು ಎಲ್ಲ ವಿದ್ಯಾಲಯ/ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ.

## ಮಹಾತ್ಮರ ಸ್ಮರಣೆ

ಭವಿಷ್ಯದ ಕನಸು ಕಾಣಬೇಕಾದ ಮಕ್ಕಳಿಗೆ ಹೇಗೆ ಬದುಕಬೇಕು, ಯಾರಂತೆ ಬದುಕಬೇಕು ಎಂಬ ಬಗ್ಗೆ ಆದರ್ಶ ವ್ಯಕ್ತಿಗಳ ಅಗತ್ಯವಿದೆ. ಭಾರತದಲ್ಲಿ ಈ ರೋಲ್ ಮಾಡೆಲ್‌ಗಳಿಗೇನೂ ಕೊರತೆಯಿಲ್ಲ. ಪ್ರಾಚೀನ ಕಾಲದಿಂದ ಈವರೆಗೂ ಸಮಾಜಕ್ಕಾಗಿ ಸಮರ್ಪಿತ ಜೀವನ ನಡೆಸಿದ ಪರಂಪರೆಯೇ ನಮ್ಮಲ್ಲಿದೆ. ಆದರೆ ಇವರನ್ನು ನಮ್ಮ ಎಳೆಯ ಪೀಳಿಗೆಯ ಮುಂದೆ ತೆರೆದಿಡುವ ಕಾರ್ಯ ಅಷ್ಟಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ನಮ್ಮ ಮಹಾಪುರುಷರನ್ನು ಪರಿಚಯಿಸುವ ನಿರಂತರ ಪ್ರಯತ್ನ ನಡೆಸುತ್ತಿದೆ.

ರಾಷ್ಟ್ರದ ನಾಡು–ನುಡಿ, ಸಂಸ್ಕೃತಿ, ಸ್ವಾಭಿಮಾನ, ಅಖಂಡತೆಗಾಗಿ ತಮ್ಮ ಜೀವನವನ್ನು ತೈಲದಂತೆ ಉರಿಸಿದ ಭಾರತದ ಮಹಾನ್ ಚೇತನಗಳ ಜೀವನವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಲುವಾಗಿ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ಅವರ ಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಹೀಗೆ ಪ್ರತೀ ಶಾಲೆಯಲ್ಲಿ ನೂರಕ್ಕೂ ಅಧಿಕ ಮಹಾಪುರುಷರ ಪರಿಚಯ ನಡೆಯಿತು.

ಶಾಲೆಯ ವಿದ್ಯಾರ್ಥಿಗಳೇ ಸ್ವತಃ ಮಹಾತ್ಮರ ಜೀವನದ ಅಧ್ಯಯನ ನಡೆಸಿ, ಭಾಷಣ ಮಾಡುವ ಯೋಜನೆ ರೂಪಿಸಲಾಗಿದೆ.

ವಿವೇಕಾನಂದರ ಜನ್ಮದಿನವನ್ನು ರಾಮಮೂರ್ತಿನಗರದ ಜೆಜಿಆರ್‌ವಿಕೆಯಲ್ಲಿ ಸಹಾಯಕ ಸಿಬ್ಬಂದಿಗಳ ಕೃತಜ್ಞತಾ ದಿನವನ್ನಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ಶಾಲೆಯ ಸಹಾಯಕ ಸಿಬ್ಬಂದಿಗಳನ್ನು ಗೌರವಿಸಿದರು.

**ಗಣರಾಜ್ಯೋತ್ಸವ/ಸ್ವಾತಂತ್ರ್ಯೋತ್ಸವ:** ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದ ಮಹತ್ತ್ವದ ಕ್ಷಣವಾದ ಸ್ವಾತಂತ್ರ್ಯ ದಿನಾಚರಣೆ ಹಾಗೂ ದೇಶದ ಪ್ರಜಾಪ್ರಭುತ್ವ–ಸಾರ್ವಭೌಮತೆಯ ಸಂಕೇತವಾದ ಗಣರಾಜ್ಯೋತ್ಸವ ಕಾರ್ಯಕ್ರಮಗಳನ್ನು ನಮ್ಮ ಶಾಲೆಗಳಲ್ಲಿ ಸಡಗರದಿಂದ ಆಚರಿಸಲಾಯಿತು.

- ವಿದ್ಯಾರ್ಥಿಗಳು ಕಿತ್ತೂರುರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಗಾಂಧಿಜೀ, ಭಗತ್‌ಸಿಂಗ್ ಮುಂತಾದ ಸ್ವಾತಂತ್ರ್ಯ ಹೋರಾಟಗಾರರ ಏಕಪಾತ್ರಾಭಿನಯ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಮುಂತಾದ ಘಟನೆಗಳ ಬಗ್ಗೆ ನೃತ್ಯರೂಪಕ ಹಾಗೂ ಸ್ವಾತಂತ್ರ್ಯೋತ್ಸವದ ಬಗ್ಗೆ ಇಂಗ್ಲಿಷ್, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಭಾಷಣ ಸ್ಪರ್ಧೆ ಹಾಗೂ ಕಾರ್ಯಕ್ರಮಗಳನ್ನು ನಡೆಯಿತು.
- ವಿದ್ಯಾರ್ಥಿಗಳು ಶಾಲೆಯ ಸುತ್ತಮುತ್ತಲಿನ ಪ್ರಮುಖ ಬೀದಿಗಳಲ್ಲಿ ಘೋಷ್‌ಸಹಿತ ಪಥಸಂಚಲನದ ನಡೆಸಿದರು.
- ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಪದಕ ವಿಜೇತ ಕರ್ನಲ್ (ನಿ) ಅರುಣ್ ಶರ್ಮಾ (ಕಲ್ಯಾಣನಗರದ ಜೆಜಿಆರ್‌ವಿ), ಇಸ್ರೋವಿನ ಏರ್ ಕಮ್ಯಾಂಡರ್ ಮಿರಾನಿ (ರಾಮಮೂರ್ತಿನಗರದ ಜೆಜಿಆರ್‌ವಿಕೆ), Indian Army Service Corpsನ ತರಬೇತುದಾರರಾದ ಬ್ರಿಗೇಡಿಯರ್ ಗಂಗಾಧರನ್ ವೇಣು (ಥಣಿಸಂದ್ರ), ಸ್ಥಳೀಯ ಲಯನ್ಸ್‌ಕ್ಲಬ್‌ನ ಅಧ್ಯಕ್ಷರಾದ ಪ್ರೇಮ್ ಗುಪ್ತ (ಲಯನ್ಸ್ ಸೇವಾಭಾರತಿ), ಹೆಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿ ಸಮಾಜಸೇವಕ ಟಿ.ಎನ್. ರಾಮಕೃಷ್ಣ (ಥಣಿಸಂದ್ರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.
- ಶಾಲೆಗಳಲ್ಲಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ಬಹುಮಾನ ವಿತರಿಸಿದರು.
- ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಬಸವರಾಜ ನಾಯ್ಕರ್ (ಧಾರವಾಡ), ಭಾರತೀಯ ವಾಯುಸೇನೆ (ನಿ) ಗ್ರೂಪ್ ಕ್ಯಾಪ್ಟನ್ ಬಿ.ಸಿ. ಕ್ರಿಸ್ಟಫರ್ (ರಾಮಮೂರ್ತಿನಗರದ ಜೆಜಿಆರ್‌ವಿಕೆ), ಇಂಡಿಯನ್ ಏರ್‌ಫೋರ್ಸ್‌ನ (ನಿ) ಯೋಧ ಮಲ್ಲೇಶಪ್ಪ ಗಾಣಿಗೇರ (ಧಾರವಾಡದ ಮುಮ್ಮಿಗಟ್ಟಿ), ಸಂಸ್ಕೃತ ಭಾರತೀಯ ಸಂಯೋಜಕರಾದ ತ್ರೀಶಾ (ಶ್ರೀರಾಂಪುರದ ಸಾಂದೀಪನಿ ವಿದ್ಯಾಭವನ), ಜೀನಕುಶಲ ಯುವಾ ಮಂಚ್‌ನ ಅಧ್ಯಕ್ಷರೂ ಜೈನ ಸಮಾಜದ ಮುಖಂಡರೂ ಆದ ಪಾರಸಮಲ್ ಕವಾಡ್ (ಹುಬ್ಬಳ್ಳಿ), ಕನ್ನಡ ಸಾಹಿತ್ಯ ಪರಿಷತ್‌ನ ಚಿತ್ರದುರ್ಗ ಜಿಲ್ಲಾ ಮಾಜಿ ಅಧ್ಯಕ್ಷರಾದ ಮಲ್ಲಿಕಾರ್ಜುನ್ (ಚಿತ್ರದುರ್ಗ), ಭಾರತೀಯ ಸೇನಾಪಡೆಯ (ನಿ) ಅಧಿಕಾರಿ ಕರ್ನಲ್ ಕುಮಾರ್ (ಕಲ್ಯಾಣನಗರ), ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್








ಬನಶಂಕರಿ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮೋಹನ್‌ಜೀ ಭಾಗವತ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಧ್ವಜಾರೋಹಣ ನೆರವೇರಿಸಿ ಭಾಷಣ ಮಾಡುತ್ತಿದ್ದರು. ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಸಂಘಚಾಲಕ ವಿ. ನಾಗರಾಜ್, ಅಖಿಲ ಭಾರತೀಯ ಸಹ ಸರಕಾರ್ಯವಾಹ ಮುಕುಂದ್, ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಉಪಸ್ಥಿತರಿದ್ದರು.



ಏರೋಸ್ಪೇಸ್ ಮೆಡಿಸಿನ್ (ಐ.ಎ.ಎಂ.) ವಾಯುಪಡೆಯ ಕಮಾಂಡರ್ ಎ. ಅಗರ್ವಾಲ್ (ಥಣಿಸಂದ್ರ), ದಾವಣಗೆರೆಯ ಆರೈಕೆ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ರವಿಕುಮಾರ್ (ದಾವಣಗೆರೆ) ಮುಂತಾದವರು ಆಗಮಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

## ವಸ್ತುಪ್ರದರ್ಶನ

ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳನ್ನು ಬೆಳಕಿಗೆ ತರುವ ಹಾಗೂ ಅವರಲ್ಲಿ ಸಂಶೋಧನೆ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ವಿವಿಧ ಶಾಲೆಗಳಲ್ಲಿ ವಸ್ತುಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

- ಪಠ್ಯಕ್ರಮಕ್ಕೆ ಸಂಬಂಧಿಸಿದ, ದೇಸೀಯತೆ, ಮುಂತಾದ ವಿಷಯಗಳ ಕುರಿತು ವಸ್ತುಪ್ರದರ್ಶನ ನಡೆಯಿತು.
- ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಗಸ್ಟ್ 11ರಂದು ನಡೆದ ಜಿಲ್ಲಾ ಮಟ್ಟದ 'ಜ್ಞಾನ ವಿಜ್ಞಾನ ಮೇಳ' ಕಾರ್ಯಕ್ರಮದಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಹಿರಿಯ ವಿಜ್ಞಾನಿಡಾ. ಎಚ್.ಎನ್. ಸುರೇಶ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ವಿದ್ಯಾಭಾರತಿಯ ಜಿಲ್ಲಾ ಅಧ್ಯಕ್ಷರಾದ ಬಿ.ವಿ. ರಾಜಶೇಖರ ರೆಡ್ಡಿ ಅವರು ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದವರನ್ನು ಗೌರವಿಸಿದರು.



## ಮನೋವಿಕಾಸಕ್ಕೆ ಪೂರಕ ಚಟುವಟಿಕೆಗಳು

ಸಮಗ್ರವಿಕಾಸದ ಮೂಲಕ ವ್ಯಕ್ತಿನಿರ್ಮಾಣ, ತನ್ಮೂಲಕ ಸುಸಂಪನ್ನ ರಾಷ್ಟ್ರನಿರ್ಮಾಣದ ಗುರಿಯಿಂದ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳಲ್ಲಿ ಸಾಮೂಹಿಕತೆ ಹಾಗೂ ಅನ್ಯೋನ್ಯತೆ ಮೂಡಿಸುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

**ಗುರುಪೂರ್ಣಿಮೆ:** ಗುರುವಿನ ಮಹತ್ತ್ವವನ್ನು ಮಕ್ಕಳಿಗೆ ತಿಳಿಸಿಕೊಡುವ ಹಾಗೂ ನಮ್ಮ ಸಂಸ್ಕೃತಿ ಸಮಾಜದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ವಿದ್ಯಾಲಯ/ಕೇಂದ್ರಗಳಲ್ಲಿ ಆಷಾಢ ಶುಕ್ಲ ಹುಣ್ಣಿಮೆಯಂದು ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ವಿದ್ಯಾರ್ಥಿಗಳಿಂದ ಗುರುವಿನ ಮಹತ್ತ್ವವನ್ನು ಸಾರುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

**ರಕ್ಷಾಬಂಧನ:** ವ್ಯಕ್ತಿ–ವ್ಯಕ್ತಿ ನಡುವಿನ ಬಾಂಧವ್ಯದ ಸಂಕೇತ ಹಾಗೂ ಸಂಘಟಿತ ಶಕ್ತಿಯ ಮಹತ್ತ್ವವನ್ನು ಸಾರುವ ಮತ್ತು ಭಾರತೀಯ ಇತಿಹಾಸದಲ್ಲಿ ಐತಿಹಾಸಿಕ ಹಿನ್ನೆಲೆಯಿರುವ ರಕ್ಷಾಬಂಧನ ಉತ್ಸವವನ್ನು ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಪ್ರಕಲ್ಪಗಳಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

- ಗಣೇಶೋತ್ಸವ, ಶಿವರಾತ್ರಿ, ಸಾಮೂಹಿಕ ಸತ್ಯನಾರಾಯಣ ಪೂಜೆ, ಭಾರತಮಾತಾ ಪೂಜನ, ಸಾಮೂಹಿಕ ಹುಟ್ಟುಹಬ್ಬ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.



## ಕೀರ್ತಿ ತಂದ ಪ್ರತಿಭೆಗಳು

**ಏಷಿಯನ್ ಯೋಗಾ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ:** ಯೋಗಾ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಸೆಪ್ಟೆಂಬರ್ 27 ರಿಂದ 30ರ ವರೆಗೆ ಕೇರಳದ ತಿರುವನಂತಪುರದಲ್ಲಿ ನಡೆದ ಏಷಿಯನ್ ಯೋಗಾ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿನಿ ಗ್ರೀಷ್ಮಾ ಅವರು ಚಿನ್ನದ ಪದಕವನ್ನು ಗಳಿಸಿದ್ದಾರೆ. ಈ ಸ್ಪರ್ಧೆಯಲ್ಲಿ ಭಾರತದ ಹಾಗೂ 15 ವಿವಿಧ ದೇಶಗಳ ಸ್ಪರ್ಧಿಗಳು ಭಾಗಹಿಸಿದ್ದರು.

**ರಾಷ್ಟ್ರಮಟ್ಟದ ಈಜು ಸ್ಪರ್ಧೆಯಲ್ಲಿ ಚಾಂಪಿಯನ್:** ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾದ ಸಹಯೋಗದಲ್ಲಿ ಪುಣೆಯಲ್ಲಿ ಜೂನ್ 24ರಿಂದ 29ರ ವರೆಗೆ ನಡೆದ ರಾಷ್ಟ್ರಮಟ್ಟದ 35ನೇ ಸಬ್ ಜೂನಿಯರ್ ಅಕ್ವೇಟಿಕ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ನವನೀತ್ ಗೌಡ ಅವರು (5 ಚಿನ್ನದ ಪದಕಗಳನ್ನು ಗಳಿಸಿ) ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಪಡೆದಿದ್ದಾರೆ.

**ಅಬಾಕಸ್ ಮತ್ತು ಮೆಂಟಲ್ ಅರ್ಥ್‌ಮೆಟಿಕ್ ಸ್ಪರ್ಧೆ:** ಪೂನಾದ ಗ್ಯಾಲಕ್ಸಿ ಎಜು ಇನ್ನೋವೇಶನ್ ಪ್ರೈ.ಲಿ. ವತಿಯಿಂದ ಪೂನಾದಲ್ಲಿ ನಡೆದ ರಾಷ್ಟ್ರಮಟ್ಟದ ಅಬಾಕಸ್ ಮತ್ತು ಮೆಂಟಲ್ ಅರ್ಥ್‌ಮೆಟಿಕ್ ಸ್ಪರ್ಧೆಯಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸಮಯ ಎ.ಎಸ್. ಮತ್ತು ಸಿಂಚನ ಎ. ಚಾಂಪಿಯನ್ ಪ್ರಶಸ್ತಿ ಪಡೆದರು.

**ರಾಷ್ಟ್ರ ಮಟ್ಟದ ಈಜು ಸ್ಪರ್ಧೆಯಲ್ಲಿ ಪದಕ:** ನವೆಂಬರ್ 22ರಿಂದ 26ರ ತನಕ ರಾಂಚಿಯ ಕೇಲ್‌ಗಾಂವ್ ಕ್ರೀಡಾಂಗಣದಲ್ಲಿ ನಡೆದ ಸಿ.ಬಿ.ಎಸ್.ಇ. ಶಾಲೆಗಳ ರಾಷ್ಟ್ರ ಮಟ್ಟದ ಈಜುಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು 5 ಚಿನ್ನ, 3 ಬೆಳ್ಳಿ ಹಾಗೂ 1 ಕಂಚನ್ನು ಗಳಿಸಿದೆ. ಈ ಕ್ರೀಡಾಕೂಟದಲ್ಲಿ ದೇಶದ ಎಲ್ಲೆಡೆಯ 1000ಕ್ಕೂ ಅಧಿಕ ಈಜುಸ್ಪರ್ಧಿಗಳು ಭಾಗವಹಿಸಿದ್ದರು.

**ರಾಷ್ಟ್ರಮಟ್ಟದ ವಿಜ್ಞಾನ ವಸ್ತು ಪ್ರದರ್ಶನ:** ಭಾರತ ಸರ್ಕಾರದ Science and Technology ಇಲಾಖೆಯ ವತಿಯಿಂದ ದೆಹಲಿ ಐಐಟಿಯಲ್ಲಿ ಫೆಬ್ರುವರಿ 14 ಮತ್ತು 15ರಂದು ನಡೆದ ರಾಷ್ಟ್ರಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ Inspire Awards Manak–2019ರಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ

8ನೇ ತರಗತಿಯ ಪೃಥ್ವಿರಾಜ ಗೋಲಿ ಅವರು E-FUNNEL ಎಂಬ ಪ್ರಾಜೆಕ್ಟ್‌ನ್ನು ಪ್ರದರ್ಶಿಸಿದರು. ದೇಶದ ಎಲ್ಲ ರಾಜ್ಯಗಳ ಸುಮಾರು 800ಕ್ಕೂ ಅಧಿಕ ಪ್ರತಿಭಾವಂತ ವಿದ್ಯಾರ್ಥಿಗಳು ಭಾಗವಹಿಸಿದರು.

**ಯೋಗಾಸನ ಸ್ಪರ್ಧೆ:** ದೆಹಲಿಯ ರಾಜ್‌ಘಾಟ್‌ನಲ್ಲಿ ನವೆಂಬರ್ 23 ರಿಂದ 27ರ ತನಕ ನಡೆದ ವಿದ್ಯಾಭಾರತಿ ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 7ನೇ ತರಗತಿಯ ಚೇತನ್ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

**ಟೆನಿಸ್ ಸ್ಪರ್ಧೆ:** ಗೌಹಾತಿಯಲ್ಲಿ ನಡೆದ ಪೂರ್ವ ವಲಯದ 11ನೇ ರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಬೆಂಗಳೂರಿನ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿ ಹೃಷಿಕೇಶ್ ಸೆಲ್ಲೂರ್ ಅವರು 14 ವರ್ಷದ ಒಳಗಿನ ಸಿಂಗಲ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪಡೆದರು.

**ರಾಜ್ಯದ 'ಯುವ ವಿಜ್ಞಾನಿ' ಪ್ರಶಸ್ತಿ :** ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಥಮ್ ಕೆ.ಎಂ. ಹಾಗೂ ಅಭಿಜ್ಞಾ ತನ್ವಿ ಅವರು ರಾಜ್ಯ ಬಾಲ ವಿಜ್ಞಾನಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಡಿಸೆಂಬರ್ 15ರಿಂದ 17ರ ವರೆಗೆ ಕಲಬುರಗಿಯಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸ್ಪರ್ಧೆಯಲ್ಲಿ 'ಚರಂಡಿ ನೀರಿನಲ್ಲಿ ಭಾರಲೋಹ ಕಡಮೆಗೊಳಿಸುವುದು ಹೇಗೆ?' ಎಂಬ ವಿಷಯದ ಕುರಿತು ಸಂಶೋಧನೆಯನ್ನು ಮಂಡಿಸಿದರು. 26ನೇ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಇಸ್ರೊ ನಿಕಟಪೂರ್ವ ಅಧ್ಯಕ್ಷ ಎ.ಎಸ್. ಕಿರಣಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಒಡಿಸ್ಸಾದ ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಮಕ್ಕಳ ಸಮಾವೇಶದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದರು.






**ರಾಷ್ಟ್ರ ಮಟ್ಟದ ಯೋಗಾಸನ ಸ್ಪರ್ಧೆ :** ಇಂಡಿಯನ್ ಯೋಗ ಅಸೋಸಿಯೇಷನ್ ವತಿಯಿಂದ ಡಿಸೆಂಬರ್ 28 ರಿಂದ 30ರ ವರೆಗೆ ಚೆನ್ನೈನಲ್ಲಿ ನಡೆದ 37ನೇ ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿ ರೋಹನ್ 8ನೇ ಸ್ಥಾನವನ್ನು ಪಡೆದಿದ್ದಾರೆ. ಈ ಸ್ಪರ್ಧೆಯಲ್ಲಿ ಒಟ್ಟು 23 ರಾಷ್ಟ್ರಗಳಿಂದ ಯೋಗಪಟುಗಳು ಭಾಗವಹಿಸಿದ್ದು, ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 7ನೇ ತರಗತಿಯ ವಿದ್ಯಾರ್ಥಿಗಳಾದ ರೋಹನ್ ಮತ್ತು ಚೇತನ್ ರವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದರು. ಕರ್ನಾಟಕ ಯೋಗ ಅಸೋಸಿಯೇಷನ್ ಬೆಂಗಳೂರಿನ ಮಲ್ಲೇಶ್ವರಂನ ಶ್ರೀರಾಮ ಸಮುದಾಯ ಭವನದಲ್ಲಿ ಡಿಸೆಂಬರ್ 16ರಂದು ನಡೆದ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ವಿಜೇತರಾದ ಚೇತನ್ ಮತ್ತು ರೋಹನ್ ಪ್ರಶಸ್ತಿ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದರು.

**ಕ್ರೀಡಾಕೂಟ:** ಹೈದರಾಬಾದ್‌ನ ಶಾರದಾ ವಿದ್ಯಾಪೀಠದಲ್ಲಿ ಸೆಪ್ಟೆಂಬರ್ 14ರಿಂದ 16 ರ ತನಕ ಮೂರು ದಿನಗಳ ಕಾಲ ನಡೆದ ವಿದ್ಯಾಭಾರತೀಯ ಕ್ಷೇತ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಧುಸೂದನ್ ಕೆ.ಯು. (ಉದ್ದ ಜಿಗಿತ) ಮತ್ತು ಸುದೀಪ್ ಸಜ್ಜನ್ (3000 ಮೀ. ಓಟ) ಅವರು ಪ್ರಥಮ ಸ್ಥಾನ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದರು.

**ಜ್ಞಾನ-ವಿಜ್ಞಾನ ಮೇಳ:** ವಿಶಾಖಪಟ್ಟಣದಲ್ಲಿ ನಡೆದ ಕ್ಷೇತ್ರೀಯ ಮಟ್ಟದ ಜ್ಞಾನ-ವಿಜ್ಞಾನ ಮೇಳದಲ್ಲಿ ಶಿವಮೊಗ್ಗದ ಹೊಳೆಹೊನ್ನೂರಿನಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಲಯದ 9ನೇ ತರಗತಿಯ ವಿದ್ಯಾರ್ಥಿನಿ ಪ್ರಾರ್ಥನಾ ಅವರು ಪ್ರಥಮ ಸ್ಥಾನವನ್ನು ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



**ಕ್ಷೇತ್ರೀಯ ಮಟ್ಟಕ್ಕೆ ಆಯ್ಕೆ:** ಸೆಪ್ಟೆಂಬರ್ 7 ರಿಂದ 9ರ ತನಕ ಕಲಬುರಗಿಯ ಸೇಡಂನಲ್ಲಿ ನಡೆದ ವಿದ್ಯಾಭಾರತಿಯ ಪ್ರಾಂತಮಟ್ಟದ ಜ್ಞಾನ–ವಿಜ್ಞಾನ ಮೇಳದಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಶಾಂತ ಶೀಲಶರ್ಮಾ ಗಣಿತ ಮಾದರಿಯಲ್ಲಿ ಮತ್ತು ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳ ತಂಡ ಬಾಲ ಮತ್ತು ಕಿಶೋರ ವರ್ಗದಲ್ಲಿ ಹಾಗೂ ವೈಯಕ್ತಿಕ ವಿಭಾಗದಲ್ಲಿ ಹರ್ಷಿತ್ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ವಿಶಾಖಪಟ್ಟಣಂದಲ್ಲಿ ಹಾಗೂ ಒರಿಸ್ಸಾದ ಕಟಕ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಬಾಲವರ್ಗದ ಗಣಿತ ಮಾದರಿ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರಶಾಂತ್ ನಿರ್ಣಾಯಕರಿಂದ ಪ್ರಶಂಸೆಗೆ ಪಾತ್ರರಾದರು.

**ಕೇಂದ್ರ ಸರ್ಕಾರದ ಪ್ರಶಸ್ತಿ:** ಭಾರತ ಸರ್ಕಾರದ Science and Technology ಇಲಾಖೆಯ ವತಿಯಿಂದ ನಡೆದ ಸೃಜನಾತ್ಮಕ ಸಂಶೋಧನಾ ಲೇಖನ ಸ್ಪರ್ಧೆಯಲ್ಲಿ ಬನಶಂಕರಿ ಹಾಗೂ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಪ್ರಶಸ್ತಿ ಗಳಿಸಿದ್ದಾರೆ. ಭಾರತ ಸರ್ಕಾರದ Science & Technology ಇಲಾಖೆಯ INSPIRE Awards (MANAK) ಯೋಜನೆಯಡಿ ಆನ್‌ಲೈನ್‌ನಲ್ಲಿ ಸೃಜನಾತ್ಮಕ ಸಂಶೋಧನಾ ಲೇಖನಗಳನ್ನು ಆಹ್ವಾನಿಸಿತ್ತು.

## ಸಾಮಾಜಿಕ ಚಟುವಟಿಕೆಗಳು

**ಸರ್ಕಾರಿ ಶಾಲಾ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಶಿಬಿರ:** ಸರ್ಕಾರೀ ಶಾಲಾ ಮಕ್ಕಳ ಜ್ಞಾನ ಮತ್ತು ಆರೋಗ್ಯವನ್ನು ವೃದ್ಧಿಸುವ ಸಲುವಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ವತಿಯಿಂದ ಏಪ್ರಿಲ್ 9ರಿಂದ 11ರ ತನಕ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ಒಟ್ಟು 26 ವಿದ್ಯಾರ್ಥಿಗಳು ಭಾಗವಹಿಸಿದರು.

- ವಿವಿಧ ಚಟುವಟಿಕೆಗಳ ಮೂಲಕ ಶಾರೀರಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕತೆಯ ಹಲವು ಕೌಶಲಗಳನ್ನು ಹಾಗೂ ವಿವಿಧ ಆಟಗಳು, ಯೋಗಾಭ್ಯಾಸ, ಸಂಗೀತ, ಚಿತ್ರಕಲೆ, ಭಗವದ್ಗೀತೆಯ, ಶ್ಲೋಕಪಠಣ ಮುಂತಾದ ವಿಷಯಗಳ ಕುರಿತು ಮಾರ್ಗದರ್ಶನ ಮಾಡಲಾಯಿತು.
- ಸಮಾರೋಪದಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಭಗವದ್ಗೀತೆಯ 5 ಶ್ಲೋಕಗಳ ಅರ್ಥಸಹಿತ ಪಠಣ, ದೇಶಭಕ್ತಿ ಗೀತೆಗಳ ಗಾಯನ, ಯೋಗ ಪ್ರದರ್ಶನ ಹಾಗೂ ಸ್ವಚ್ಛ ಭಾರತ ಅಭಿಯಾನದ ಕುರಿತ ಕಿರುನಾಟಕವನ್ನು ಪ್ರದರ್ಶಿಸಿದರು.

**ಗ್ರಾಮಜಾಗೃತಿಗಾಗಿ ಪ್ರಶಿಕ್ಷಣ ವರ್ಗ:** ಜನಸಾಮಾನ್ಯರಲ್ಲಿ ದೇಶ, ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆ ಹಾಗೂ ಆದರ್ಶಗ್ರಾಮ, ಆದರ್ಶಮನೆ, ಆದರ್ಶ ವ್ಯಕ್ತಿತ್ವದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಎಲ್ಲ ಸಿಬ್ಬಂದಿವರ್ಗದ ಒಂದು ದಿನದ ಪ್ರಶಿಕ್ಷಣ ವರ್ಗವು ಸಮೀಪದ ಕುರುಬಗಟ್ಟಿ ಮತ್ತು ಮುಮ್ಮಿಗಟ್ಟಿಯ ಸೇವಾಬಸ್ತಿಗಳಲ್ಲಿ ನಡೆಯಿತು.

**ಸರ್ಕಾರಿ ಶಾಲಾ ಮುಖ್ಯೋಪಾಧ್ಯಾಯರ ಮಿಲನ :** ಸರ್ಕಾರೀ ಶಾಲೆಯ ಗುಣಮಟ್ಟ ವೃದ್ಧಿಸುವ ಸಲುವಾಗಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು 16 ಸರ್ಕಾರಿ ಶಾಲೆಗಳಲ್ಲಿ ಯೋಗ ತರಬೇತಿ ಕಾರ್ಯಕ್ರಮವನ್ನು ನಡೆಸುತ್ತಿದೆ. ಡಿಸೆಂಬರ್ 8ರಂದು ಅಂತಹ ಶಾಲೆಗಳ ಮುಖ್ಯೋಪಾಧ್ಯಾಯರ ಮಿಲನ ಕಾರ್ಯಕ್ರಮ ನಡೆಯಿತು.

- ಪ್ರಸ್ತುತ 16 ಸರ್ಕಾರಿ ಶಾಲೆಗಳ ಸುಮಾರು 3600 ವಿದ್ಯಾರ್ಥಿಗಳು ಯೋಗ ತರಬೇತಿ ಪಡೆಯುತ್ತಿದ್ದು, ಅದರ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಲಾಯಿತು.
- ಬೆಂಗಳೂರು ದಕ್ಷಿಣ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿ ಸಲೀಂ ಪಾಷಾ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

**ಸರ್ಕಾರಿ ಅಂತರ್ ಶಾಲಾ ಯೋಗಾಸನ ಸ್ಪರ್ಧೆ:** ಸ್ವಾಮಿ ವಿವೇಕಾನಂದ ಜಯಂತಿಯ ಪ್ರಯುಕ್ತ ಜನವರಿ 12ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗಾಗಿ ಯೋಗಾಸನ ಸ್ಪರ್ಧೆಯನ್ನು ಆಯೋಜಿಸಲಾಯಿತು.

- ವಿದ್ಯಾಭಾರತಿಯ ಕ್ಷೇತ್ರೀಯ ದೈಹಿಕ ಶಿಕ್ಷಣ ಪ್ರಮುಖರಾದ ಜಗದೀಶ್ ಅವರು ಉದ್ಘಾಟಿಸಿದರು. ಸ್ಪರ್ಧೆಯಲ್ಲಿ 15 ವಿವಿಧ ಸರ್ಕಾರಿ ಶಾಲೆಗಳ ಒಟ್ಟು 160 ವಿದ್ಯಾರ್ಥಿಗಳು ಭಾಗವಹಿಸಿದರು. ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು.

**ಖಾಲಿ ಜಾಗಕ್ಕೆ ಬೀಜದುಂಡೆ! :** ಪರಿಸರದ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕಲಬುರಗಿಯ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ 2018 ಜುಲೈ 16ರಂದು ಬೀಜದುಂಡೆ ಎಸೆಯುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವಿದ್ಯಾರ್ಥಿಗಳು ಶಾಲೆಯಿಂದ 6–7 ಕಿ.ಮೀ ದೂರದ ಶರಣ ಶಿರಸಗಿ ಎಂಬ ಹಳ್ಳಿಗೆ ತೆರಳಿ ಅಲ್ಲಿಯ ಖಾಲಿ ಜಾಗಗಳಲ್ಲಿ ಹಾಗೂ ರಸ್ತೆಯ ಇಕ್ಕೆಲಗಳಲ್ಲಿ ಬೀಜದುಂಡೆಗಳನ್ನು ಎಸೆದರು. ಬೇಸಿಗೆಯಲ್ಲಿ ವಿದ್ಯಾರ್ಥಿಗಳು ಮಣ್ಣು ಬೀಜ ಹಾಗೂ ಸಗಣಿಗಳನ್ನು ಸೇರಿಸಿ ಬೀಜದುಂಡೆಗಳನ್ನು ತಯಾರಿಸಿ ಒಣಗಿಸಿ ಇಟ್ಟಿದ್ದರು.



**ಹಳ್ಳಿಗಳಿಗೆ ಆರೋಗ್ಯ :** ಗ್ರಾಮೀಣ ಜನರಿಗೂ ಉತ್ತಮ ವೈದ್ಯಕೀಯ ಸೌಲಭ್ಯ ದೊರಕುವಂತಾಗಬೇಕು ಎಂಬ ಕಳಕಳಿಯಿಂದ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವತಿಯಿಂದ ಬೆಂಗಳೂರಿನ ದೊಡ್ಡಗುಬ್ಬಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗಾಗಿ ನವೆಂಬರ್ 15ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು. ಪ್ರಾಥಮಿಕ ಶಾಲೆಯ 208 ವಿದ್ಯಾರ್ಥಿಗಳ ತಪಾಸಣೆ ನಡೆಸಿ ಔಷಧಗಳನ್ನು ವಿತರಿಸಿದರು. ಬೆಂಗಳೂರಿನ ಯಲಹಂಕದ ಅಪೂರ್ವ ಹಾಸ್ಪಿಟಲ್‌ನ ಸಹಯೋಗದಲ್ಲಿ ಈ ಶಿಬಿರ ನಡೆಯಿತು.

**ಗ್ರಾಮ ವಿಕಾಸ:** ಗ್ರಾಮ ವಿಕಾಸದ ದೃಷ್ಟಿಯಿಂದ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು ಶಾಲೆಯ ಸಮೀಪದ ಯರಪ್ಪನಹಳ್ಳಿ ಗ್ರಾಮವನ್ನು ಆಯ್ಕೆ ಮಾಡಿಕೊಂಡಿದ್ದು, ಅಲ್ಲಿ ಕಳೆದ ಎರಡುಮೂರು ವರ್ಷಗಳಿಂದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.

- ಗ್ರಾಮ ಸಾಮರಸ್ಯಕ್ಕಾಗಿ ಯರಪ್ಪನಹಳ್ಳಿಯಲ್ಲಿ ನಡೆದ ಗ್ರಾಮ ದೀಪೋತ್ಸವ ಕಾರ್ಯಕ್ರಮದಲ್ಲಿ ಭಾರತೀಯ ಸಂಸ್ಕೃತಿ ಪ್ರತಿಷ್ಠಾನದ ಸದಸ್ಯರಾದ ವಿ. ಮಾರಪ್ಪ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು.
- ಗ್ರಾಮಸ್ಥರಿಗಾಗಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಯಿತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.
- ಗೋಪೂಜೆ, ತುಳಸಿಪೂಜೆ ಮತ್ತು ಭಾರತಮಾತೆಯ ಪೂಜೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಯರಪ್ಪನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.



# ತಪಸ್ ಮತ್ತು ಸಾಧನಾ

ಭಾರತೀಯ ಯುವಜನರ ಬುದ್ಧಿವಂತಿಕೆಯನ್ನು ಜಗತ್ತು ಕೌತುಕದಿಂದ ನೋಡುತ್ತಿದೆ. ಆದರೆ ಭಾರತದಲ್ಲಿನ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ದುರ್ಬಲತೆಯಿಂದಲೋ ಸೂಕ್ತ ಮಾರ್ಗದರ್ಶನವಿಲ್ಲದೆಯೋ, ಆಯ್ಕೆಯ ಸಮಸ್ಯೆಯಿಂದಲೋ ಅವರ ಪ್ರತಿಭೆ ಹೊರಹೊಮ್ಮಲು ಅಸಾಧ್ಯವಾಗಿದೆ. ಈ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಆರ್ಥಿಕ ಮತ್ತು ಸಾಮಾಜಿಕವಾಗಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಪ್ರತಿಷ್ಠಿತ ಉನ್ನತ ಶಿಕ್ಷಣಕ್ಕೆ ಪೂರಕವಾದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 'ತಪಸ್' (ಬಾಲಕರಿಗಾಗಿ) ಹಾಗೂ ಸಾಧನಾ (ಬಾಲಕಿಯರಿಗಾಗಿ) ಎಂಬ ವಿಶಿಷ್ಟ ಯೋಜನೆಯನ್ನು ನಡೆಸುತ್ತಿದೆ.







# ತಪಸ್

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ಕುಟುಂಬದ ಪ್ರತಿಭಾವಂತ ಗಂಡುಮಕ್ಕಳನ್ನು ಪ್ರತಿಷ್ಠಿತ ಐಐಟಿ-ಜೆಇಇ ಶಿಕ್ಷಣ ಪಡೆಯುವಂತೆ ಮಾಡುವ ಸಲುವಾಗಿ 2012ರಲ್ಲಿ 'ತಪಸ್' ಯೋಜನೆ ಪ್ರಾರಂಭಗೊಂಡಿತು.

ಈ ಯೋಜನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ, ಭೋಜನ, ಕಾಲೇಜು ಶುಲ್ಕ, ಅಧ್ಯಯನ ಸಾಮಗ್ರಿ, ತರಬೇತಿ ಸೇರಿದಂತೆ 2 ವರ್ಷಗಳ ಶಿಕ್ಷಣ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಇದಕ್ಕಾಗಿ ಬೆಂಗಳೂರಿನ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಲಯದ ಪರಿಸರದಲ್ಲಿ ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ, ವಸತಿ ನಿಲಯಗಳಂತಹ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ರಾಷ್ಟ್ರೋತ್ಥಾನದ ಪಿ.ಯು. ಕಾಲೇಜಿನಲ್ಲಿ ಶಿಕ್ಷಣ ನೀಡಲಾಗುತ್ತದೆ.

ಪ್ರತಿಷ್ಠಿತ ಬೇಸ್ ಸಂಸ್ಥೆಯ ಸಹಯೋಗದಲ್ಲಿ ಈ ಚಟುವಟಿಕೆ ನಡೆಯುತ್ತಿದೆ. ಐಐಟಿ-ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸುವ ಹಿನ್ನೆಲೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳ ಶ್ರೇಷ್ಠ ಮಟ್ಟದ ಸಾರಾಂಶವುಳ್ಳ ಪ್ರಶ್ನೋತ್ತರ ಸಹಿತ ಅಭ್ಯಾಸಪಾಠ್ಯಗಳನ್ನು ಸಿದ್ಧಪಡಿಸಿ, ಅವುಗಳನ್ನು ಪರಿಣಾಮಕಾರಿಯಾಗುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡುವ ಕಾರ್ಯವನ್ನು 'ಬೇಸ್' ಸಂಸ್ಥೆ ಮಾಡುತ್ತಿದೆ.

## ವಿದ್ಯಾರ್ಥಿಗಳ ಸಂಪರ್ಕ

- ರಾಜ್ಯದ ಎಲ್ಲ ಪ್ರೌಢಶಾಲೆಗಳಿಗೆ ವರ್ಷಕ್ಕೆರಡು ಬಾರಿ ತಪಸ್ ಪತ್ರಕಗಳನ್ನು ಕಳುಹಿಸಿ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಳ್ಳುವಂತೆ ವಿನಂತಿಸಲಾಗುತ್ತದೆ
- ಖುದ್ದಾಗಿ ಪ್ರತೀ ವರ್ಷ ರಾಜ್ಯದ 100 ಕ್ಕಿಂತ ಹೆಚ್ಚು ಮೊರಾರ್ಜಿ, ಜೆ.ಎನ್.ವಿ. (ಜವಾಹರ್ ನವೋದಯ ವಿದ್ಯಾಲಯ), ಸರ್ಕಾರಿ ಇನ್ನಿತರ ಶಾಲೆಗಳಿಗೆ ಭೇಟಿ ನೀಡಿ ಪ್ರಚಾರ ಮಾಡಲಾಗುತ್ತದೆ.
- ವಿವಿಧ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸಲಾಗುತ್ತದೆ.

## ಆಯ್ಕೆ ಪ್ರಕ್ರಿಯೆ

- ಕುಟುಂಬದ ವಾರ್ಷಿಕ ಆದಾಯ ರೂ. 1,50,000 ಮೀರಿರದ ಪ್ರಸ್ತುತ 10ನೇ ತರಗತಿ ಓದುತ್ತಿರುವವರು ಅರ್ಜಿ ಸಲ್ಲಿಸಬಹುದು.

ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ (ಹೆಣ್ಣುಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಪ್ರತಿಷ್ಠಿತ NEET/CET ಪ್ರವೇಶ ಪರೀಕ್ಷೆಗೆ ತರಬೇತಿಗೊಳಿಸುವುದೇ 'ಸಾಧನಾ' ಯೋಜನೆಯ ಉದ್ದೇಶ.

ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ (ಗಂಡುಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಐಐಟಿ-ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಗೊಳಿಸುವುದೇ 'ತಪಸ್' ಯೋಜನೆಯ ಉದ್ದೇಶ.

- ಡಿಸೆಂಬರ್ 25 ರಂದು ರಾಜ್ಯದ 40 ಸ್ಥಾನಗಳಲ್ಲಿ ಏಕಕಾಲದಲ್ಲಿ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.
- ಮೆರಿಟ್ ಆಧಾರದ ಮೇಲೆ 200 ವಿದ್ಯಾರ್ಥಿಗಳ ಆಯ್ಕೆ ಮಾಡಲಾಗುತ್ತದೆ.
- ಆಯ್ಕೆಯಾದ 200 ವಿದ್ಯಾರ್ಥಿಗಳ ಮನೆಗೆ ಪರಿಷತ್ತಿನ ಕಾರ್ಯಕರ್ತರು ಖುದ್ದು ಭೇಟಿನೀಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳ ವಾಸ್ತವ ಸ್ಥಿತಿಗತಿಗಳ ಸಮೀಕ್ಷೆ ಮಾಡಲಾಗುತ್ತದೆ.
- 10ನೇ ತರಗತಿ ಪರೀಕ್ಷೆಯ ನಂತರ ಬೆಂಗಳೂರಿನಲ್ಲಿ 10 ದಿನಗಳ ವಸತಿ ಆಯ್ಕೆ ಶಿಬಿರ ನಡೆಸಲಾಗುತ್ತದೆ
- ಗ್ರಹಣ ಶಕ್ತಿ, ಆಸಕ್ತಿ, ಸಮಯದ ಸದುಪಯೋಗ, ನಡವಳಿಕೆ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಅಂತಿಮವಾಗಿ 40 ಮಕ್ಕಳ ಆಯ್ಕೆ ಮಾಡಲಾಗುತ್ತದೆ.

## 2018-19ರ ಅಂಕಿ-ಅಂಶ

- ಪ್ರಸ್ತುತ 2018-19ನೇ ಸಾಲಿನಲ್ಲಿ ಒಟ್ಟು 2800 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.
- ಮೊದಲ ಸುತ್ತಿನಲ್ಲಿ ಆಯ್ಕೆಯಾದ ರಾಜ್ಯದ 28 ಜಿಲ್ಲೆಗಳ 207 ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಲಾಯಿತು.
- ವಸತಿ ಶಿಬಿರಕ್ಕೆ ಆಯ್ಕೆಯಾದವರು – 135 ವಿದ್ಯಾರ್ಥಿಗಳು
- ತಪಸ್ 2018-20ಗೆ ಆಯ್ಕೆಯಾದವರು – 50 ವಿದ್ಯಾರ್ಥಿಗಳು
- 2018-19ನೇ ಸಾಲಿನಲ್ಲಿ ಪ್ರಥಮ ಪಿ.ಯು.ಯಲ್ಲಿ 46 ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ 37 ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

## ಫಲಾನುಭವಿಗಳು

| ವರ್ಷ | 1st PU | 2nd PU | ವರ್ಷ | 1st PU | 2nd PU |
|---|---|---|---|---|---|
| 2012–13 | 38 | 0 | 2016–17 | 37 | 35 |
| 2013–14 | 38 | 34 | 2017–18 | 37 | 34 |
| 2014–15 | 40 | 38 | 2018–19 | 46 | 37 |
| 2015–16 | 38 | 34 | 2019–20 | 33 | 46 |

## ಕಟ್ಟಡ ಲೋಕಾರ್ಪಣೆ

'ತಪಸ್' ವಿದ್ಯಾರ್ಥಿಗಳಿಗಾಗಿ ಬನಶಂಕರಿಯಲ್ಲಿ ನಿರ್ಮಿಸಲಾದ ನೂತನ ಕಟ್ಟಡದ ಲೋಕಾರ್ಪಣ ಸಮಾರಂಭ ಜುಲೈ 31ರಂದು ನಡೆಯಿತು. ಉತ್ತರಾದಿಮಠದ ಪೀಠಾಧಿಪತಿಗಳಾದ ಶ್ರೀ ಸತ್ಯಾತ್ಮತೀರ್ಥ ಸ್ವಾಮಿಜೀ ಅವರು ದಿವ್ಯ ಸಾನ್ನಿಧ್ಯ ವಹಿಸಿ ಕಟ್ಟಡವನ್ನು ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡಿದರು.

ಮಾಜಿ ಮುಖ್ಯಮಂತ್ರಿಗಳು ಹಾಗೂ ರಾಜ್ಯ ವಿರೋಧ ಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಗ್ಲೋಬಲ್ ಎಡ್ಜ್ ಸಾಫ್ಟ್‌ವೇರ್‌ನ ಆಡಳಿತ ನಿರ್ದೇಶಕ ಎಂ.ಪಿ. ಕುಮಾರ್, ರೆಸೊನೆನ್ಸ್ ಎಜುವೆನ್ಚರ್ ಸಂಸ್ಥೆಯ ಸ್ಥಾಪಕರಾದ ಆರ್.ಕೆ. ವರ್ಮ, ಕಟ್ಟಡವನ್ನು ನಿರ್ಮಿಸಿಕೊಟ್ಟ ಒಎನ್‌ಜಿಸಿ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಶಶಿಶಂಕರ್, ಪರಿಷತ್‌ನ ಅಧ್ಯಕ್ಷರಾದ ನಾಡೋಜ ಎಸ್. ಆರ್. ರಾಮಸ್ವಾಮಿ ಮತ್ತು ಪ್ರಧಾನ ಕಾರ್ಯದರ್ಶಿ ನಾ. ದಿನೇಶ ಹಗ್ಡೆ ಅವರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳ ಮಾನಸಿಕ, ಶಾರೀರಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ವಿಕಾಸಕ್ಕಾಗಿ ನಡೆಸಿದ ಚಟುವಟಿಕೆಗಳು

- ತಪಸ್‌ನ ವಿದ್ಯಾರ್ಥಿಗಳು ಒಂದು ಶಿಸ್ತುಬದ್ಧ ದಿನಚರಿಯಲ್ಲಿ ತಮ್ಮ ವಿದ್ಯಾಭ್ಯಾಸದ ಜೀವನವನ್ನು ನಡೆಸುತ್ತಾರೆ. ಬೆಳಗ್ಗೆ 4.30ಕ್ಕೆ ಪ್ರಾರಂಭವಾಗುವ ದಿನಚರಿ ರಾತ್ರಿ 11.30ಕ್ಕೆ ಮುಕ್ತಾಯವಾಗುತ್ತದೆ. ಇದರಲ್ಲಿ ಅತ್ಯಧಿಕ ಸಮಯ ಅಧ್ಯಯನಕ್ಕೆ ಮೀಸಲಾಗಿದ್ದರೂ ಯೋಗ, ಪ್ರಾಣಾಯಾಮ, ಭಜನೆ, ಹಿರಿಯರಿಂದ ಮಾರ್ಗದರ್ಶನ, ಹಬ್ಬಗಳ ಆಚರಣೆ, ಪ್ರವಾಸ ಇತ್ಯಾದಿ ಸಂಸ್ಕಾರ ಪೂರಕ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತಿದೆ.



ದೇವರ ಅನುಗ್ರಹದ ಜೊತೆಗೆ ನಾವು ಪ್ರಯತ್ನಶೀಲರಾಗಿ ಕೆಲಸ ಮಾಡಿದಲ್ಲಿ ಯಶಸ್ವಿಗಳಾಗುತ್ತೇವೆ ಎನ್ನುವುದಕ್ಕೆ ರಾಷ್ಟ್ರೋತ್ಥಾನ ಪರಿಷತ್‌ನ ತಪಸ್ ಯೋಜನೆಯೇ ದೊಡ್ಡ ನಿದರ್ಶನ. ಬಡತನದ ಕಾರಣಕ್ಕೆ ಅಧ್ಯಯನದಿಂದ ವಂಚಿತರಾದ ಮಕ್ಕಳನ್ನು, ಅವರು ಇದ್ದಲ್ಲಿಗೆ ಹೋಗಿ ಹುಡುಕಿಕೊಂಡು ಬಂದು ಉತ್ತಮ ವಿದ್ಯೆ ನೀಡಿ, ಐಐಟಿಯಂತಹ ಶ್ರೇಷ್ಠ ಶಿಕ್ಷಣ ಪಡೆದು ಅವರು ದೇಶದ ಆಧಾರಸ್ತಂಭಗಳಾಗಿ ದೊಡ್ಡ ಸಾಧಕರಾಗಿ ಮುಂದೆ ಬರುವಂತೆ ಮಾಡುವ ಈ ಕಾರ್ಯ ನಿಜವಾದ ತಪಸ್ಸು; ಮತ್ತು ಇದಕ್ಕೆ ತಪಸ್ ಎಂಬ ಹೆಸರಿಟ್ಟದ್ದು ಸಾರ್ಥಕವಾಗಿದೆ.

– ಶ್ರೀ ಸತ್ಯಾತ್ಮತೀರ್ಥ ಸ್ವಾಮಿಜೀ, ಪೀಠಾಧಿಪತಿಗಳು, ಉತ್ತರಾದಿಮಠ

- ಅನ್ಯಾನ್ಯ ಸಂದರ್ಭಗಳಲ್ಲಿ ವಿವಿಧ ಕ್ಷೇತ್ರಗಳ ಹಿರಿಯರು ಸಾಧಕರು ತಪಸ್‌ಗೆ ಆಗಮಿಸಿ ತಪಸ್ ಮಕ್ಕಳಿಗೆ ಮೌಲ್ಯಯುತ ಜೀವನದ ಬಗ್ಗೆ ಮಾರ್ಗದರ್ಶನ ಮಾಡಿದರು.
- **ಪೂರ್ವಛಾತ್ರ ಸಮಾವೇಶ :** ತಪಸ್‌ನಲ್ಲಿ ಈವರೆಗೆ 5 ತಂಡಗಳು ಹೊರಬಂದಿದ್ದು, ಈ ಹಳೆಯ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ವಿಚಾರ ವಿನಿಮಯ ಮಾಡಲು ಡಿಸೆಂಬರ್ 9ರಂದು ಪೂರ್ವಛಾತ್ರ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ದೇಶದ ನಾನಾ ಪ್ರದೇಶಗಳಲ್ಲಿ ಐಐಟಿ, ಎನ್.ಐ.ಟಿ. ಹಾಗೂ ಇತರ ಪ್ರತಿಷ್ಠಿತ ಇಂಜಿನಿಯರ್ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಸುಮಾರು 94 ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದರು. ತಮ್ಮ ವಿದ್ಯಾಭ್ಯಾಸದ ಜೀವನ, ಕೆಲಸದ ಜೀವನ ಇತ್ಯಾದಿ ಅಂಶಗಳನ್ನು ವಿನಿಮಯ ಮಾಡಿಕೊಂಡರು.
- **ಹಬ್ಬಗಳ ಆಚರಣೆ:** ವಿದ್ಯಾರ್ಥಿಗಳ ಮಾನಸಿಕ ವಿಕಾಸಕ್ಕಾಗಿ ಸರಸ್ವತಿಪೂಜೆ, ಸಂಕ್ರಾಂತಿ, ಯುಗಾದಿ, ಗಣೇಶೋತ್ಸವ, ದೀಪಾವಳಿ ಮುಂತಾದ ಹಬ್ಬಗಳನ್ನು

ಆಚರಿಸಲಾಯಿತು. ಬೆಂಗಳೂರಿನ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪೆನಿಯ ಉದ್ಯೋಗಿಗಳು ತಪಸ್ ವಿದ್ಯಾರ್ಥಿಗಳೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸಿದರು. ಮಕ್ಕಳೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

- **ಗ್ಲೋಬಲ್ ಎಡ್ಜ್ ಸಾಫ್ಟ್‌ವೇರ್ ಕಂಪೆನಿಗೆ ಭೇಟಿ:** ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಂಪೆನಿಗಳ ವ್ಯವಸ್ಥೆಯನ್ನು ಪರಿಚಯಿಸುವ ಸಲುವಾಗಿ ಗ್ಲೋಬಲ್ ವಿಲೇಜ್‌ನಲ್ಲಿರುವ ಗ್ಲೋಬಲ್ ಸಾಫ್ಟ್‌ವೇರ್ ಕಂಪನಿಗೆ ಕರೆದೊಯ್ಯಲಾಯಿತು. ವಿದ್ಯಾರ್ಥಿಗಳಿಗೆ ಕಂಪೆನಿಯ ಕಾರ್ಯವೈಖರಿ, ವ್ಯವಸ್ಥೆ ಹಾಗೂ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ಸಂಸ್ಥೆಯ ಪ್ರಮುಖರಾದ ಎಂ.ಪಿ. ಕುಮಾರ್ ಅವರು ವಿವರಿಸಿದರು.
- **ಮಾತೃಭೋಜನ:** ಮಕ್ಕಳಿಗೆ ಮಾತೃವಾತ್ಸಲ್ಯವನ್ನು ಪರಿಚಯಿಸುವ ಸಲುವಾಗಿ ಮಾತೃಭೋಜನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಬನಶಂಕರಿಯ ಸುತ್ತಮುತ್ತಲಿನ ಮನೆಗಳ ತಾಯಂದಿರು ಸ್ವತಃ ಅಡುಗೆ ತಯಾರಿಸಿ ತಂದು ತಪಸ್ ವಿದ್ಯಾರ್ಥಿಗಳಿಗೆ ಕೈ ತುತ್ತು ನೀಡಿ, ಅವರ ವೈಯಕ್ತಿಕ ಮಾಹಿತಿಯನ್ನು ವಿಚಾರಿಸಿದರು.
- **ಸಂಕಲ್ಪ:** ತಮ್ಮ ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಶಿಕ್ಷಣ ಮುಗಿಸಿ ಮುಂದಿನ ಉನ್ನತ ಶಿಕ್ಷಣಕ್ಕೆ ಹೋಗುವ ದ್ವಿತೀಯ ಪಿ.ಯು. ವಿದ್ಯಾರ್ಥಿಗಳಿಗಾಗಿ ಮೇ 2 ರಂದು ಸಂಕಲ್ಪ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಗ್ಲೋಬಲ್ ಸಾಫ್ಟ್‌ವೇರ್‌ನ ಎಂ.ಪಿ. ಕುಮಾರ್, ಬೇಸ್‌ನ ಪ್ರಮುಖರಾದ ವಲ್ಲೀಶ್, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು.

## 2015–17ರ 4ನೇ ಬ್ಯಾಚ್‌ನ ಫಲಿತಾಂಶ

- 2016–18ನೇ ಸಾಲಿನಲ್ಲಿ ತಪಸ್ ಯೋಜನೆಯಲ್ಲಿ ತರಬೇತಿ ಪಡೆದ 6 ಮಂದಿ ಪ್ರತಿಷ್ಠಿತ ಐಐಟಿ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.
- ತಪಸ್‌ನಲ್ಲಿ ಒಟ್ಟು 33 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದು, 26 ಮಂದಿ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಹಾಗೂ 25 ಮಂದಿ ವಿದ್ಯಾರ್ಥಿಗಳು ಪ್ರತಿಷ್ಠಿತ JEE-Main (Joint Entrance Examination) ಪರೀಕ್ಷೆಗೆ ಆಯ್ಕೆಯಾಗಿದ್ದಾರೆ.
- ಸಿಇಟಿಯಲ್ಲಿ ಇಬ್ಬರು 500ರ ಒಳಗಿನ ರ್‍ಯಾಂಕ್ ಗಳಿಸಿದರೆ, ಒಟ್ಟು 7 ಮಂದಿ 1000ದ ಒಳಗಿನ ರ್‍ಯಾಂಕ್ ಗಳಿಸಿದ್ದಾರೆ. 11 ಮಂದಿ 1000 ದಿಂದ 2000ದ ಒಳಗಿನ ರ್‍ಯಾಂಕ್ ಗಳಿಸಿದ್ದಾರೆ. 8 ಮಂದಿ 2000 ದಿಂದ 5000 ದ ಒಳಗಿನ ರ್‍ಯಾಂಕ್ ಗಳಿಸಿದ್ದಾರೆ.
- ಹುಣಸಮಾರನಹಳ್ಳಿಯ ಸಾಮಾನ್ಯ ಬಡಕುಟುಂಬಕ್ಕೆ (ತಂದೆ ಸೆಕ್ಯುರಿಟಿ, ತಾಯಿ ಗೃಹಿಣಿ) ಸೇರಿದ ಸಮರ್ಥ ಪಿ. ಅವರು ಪಿಯುಸಿಯಲ್ಲಿ 583 ಅಂಕಗಳನ್ನು (ಶೇ. 97.17) ಹಾಗೂ ಸಿಇಟಿಯಲ್ಲಿ 289ನೇ ರ್‍ಯಾಂಕ್, ಹಾವೇರಿ ಜಿಲ್ಲೆಯ ಕೃಷಿಕ ಕುಟುಂಬದ ಸಮರ್ಥ ಹಾದಿಮನಿ ಅವರು ಒಟ್ಟು 563 (ಶೇ. 93.83) ಅಂಕ ಹಾಗೂ ಸಿಇಟಿಯಲ್ಲಿ 290ನೇ ರ್‍ಯಾಂಕ್, ಗುಬ್ಬಿ ತಾಲೂಕಿನ ಚಿಕ್ಕೆಗುಡ್ಡ ಹಳ್ಳಿಯ ಅನಕ್ಷರಸ್ಥ ಕೂಲಿ ಕಾರ್ಮಿಕ ಕುಟುಂಬದಿಂದ ಬಂದ ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾಂತರಾಜ್ ಪಿಯುಸಿಯಲ್ಲಿ 547 (ಶೇ. 91.17) ಅಂಕ ಮತ್ತು ಹಿರೇಕೆರೂರು ತಾಲೂಕಿನ ಕೃಷಿಕ ಕುಟುಂಬದ ಶಿವರಾಜ್ ಬಿ.ಕೆ. ರಾಜ್ಯಕ್ಕೆ 592ನೇ ರ್‍ಯಾಂಕ್ ಗಳಿಸಿದ್ದಾನೆ.

## ಪಕ್ಷಿನೋಟ

- ಈಗಾಗಲೇ 5 ತಂಡಗಳ 170ಕ್ಕೂ ಅಧಿಕ ಬಡ ವಿದ್ಯಾರ್ಥಿಗಳು ತಮ್ಮ ಎರಡು ವರ್ಷಗಳ ಶಿಕ್ಷಣ ಪಡೆದು ಉನ್ನತ ಶಿಕ್ಷಣಕ್ಕಾಗಿ ಹೊರಬಂದಿದ್ದಾರೆ. ಮೊದಲನೇ ತಂಡದವರು ಈ ವರ್ಷ ತಮ್ಮ ವೃತ್ತಿ ಜೀವನಕ್ಕೆ ಕಾಲಿಟ್ಟಿದ್ದಾರೆ. ಎಲ್ಲರೂ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಪಡೆದಿದ್ದಾರೆ.
- ಇದುವರೆಗೂ 16 ಜನ ದೇಶದ 7 ವಿವಿಧ ಐಐಟಿಗಳಲ್ಲಿ ಪ್ರವೇಶ ಪಡೆದಿದ್ದಾರೆ. 31 ಮಂದಿ ಎನ್.ಐ.ಟಿ (30 ಸುರತ್ಕಲ್ ಹಾಗೂ ಒಬ್ಬ ರೂರ್‌ಕೆಲಾ) ಪ್ರವೇಶ ಪಡೆದಿದ್ದಾರೆ. ಉಳಿದವರು ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಾದ ಆರ್.ವಿ., ಪಿ.ಇ.ಎಸ್., ಬಿ.ಎಂ.ಎಸ್. ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

## ಪರಿಣಾಮ

- ತಪಸ್ ಒಬ್ಬ ವಿದ್ಯಾರ್ಥಿಯ ಜೀವನವನ್ನಷ್ಟೇ ಅಲ್ಲದೆ ಅವರ ಇಡೀ ಪರಿವಾರದವರನ್ನೂ ಬದಲಾಯಿಸಿದೆ. ಆರ್ಥಿಕ ಮಟ್ಟ ಒಂದೆಡೆಯಾದರೆ ಸಮಾಜದಲ್ಲಿ ಅವರ ಗುರುತಿಸುವಿಕೆ ಬದಲಾಗಿದೆ.
- ಹೈಸ್ಕೂಲ್, ಕಾಲೇಜು ವಿದ್ಯಾರ್ಥಿಗಳು ತಮ್ಮ ಮುಂದಿನ ಶೈಕ್ಷಣಿಕ ಆಯ್ಕೆಯ ಬಗೆಗೆ ತಪಸ್ ವಿದ್ಯಾರ್ಥಿಗಳ ಮಾರ್ಗದರ್ಶನ ಪಡೆಯುತ್ತಿದ್ದಾರೆ.

# ಸಾಧನಾ

ಬಹಳಷ್ಟು ಹೆತ್ತವರು ಹೆಣ್ಣುಮಕ್ಕಳನ್ನು ಕಾಲೇಜು ಶಿಕ್ಷಣಕ್ಕಾಗಿ ದೂರದ ಪ್ರದೇಶಕ್ಕೆ ಕಳುಹಿಸುವ ಶಕ್ತಿ ಹೊಂದಿರುವುದಿಲ್ಲ. ಹಾಗಾಗಿ, ಸಮೀಪದ ಯಾವುದೋ ಸರ್ಕಾರಿ ಕಾಲೇಜಿಗೆ ಕೆಲವರು ಸೇರಿಸಿದರೆ ಮತ್ತೆ ಕೆಲವರು ಮದುವೆ ಮಾಡಿ 'ಜವಾಬ್ದಾರಿ ಮುಗಿಯಿತು' ಎಂದು ಕೈ ತೊಳೆದುಕೊಳ್ಳುತ್ತಾರೆ. ಆದರೆ, ಗ್ರಾಮೀಣ ಭಾಗದ ಪ್ರತಿಭಾವಂತ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಂದಿಷ್ಟು ಅನುಕೂಲ ಕಲ್ಪಿಸಿದರೆ ಅವರು ಯಾರಿಗೂ ಕಡಮೆ ಇಲ್ಲದಂತೆ ಸಾಧನೆಯ ಹೆಗ್ಗುರುತುಗಳನ್ನು ಮೂಡಿಸಬಲ್ಲರು. ಈ ನಿಟ್ಟಿನಲ್ಲಿ ವ್ಯಾಪಕ ಚಿಂತನ-ಮಂಥನ ನಡೆಸಿ ಹೆಣ್ಣುಮಕ್ಕಳಿಗಾಗಿಯೇ 2017-18ರ ಶೈಕ್ಷಣಿಕ ವರ್ಷದಿಂದ 'ಸಾಧನಾ' ಎಂಬ ಯೋಜನೆಯನ್ನು ಆರಂಭಿಸಲು ನಿರ್ಧರಿಸಲಾಗಿದೆ.

ಬಾಲಕರಿಗಾಗಿ ಇರುವ ತಪಸ್‌ನಂತೆಯೇ ನಡೆಯುವ ಈ ಯೋಜನೆಯಲ್ಲಿ ಆಯ್ಕೆಯಾದ ಬಡ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಬೆಂಗಳೂರಿನ ಥಣಿಸಂದ್ರದಲ್ಲಿರುವ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನಲ್ಲಿ ಎರಡು ವರ್ಷಗಳ ಪಿಯುಸಿ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಅಲ್ಲದೆ, ಆಯ್ಕೆಯಾದ ವಿದ್ಯಾರ್ಥಿನಿಯರಿಗೆ ಎನ್‌ಇಇಟಿ (National Eligibility and Entrance) ಹಾಗೂ ಸಿಇಟಿ ಪ್ರವೇಶ ಪರೀಕ್ಷೆಗಳಿಗಾಗಿ ತರಬೇತಿ ನೀಡಲಾಗುತ್ತದೆ. ಊಟ, ಹಾಸ್ಟೆಲ್ ಸೌಲಭ್ಯ ಹಾಗೂ ಅಧ್ಯಯನ ಸಾಮಗ್ರಿಯನ್ನು ಉಚಿತವಾಗಿ ಪೂರೈಸಲಾಗುತ್ತದೆ.

## 2018-19ರ ಅಂಕಿ-ಅಂಶಗಳ ವಿವರ

- ಪ್ರಸ್ತುತ 2018-19ನೇ ಸಾಲಿನಲ್ಲಿ ಒಟ್ಟು 3500 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.
- ಮೊದಲ ಸುತ್ತಿನಲ್ಲಿ ಆಯ್ಕೆಯಾದ ರಾಜ್ಯದ 28 ಜಿಲ್ಲೆಗಳ 258 ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಲಾಯಿತು.
- ಅಂತಿಮ ಆಯ್ಕೆ ಶಿಬಿರಕ್ಕೆ ಬಂದವರು : 151
- ಸಾಧನಾ 2018-20ಗೆ ಆಯ್ಕೆಯಾದವರು : 50
- ಪ್ರಸ್ತುತ ಒಟ್ಟು 120 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.

**ಸಾಧನಾ ಅಂತಿಮ ಆಯ್ಕೆ ಶಿಬಿರ:** 2018-2020ನೇ ಸಾಲಿನ ಸಾಧನಾ ಅಂತಿಮ ಆಯ್ಕೆ ಶಿಬಿರವು ಏಪ್ರಿಲ್ 8ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಿತು. ಐಬಿಎಂ (International Business Machines Corporation)ನ ಬೆಂಗಳೂರು ಘಟಕದ ಪ್ರಮುಖರಾದ ಸಿಂಧೂ ಶ್ರೀನಿವಾಸ್, ಮಣಿಪಾಲ್ ಆಸ್ಪತ್ರೆಯ ಸ್ತ್ರೀ ಮತ್ತು ಪ್ರಸೂತಿ ತಜ್ಞರಾದ ಡಾ. ತಂಗಂ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು. ಬೇಸ್ ಸಂಸ್ಥೆಯ ಎ.ವಿ. ಶಿವಕುಮಾರ್, ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ದಿನೇಶ್ ಹೆಗ್ಡೆ ಅವರು ಉಪಸ್ಥಿತರಿದ್ದರು.

**ವಿದ್ಯಾರಂಭ :** ವಿದ್ಯಾರ್ಥಿನಿಯರಲ್ಲಿ ಭಾರತೀಯ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವ ಸಲುವಾಗಿ ಮೇ 30ರಂದು ವಿದ್ಯಾರಂಭ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಗೇಲ್ ಸಂಸ್ಥೆಯ ಮುಖ್ಯಸ್ಥರಾದ ದೇವ್‌ಕುಮಾರ್, ಗ್ಲೋಬಲ್ ಎಡ್ಜ್ ಸಂಸ್ಥೆಯ ಮುಖ್ಯಸ್ಥರಾದ ಎಂ.ಪಿ. ಕುಮಾರ್, ಬೇಸ್ ಸಂಸ್ಥೆಯ ಎ.ವಿ. ಶಿವಕುಮಾರ್ ಅವರು ಅತಿಥಿಗಳಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು.

ವಿದ್ಯಾರ್ಥಿಗಳ ಮಾನಸಿಕ ವಿಕಾಸಕ್ಕಾಗಿ ಕಾರ್ಗಿಲ್ ವಿಜಯ ದಿವಸ್ (ಜುಲೈ 26), ಗುರುಪೂರ್ಣಿಮೆ (ಜುಲೈ 27), ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 15), ಕನ್ನಡ ರಾಜ್ಯೋತ್ಸವ, ಕನಕದಾಸ ಜಯಂತಿ (ನವೆಂಬರ್ 26), ವಿವೇಕಾನಂದ ಜಯಂತಿ, ಸರಸ್ವತಿ ಪೂಜೆ, ಕಲಾಂಜಲಿ (ಜನವರಿ 12), ತ್ಯಾಗರಾಜರ ಆರಾಧನೆ (ಜನವರಿ 25), ರಾಷ್ಟ್ರೀಯ ಮತದಾನ ದಿನಾಚರಣೆ (ಜನವರಿ 21),



ಶಿವಾಜಿ ಜಯಂತಿ (ಫೆಬ್ರುವರಿ 19) ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಆಯಾ ವಿಷಯಗಳಿಗೆ ಸಂಬಂಧಿಸಿದ ಸಾಕ್ಷ್ಯಚಿತ್ರ, ವಿಡಿಯೋಗಳನ್ನು ಪ್ರದರ್ಶಿಸಲಾಯಿತು.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ 13ರಿಂದ 19ರ ವರೆಗೆ 7 ದಿನಗಳ ಕಾಲ ಕನ್ನಡ ಸಾಹಿತ್ಯ ಪ್ರಕಾರಗಳ ಪರಿಚಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಾಧನಾ ವಿದ್ಯಾರ್ಥಿನಿಯರು ವಿವಿಧ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸಿದರು.

**ಪ್ರವಾಸ:** ನವೆಂಬರ್ 24 ರಂದು ಕೋಟೆಗಳ ನಾಡು ಚಿತ್ರದುರ್ಗಕ್ಕೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲಾಯಿತು.

**ಕಲಾಂಜಲಿ :** ವಿದ್ಯಾರ್ಥಿನಿಯರಲ್ಲಿರುವ ಪ್ರತಿಭಾ ಪ್ರದರ್ಶನಕ್ಕಾಗಿ ನವೆಂಬರ್ 13ರಿಂದ 19ರ ವರೆಗೆ 'ಕಲಾಂಜಲಿ' ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿನಿಯರಿಗೆ ಆಶುಭಾಷಣ, ಕನ್ನಡದಲ್ಲಿ ಭಾಷಣ (ವಿದೇಶಿ ವ್ಯಾಮೋಹ– ಪ್ರತಿಭಾಪಲಾಯನ ಹಾಗೂ ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು), ಸ್ವರಚಿತ ಕವನ ವಾಚನ, ಚಿತ್ರಕಲೆ (ಪಾಟ್ ಪೇಂಟಿಂಗ್ ಮತ್ತು ಪೆನ್ಸಿಲ್ ಸ್ಕೆಚ್), ಶಾಸ್ತ್ರೀಯ ಸಂಗೀತ, ಜನಪದ ಗೀತೆ, ಭಾವಗೀತೆ, ಮೆಮೊರಿ ಟೆಸ್ಟ್, ವಾದ್ಯ ವಾದನ, ರಂಗೋಲಿ, ಕಸದಿಂದ ರಸ, ಶಾಸ್ತ್ರೀಯ ನೃತ್ಯ, ಕುಶಲ ಕಲೆ, ಏಕಪಾತ್ರಭಿನಯ, ರೂಬಿಕ್ಸ್‌ಕ್ಯೂಬ್, ಗುಂಪು ಚರ್ಚೆ, ಸಂಸ್ಕೃತ ಶ್ಲೋಕ ಪಠಣ ಮುಂತಾದ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಜನವರಿ 12ರಂದು ನಡೆದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಸಿರ್‌ನೆರ್‌ನಲ್ಲಿ ಹೆಲ್ತ್‌ಕೇರ್ ಪ್ರೋಗ್ರಾಂನ ಮ್ಯಾನೇಜರ್ ಆಗಿರುವ ವೈಷ್ಣವೀ ದ್ವಾರಕಾನಾಥ್ ಅವರು ಆಗಮಿಸಿ ಬಹುಮಾನ ವಿತರಿಸಿದರು.

## ವಿಶೇಷ ಉಪನ್ಯಾಸ

- ವಿದ್ಯಾರ್ಥಿಗಳ ವೈಚಾರಿಕ ಸಾಮರ್ಥ್ಯವನ್ನು ವೃದ್ಧಿಸುವ ಸಲುವಾಗಿ ಜುಲೈ 28ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಪಶ್ಚಿಮ ಬಂಗಾಳದಲ್ಲಿ ಎಂಜಿನಿಯರಾಗಿದ್ದ ಹಾಗೂ ಪ್ರಸ್ತುತ ಚಿನ್ಮಯ ಮಿಷನ್‌ನ ಸಕ್ರಿಯ ಕಾರ್ಯಕರ್ತ ರವಿ ಅವರು ಮುಖ್ಯ ಅತಿಥಿಗಲಾಗಿ ಆಗಮಿಸಿ ಜೀವನ ಮೌಲ್ಯಗಳ ಕುರಿತು ಮಾತನಾಡಿದರು.
- ನವೆಂಬರ್ 25ರಂದು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ಶಿಕ್ಷಣ ತಜ್ಞರೂ ಅಕಾಡೆಮಿ ಆಫ್ ಕ್ರಿಯೇಟಿವ್ ಟೀಚಿಂಗ್‌ನ ಸ್ಥಾಪಕರೂ ಆದ ಡಾ. ಗುರುರಾಜ ಕರಜಗಿ ಅವರು ಆಗಮಿಸಿ ಮಾರ್ಗದರ್ಶನ ಮಾಡಿದರು. ಸುಮುಖಾಯ ಟ್ರಸ್ಟ್‌ನ ಸದಸ್ಯರು ಮತ್ತು ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.



## ಆಪ್ತಸಮಾಲೋಚನೆ

ವಿದ್ಯಾರ್ಥಿನಿಯರಿಗೆ ಎದುರಾಗುವ ಮಾನಸಿಕ, ದೈಹಿಕ ಹಾಗೂ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಅಕ್ಟೋಬರ್ 3ರಂದು ಆಪ್ತಸಮಾಲೋಚನೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಉನ್ನತಿ ಹೀಲಿಂಗ್ ಫೌಂಡೇಶನ್ನಿನ ಸ್ಥಾಪಕರು ಹಾಗೂ ಎಂ.ಎಸ್. ರಾಮಯ್ಯ ಆಸ್ಪತ್ರೆಯ ಪ್ರಾಣಿಕ್ ಹೀಲಿಂಗ್‌ನ ಮುಖ್ಯಸ್ಥರಾದ ಅಧ್ಯಕ್ಷರಾಗಿರುವ ಡಾ. ಸರಸ್ವತಿ ಹೆಗ್ಡೆ ಅವರು ಆಗಮಿಸಿ ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ನಡೆಸಿದರು.

ಒಕ್ಕಲಿಗ ಸಂಘ ದಂತ ವೈದ್ಯಕೀಯ ಕಾಲೇಜಿನ ವೈದ್ಯ ವಿದ್ಯಾರ್ಥಿನಿಯರು ಆಗಮಿಸಿ ಸಾಧನಾ ವಿದ್ಯಾರ್ಥಿಗಳೊಂದಿಗೆ ಆಪ್ತ ಸಮಾಲೋಚನೆಗಳನ್ನು ನಡೆಸಿ, ಅವರ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿದರು.



# ಸಂವಿತ್

## ಸಾರ್ಥಕ ಬದುಕಿಗಾಗಿ ಜ್ಞಾನದ ಸಮರ್ಥ ಅನುಷ್ಠಾನ

ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಸರಳ ಹಾಗೂ ಸುಲಭವಾಗಿ ಅಳವಡಿಸಬಹುದಾದ ಅಗತ್ಯ ಸುಧಾರಣಾ ಕ್ರಮಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 2017ರಲ್ಲಿ 'ಸಂವಿತ್' ಪ್ರಾರಂಭವಾಯಿತು. 'ಸಂವಿತ್', ನಿರಂತರ ಶೈಕ್ಷಣಿಕ ಸಂಶೋಧನಾ ಕಾರ್ಯಗಳಲ್ಲಿ ಮತ್ತು ರಾಜ್ಯದ ಎಲ್ಲ ಶಾಲೆ, ಶಿಕ್ಷಣಸಂಸ್ಥೆಗಳಲ್ಲಿ ಈ ಸುಧಾರಣಾ ಕ್ರಮಗಳನ್ನು ಪರಿಚಯಿಸುವ ಬಹುಮುಖ್ಯ ಗುರಿಯನ್ನು ಹೊಂದಿದೆ.

### ಕಾರ್ಯಯೋಜನೆ

- ವಿದ್ವಾಂಸರು, ಶೈಕ್ಷಣಿಕ ತಜ್ಞರು, ಶಿಕ್ಷಕರು ಹಾಗೂ ಸಂಶೋಧಕರು ಒಂದೆಡೆ ಸೇರಿ, ಸಮಗ್ರ ಶಿಕ್ಷಣ ಪದ್ಧತಿಯ ಕ್ರಮಗಳನ್ನು ಸುಧಾರಿಸಲು ಸಮರ್ಥ ವೇದಿಕೆಯನ್ನು ಕಲ್ಪಿಸುವುದು.
- ಪ್ರಸ್ತುತ ಶಿಕ್ಷಣ ಕ್ರಮದ ನ್ಯೂನತೆಗಳನ್ನು, ಮಿತಿಗಳನ್ನು ಗುರುತಿಸಿ, ನೂತನ, ಸರಳ ಹಾಗೂ ವ್ಯವಸ್ಥಿತ ಶಿಕ್ಷಣ ಕ್ರಮವನ್ನು ರೂಪಿಸುವುದು.
- ಸಂಶೋಧನಾ ಮಾದರಿಗಳನ್ನು ರೂಪಿಸಿ, ಅದನ್ನು ಅನ್ಯಾನ್ಯ ಶಿಕ್ಷಣ ಸಂಸ್ಥೆಗಳಿಗೆ ಒದಗಿಸಿ, ಅವುಗಳ ವೈಜ್ಞಾನಿಕ ಬಳಕೆಗೆ ಅವಕಾಶ ಕಲ್ಪಿಸಲಾಗುವುದು.
- ಸಂಶೋಧನಾ ಪ್ರಬಂಧಗಳು, ವಿವಿಧ ಪ್ರಯೋಗ ಹಾಗೂ ಶಿಕ್ಷಣ ಕ್ರಮಗಳ ಪ್ರಯೋಗಾತ್ಮಕ ಹಾಗೂ ಅಧ್ಯಯನಾಧಾರಿತ ವಿಷಯಗಳ (ಕೇಸ್ ಸ್ಟಡೀಸ್) ಯಶಸ್ವಿ ಪ್ರಯೋಗಗಳ ವರದಿಗಳನ್ನು ಪ್ರಕಟಿಸುವುದು.
- ವ್ಯಾಪಕ ಹಾಗೂ ವಿಸ್ತೃತ ಅಳವಡಿಕೆಗಾಗಿ ಶಿಕ್ಷಕರಿಗೆ ನೂತನ ಶಿಕ್ಷಣ ಪದ್ಧತಿ ಹಾಗೂ ಕ್ರಮಗಳ ಸೂಕ್ತ ತರಬೇತಿ ನೀಡುವುದು.
- ಸಂವಿತ್ ಸಂಶೋಧನಾ ಕೇಂದ್ರದಲ್ಲಿ ವಿಭಿನ್ನ ಶೈಕ್ಷಣಿಕ ಸಂಸ್ಥೆಗಳ ಶೈಕ್ಷಣಿಕ ಸಂಶೋಧನಾ ವಿವರಗಳು ಹಾಗೂ ಸಮಗ್ರ ಮಾಹಿತಿ ಸಂಗ್ರಹಿಸುವುದು.
- ಶಿಕ್ಷಣ ನೀತಿಗಳನ್ನು ರೂಪಿಸುವವರು ರಾಷ್ಟ್ರಮಟ್ಟದಲ್ಲಿ ಈ ನೂತನ ಶಿಕ್ಷಣ ಕ್ರಮದ ವಿಶಿಷ್ಟ ಸಂಶೋಧನಾ ಕ್ರಮಗಳನ್ನು ಪ್ರಾಯೋಗಿಕವಾಗಿ ಅನುಸರಿಸಲು ಮತ್ತು ಅಳವಡಿಸಿಕೊಳ್ಳುವಷ್ಟು ಇದು ಪರಿಣಾಮಕಾರಿಯಾಗಿದೆ.

### ಕಾರ್ಯಾನುಷ್ಠಾನ

- ಪ್ರಸ್ತುತ ಸಂವಿತ್ 110ಕ್ಕೂ ಅಧಿಕ ಶಾಲೆಗಳಲ್ಲಿ ತನ್ನ ಚಿಂತನೆಯ ಅನುಷ್ಠಾನದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.
- ಕರ್ನಾಟಕ ಸಂಸ್ಕೃತ ವಿವಿಯ ಮಾಜಿ ಕುಲಪತಿಗಳಾದ ಡಾ. ಮಲ್ಲೇಪುರಂ ವೆಂಕಟೇಶ್, ಚಿನ್ಮಯ ವಿಶ್ವವಿದ್ಯಾಪೀಠದ ಸಂಸ್ಥಾಪಕ ಕುಲಪತಿಗಳಾದ ಡಾ. ಮಹಾದೇವನ್ ಬಿ., ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್‌ನ ಅಧ್ಯಕ್ಷರಾದ ಡಾ. ಗುರುರಾಜ ಕರಜಗಿ, ಎಸ್‌ವ್ಯಾಸ ವಿವಿಯ ಮಾಜಿ ಕುಲಪತಿಗಳಾದ ಡಾ. ರಾಮಚಂದ್ರ ಭಟ್ ಕೋಟೆಮನೆ ಮುಂತಾದ ಶಿಕ್ಷಣ ತಜ್ಞರನ್ನೊಳಗೊಂಡ ಸಲಹಾ ಸಮಿತಿ, ತಜ್ಞರ ಸಮಿತಿ ಹಾಗೂ ಆಡಳಿತ ಮಂಡಳಿಯನ್ನು ರಚಿಸಲಾಗಿದೆ.

- ಒಬ್ಬ ಅನುಷ್ಠಾನ ಮ್ಯಾನೇಜರ್ ಮತ್ತು ಬಾಗಲಕೋಟೆ, ಧಾರವಾಡ ಹಾಗೂ ಬೆಂಗಳೂರು ಕೇಂದ್ರವಾಗಿರಿಸಿಕೊಂಡು ತಲಾ ಒಬ್ಬ ಸಮನ್ವಯಕಾರರನ್ನು (Coordinator) ನೇಮಿಸಲಾಗಿದೆ.
- ಶಾಲೆಗಳಲ್ಲಿನ ಅನುಷ್ಠಾನದ ಪ್ರಗತಿಯನ್ನು ಗಮನಿಸಲು ಸಂವಿತ್ ಮೊಬೈಲ್ ಆಪ್ ಅನ್ನು ಸಿದ್ಧಪಡಿಸಲಾಗುತ್ತಿದೆ.
- ಎಲ್ಲ ಪ್ರಮುಖ ಸಂಸ್ಥೆಗಳನ್ನು ಜೋಡಿಸುವ ಪ್ರಯತ್ನ ನಡೆಯುತ್ತಿದೆ.
- ಎಲ್ಲ ಶಾಲೆಗಳ ಶಿಕ್ಷಕರಿಂದ ಆನ್‌ಲೈನ್ ಸಲಹೆ ಪಡೆಯುವ ವ್ಯವಸ್ಥೆ ನಡೆಯುತ್ತಿದೆ. ವೆಬ್‌ಸೈಟ್‌ಗೆ ಚಾಲನೆ ದೊರೆತಿದೆ.

## 2018–19ರಲ್ಲಿ ನಡೆದ ಚಟುವಟಿಕೆಗಳು

### ಯೋಗ ಮಾದರಿ ಅನುಷ್ಠಾನ

- 83ಕ್ಕೂ ಹೆಚ್ಚು ಶಾಲೆಗಳಲ್ಲಿ ಶಾಲಾ ಮಾದರಿ ಯೋಗವನ್ನು ಅನುಷ್ಠಾನಗೊಳಿಸಲಾಗಿದೆ. 30ಕ್ಕೂ ಅಧಿಕ ಶಾಲೆಗಳು ಈಗ ಅದರೊಂದಿಗೆ ಸೇರಿಕೊಳ್ಳುತ್ತಿವೆ.
- 36 ಸರ್ಕಾರಿ ಶಾಲೆಗಳು, 5 ಬಿಜಿಎಸ್ ಶಾಲೆಗಳು, ಉತ್ತರ ಕರ್ನಾಟಕ ಭಾಗದ 34 ಶಾಲೆಗಳು ಹಾಗೂ 8 ರಾಷ್ಟ್ರೋತ್ಥಾನ ಶಾಲೆಗಳು ಸೇರಿದಂತೆ ಒಟ್ಟು 83 ಶಾಲೆಗಳಲ್ಲಿ ಶಾಲಾ ಮಾದರಿ ಯೋಗವನ್ನು ಅನುಷ್ಠಾನಗೊಳಿಸಲಾಗಿದೆ. ಇದೀಗ 30ಕ್ಕೂ ಅಧಿಕ ಶಾಲೆಗಳು ಸೇರ್ಪಡೆಗೊಂಡಿವೆ.
- ಬೆಂಗಳೂರು ಮತ್ತು ಬಾಗಲಕೋಟೆಗಳಲ್ಲಿ ತಲಾ ಒಂದು ಯೋಗ ತರಬೇತಿ ಶಿಬಿರವನ್ನು ನಡೆಸಲಾಗಿದೆ. ಕಾರ್ಯಕ್ರಮದ ವಿನ್ಯಾಸ ಮತ್ತು ಅನುಷ್ಠಾನದ ಕುರಿತು ಶಿಕ್ಷಕರು ಹಾಗೂ ಶಾಲಾ ಆಡಳಿತ ಮೆಚ್ಚುಗೆ ವ್ಯಕ್ತಪಡಿಸಿವೆ.
- ಯೋಗ ಪಾಠ ಪಟ್ಟಿ ಪುಸ್ತಿಕೆ ರಚಿಸಲಾಗುತ್ತಿದ್ದು, ಮೊದಲ ಕರಡು ಪ್ರತಿ ಸಿದ್ಧವಾಗಿದೆ; 2019ರ ಜೂನ್ 2ನೇ ವಾರ ತಜ್ಞರ ಸಮೀಕ್ಷೆ ನಡೆಯಲಿದೆ.

### ಜೀವನ ಮಾದರಿ ಕಥೆಗಳು

- ಪರಿಪೂರ್ಣ ಜೀವನಕ್ಕಾಗಿ ವ್ಯಕ್ತಿತ್ವ ವಿಕಸನದ ಕಥೆಗಳ ಪಾತ್ರ ಮಹತ್ತ್ವದ್ದು. ಇದನ್ನು ಗಮನದಲ್ಲಿರಿಸಿಕೊಂಡು ಮಾದರಿ ಜೀವನವನ್ನು ಪರಿಚಯಿಸುವ ಒಂದರಿಂದ ಹತ್ತನೇ ತರಗತಿ ವರೆಗಿನ 10 ಪುಸ್ತಕಗಳ(ಇಂಗ್ಲಿಷ್‌ನಲ್ಲಿ) ಕರಡು ಪ್ರತಿ ಸಿದ್ದವಾಗಿದ್ದು, 2019ರ ಜೂನ್ ತಿಂಗಳಿನಲ್ಲಿ ತಜ್ಞರ ಸಮೀಕ್ಷೆ ನಡೆಯಲಿದೆ. ಕನ್ನಡ ಅನುವಾದ ಪ್ರಗತಿಯಲ್ಲಿದೆ.
- ಜೂನ್ ತಿಂಗಳಿನಲ್ಲಿ ಬೆಂಗಳೂರು, ಬಾಗಲಕೋಟೆ, ಧಾರವಾಡ ಮತ್ತು ತುಮಕೂರು ಸೇರಿದಂತೆ ಒಟ್ಟು ನಾಲ್ಕು ತರಬೇತಿ ಕಾರ್ಯಕ್ರಮಗಳು ನಡೆಯಲಿವೆ.
- ಕಥಾ ಮಾದರಿಯ ಅನುಷ್ಠಾನ ಶಾಲೆಗಳಲ್ಲಿ ಜುಲೈ ಮೊದಲ ವಾರದಿಂದ ಆರಂಭವಾಗಲಿದೆ.

### ಭಾರತದ ಹೆಮ್ಮೆ

ವಿದ್ಯಾರ್ಥಿಗಳಲ್ಲಿ ಭಾರತೀಯನಾಗಿರುವುದಕ್ಕೆ ಹೆಮ್ಮೆ, ಅಭಿಮಾನ ಪಡುವ ಭಾವನೆಗಳನ್ನು ಮೂಡಿಸುವ ಸಲುವಾಗಿ ವಿಜ್ಞಾನ, ಗಣಿತ, ಇತಿಹಾಸ ಹಾಗೂ ಕಲಾ ವಿಭಾಗಗಳಲ್ಲಿ ಭಾರತದ ಶ್ರೇಷ್ಠತೆಯನ್ನು ಪರಿಚಯಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ಪ್ರಸ್ತುತ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳಲ್ಲಿ ನಡೆಯಲಿದೆ.



# FIRST

## ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ (FIRST), ಬೆಂಗಳೂರು

ಭಾರತೀಯ ಸಮಾಜವನ್ನು ಪ್ರಭಾವಿಸುವ ವಿವಿಧ ಆಯಾಮಗಳ ಬಗ್ಗೆ ದೇಸಿ ಚಿಂತನೆಯ ಹಿನ್ನೆಲೆಯಲ್ಲಿ ಪುನರ್ವಿಚಾರ, ಸಂಶೋಧನೆ ಮತ್ತು ವೈಚಾರಿಕತೆಗಳನ್ನು ಕಟ್ಟಿಬೆಳೆಸುವ ಉದ್ದೇಶದ ಸಲುವಾಗಿ ಫೌಂಡೇಶನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ (Foundation for Indic Research Studies - FIRST) ಕಾರ್ಯನಿರ್ವಹಿಸುತ್ತಿದೆ.



ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ ಈ ಕೆಳಗಿನ ಐದು ವಿಷಯಗಳನ್ನು ಆದ್ಯತೆಯ ವಿಷಯಗಳನ್ನಾಗಿ ಆಯ್ದುಕೊಂಡಿದ್ದು, ಇವುಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಹಾಗೂ ಪ್ರಸರಣ ಕಾರ್ಯ ನಡೆಸಲಿದೆ.

1. ಸಾಂಸ್ಕೃತಿಕ ಅಧ್ಯಯನ
2. ತತ್ತ್ವಶಾಸ್ತ್ರ
3. ಪರ್ಯಾಯ ಸಾಮಾಜಿಕ ಚಿಂತನೆ
4. ಪರ್ಯಾಯ ರಾಜಕೀಯ ಚಿಂತನೆ
5. ಸಂತುಲಿತ ಅಭಿವೃದ್ಧಿ ಮತ್ತು ಅರ್ಥಶಾಸ್ತ್ರ

ಈ ವರ್ಷ ಸಂಶೋಧನೆಯ ಭಾಗವನ್ನು ಒಳಗೊಂಡಂತೆ ಹಲವಾರು ವೈಚಾರಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

### ವಿಚಾರ ಗೋಷ್ಠಿ : ಆನಂದ ಕುಮಾರಸ್ವಾಮಿ – ಜೀವನ ಮತ್ತು ಕಾರ್ಯ

ಭಾರತೀಯ ಸಂಸ್ಕೃತಿಯ ಸ್ವಾರಸ್ಯವನ್ನು ವಿಶ್ವಕ್ಕೆ ಪರಿಚಯ ಮಾಡಿಸಿದವರಲ್ಲಿ ಅಗ್ರಗಣ್ಯರಾದ ಆನಂದ ಕೆಂಟಿಷ್ ಕುಮಾರಸ್ವಾಮಿ (1877 – 1947) ಅವರ ಕುರಿತು ಜುಲೈ 8ರಂದು ವಿಚಾರಗೋಷ್ಠಿ ಆಯೋಜಿಸಲಾಯಿತು. ಅವರ ಬಹು ಚರ್ಚಿತ 'ಡಾನ್ಸ್ ಆಫ್ ಶಿವ' ಕೃತಿಯ ಶತಮಾನದ ಹಿನ್ನೆಲೆಯಲ್ಲಿ ನಡೆದ ಈ ಗೋಷ್ಠಿಯಲ್ಲಿ ಪತ್ರಕರ್ತರಾದ ಸೂರ್ಯಪ್ರಕಾಶ ಪಂಡಿತ್ ಮತ್ತು ಲೇಖಕ ವಿಮರ್ಶಕರಾದ ಡಾ. ಜಿ.ಬಿ. ಹರೀಶ್ ಅವರು ಆನಂದ ಕುಮಾರಸ್ವಾಮಿಯವರ ಜೀವನ ಮತ್ತು ಕಾರ್ಯದ ವಿವಿಧ ಮುಖಗಳ ಪರಿಚಯ ಮಾಡಿಸಿದರು. ರಾಜ್ಯದ ವಿವಿಧ ಕಡೆಗಳಿಂದ ಕಲಾವಿದರು, ವಿದ್ವಾಂಸರು ಮತ್ತು ಲೇಖಕರು ಆಗಮಿಸಿದ್ದರು.



## ಒಂದು ವೈಚಾರಿಕ ಚರ್ಚೆ: ಆರ್ಯ – ದ್ರಾವಿಡ ವಾದ – ಭಾರತ ಭಂಜನಕ್ಕೆ ನಿಲ್ಲದ ಪ್ರಯತ್ನ

ಇಂದು ದೇಶದಲ್ಲಿ ಬಲಗೊಳ್ಳುತ್ತಿರುವ ರಾಷ್ಟ್ರವಾದವನ್ನು ಪೊಳ್ಳುಗೊಳಿಸಲು ಅನೇಕ ಎಡಪಂಥೀಯ ಬುದ್ಧಿಜೀವಿಗಳು ಸರ್ಕಾರಿ ಸಂಸ್ಥೆಗಳನ್ನು ಉಪಯೋಗಿಸಿ ಕೊಳ್ಳುತ್ತಿರುವುದು ರಹಸ್ಯವೇನಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ದ್ರಾವಿಡ ಕಲಾಮೇಳ' ಎಂಬ ಹೆಸರಿನಲ್ಲಿ ಪ್ರತ್ಯೇಕತಾ ವಾದವನ್ನು ಬಿತ್ತುವ ಮತ್ತು ದೇಶವನ್ನು ಉತ್ತರ ಹಾಗೂ ದಕ್ಷಿಣ ಎಂದು ವಿಭಜಿಸುವ ಪ್ರಯತ್ನಕ್ಕೆ ಇಂಬು ನೀಡುವ ಕಾರ್ಯಕ್ರಮವನ್ನು ಅಯೋಜಿಸುವ ಪ್ರಕಟಣೆಯನ್ನು ಹೊರಡಿಸಿತು. ಒಂದು ರೀತಿಯಲ್ಲಿ ಆತಂಕಕಾರಿ ಬೆಳವಣಿಗೆಯೇ ಎನ್ನಬಹುದಾದ ಈ ವಿಚಾರದ ಕುರಿತು ಫಸ್ಟ್ ವತಿಯಿಂದ 2018 ಆಗಸ್ಟ್ 27ರಂದು ವೈಚಾರಿಕ ಚರ್ಚೆಯನ್ನು ಅಯೋಜಿಸಲಾಯಿತು. ಅನೇಕ ಪತ್ರಕರ್ತರು, ಅಂಕಣಕಾರರು, ಇತಿಹಾಸಕಾರರು, ಸಾಮಾಜಿಕ ಜಾಲತಾಣದ ಸಕ್ರಿಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಮುಂದಿನ ದಿನಗಳಲ್ಲಿ ಈ ವಿಷಯದ ಕುರಿತ ಸಾರ್ವಜನಿಕ ಅಭಿಪ್ರಾಯ ರೂಪಿಸಲು ಉಪಯೋಗಿಸಿಕೊಳ್ಳಬೇಕಾದ ಪ್ರಮುಖ ಆಕರಗಳು ಮತ್ತು ಸಂಶೋಧನಾತ್ಮಕ ಬರಹಗಳ ಕುರಿತು ಚರ್ಚಿಸಲಾಯಿತು. ಪರಿಣಾಮವಾಗಿ ಅನೇಕರು ಇದರ ಕುರಿತು ಲೇಖನಗಳನ್ನು ಬರೆದರು. ಸಾರ್ವಜನಿಕ ಚರ್ಚೆಯೂ ಆಗತೊಡಗಿತು. (ಈ ಕಾರ್ಯಕ್ರಮವನ್ನು ನಿಲ್ಲಿಸಿದ್ದೇವೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಜಿ. ಸಿದ್ದರಾಮಯ್ಯನವರು ಅಧಿಕೃತ ಹೇಳಿಕೆ ನೀಡಿದರು).

## ವಿಶೇಷ ಉಪನ್ಯಾಸ: ಸಮಯಾತೀತ ಮಹಾತ್ಮ ಗಾಂಧಿ

ಮಹಾತ್ಮ ಗಾಂಧಿಜೀಯವರ 125ನೇ ವರ್ಷದ ಅಂಗವಾಗಿ ಅಕ್ಟೋಬರ್ 2ರಂದು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಯಿತು. ಸಾಮಾನ್ಯವಾಗಿ ಸಂಘಪರಿವಾರದ ವಿಚಾರವೆಂದರೆ ಗಾಂಧಿಯವರ ವಿಚಾರದಿಂದ ಬಹಳ ಭಿನ್ನ ಮಾತ್ರವಲ್ಲ; ವೈಚಾರಿಕವಾಗಿ ವಿರೋಧವಿದೆ ಎಂಬಂತೆ ಸಮಾಜದಲ್ಲಿ ಬಿಂಬಿತವಾಗಿದೆ. ಆದರೆ ನೈಜ ಸಂಗತಿ ಹೀಗಿಲ್ಲ. ಇದನ್ನು ಅರಿಯುವ ಸಲುವಾಗಿ ಈ ಉಪನ್ಯಾಸ ಆಯೋಜನೆಯಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಸಂಘಚಾಲಕರಾದ ಹಾಗೂ ಮಿಥಿಕ್ ಸೊಸೈಟಿಯ ಪ್ರಧಾನ ಕಾರ್ಯದರ್ಶಿಗಳಾದ ವಿ. ನಾಗರಾಜ್ ಅವರು ವಿಷಯ ಮಂಡನೆ ಮಾಡಿದರು. ಕರ್ನಾಟಕ ಪ್ರಾಂತ ಕಾರ್ಯವಾಹರಾದ ಡಾ. ಜಯಪ್ರಕಾಶ ಅವರು ಪ್ರಸ್ತಾವಿಕವಾಗಿ ಮಾತನಾಡಿದರು. ವೈಚಾರಿಕವಾಗಿ



ಅತ್ಯಂತ ಮಹತ್ವದ್ದೆನಿಸಿದ ಈ ಕಾರ್ಯಕ್ರಮಕ್ಕೆ ಮಾಧ್ಯಮಮಿತ್ರರೂ ಆಗಮಿಸಿ ಉತ್ತಮ ವರದಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದರು.

## ಕಾರ್ಯಾಗಾರ : ದಕ್ಷಿಣ ಭಾರತದ ಸಮಾಜೋ–ಸಾಂಸ್ಕೃತಿಕ ಅಧ್ಯಯನ

ಬ್ರಿಟಿಷ್ ಇತಿಹಾಸಕಾರರು ನಮ್ಮ ದೇಶದ ಪರಂಪಾನುಗತ ಚರಿತ್ರೆಯನ್ನು ಮೈಥಾಲಜಿ ಎಂದು ವರ್ಗೀಕರಿಸಿ, ಈ ದೇಶದ ಇತಿಹಾಸವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ ಬರೆಯಲಾರಂಭಿಸಿದ ಮೇಲೆ ಅದನ್ನೇ ಪ್ರಮಾಣವೆಂದು ಸ್ವಾತಂತ್ರ್ಯಪ್ರಾಪ್ತಿಯ ನಂತರವೂ ಸ್ವೀಕರಿಸಿ ಕಲಿಸುತ್ತಿರುವುದು ಈ ದೇಶದ ಜನಜೀವನ, ಸಮಾಜಜೀವನವನ್ನು ಅರಿಯುವಲ್ಲಿ ಅನೇಕ ಗೊಂದಲಕ್ಕೆ ಕಾರಣಗವಾಗಿದೆ. ಈ ಹಿನ್ನೆಲೆಯಲ್ಲಿ ಫಸ್ಟ್ ವತಿಯಿಂದ ದಕ್ಷಿಣ ಭಾರತದ ಸಮಾಜೋ–ಸಾಂಸ್ಕೃತಿಕ ಅಧ್ಯಯನ ('Socio-cultural issues in South India') ಎಂಬ ಒಂದು ದಿನದ ಕಾರ್ಯಾಗಾರವನ್ನು ಅಕ್ಟೋಬರ್ 28ರಂದು ಆಯೋಜಿಸಲಾಯಿತು. ಈ ಕಾರ್ಯಾಗಾರದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಪಾಂಡಿಚೇರಿ ಮತ್ತು ಕೇರಳ ರಾಜ್ಯಗಳಿಂದ ಬಂದ ಒಟ್ಟು 45 ಜನ ವಿಷಯ ತಜ್ಞರು, ಸಂಶೋಧಕರು, ವಿವಿಧ ವೈಚಾರಿಕ ಸಂಸ್ಥೆಗಳ ಪ್ರಮುಖರುಗಳು ಭಾಗವಹಿಸಿದ್ದರು.



ಪಾಂಡಿಚೇರಿಯ EFEOನಲ್ಲಿ ರಿಸರ್ಚ್ ಫೆಲೋ ಆಗಿರುವ ಡಾ. ಎ.ಎಸ್.ಎ ಶರ್ಮ (ವಿಷಯ: Socio-cultural understanding of South India – First Millennium CE), ಕುವೆಂಪು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದ ಪ್ರೊಫೆಸರ್ ಮತ್ತು ಕಲಾ ವಿಭಾಗದ ಡೀನ್ ಆಗಿರುವ ಡಾ. ರಾಜಾರಾಂ ಹೆಗಡೆ (Socio-cultural understanding of South India – Second Millennium) ಮತ್ತು ಆರೋಹಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಎಂ.ಎಸ್. ಚೈತ್ರ (Socio-cultural understanding of South India – Colonial Period till present) ಅವರು ಆಗಮಿಸಿ ವಿಷಯ ಮಂಡನೆ ಮಾಡಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಪ್ರಚಾರ ಪ್ರಮುಖರಾದ ಅರುಣ್ ಕುಮಾರ್, ಭಾಜಪಾದ ರಾಷ್ಟ್ರೀಯ ಸಹಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್, ಪ್ರಜ್ಞಾಪ್ರವಾಹದ ಕ್ಷೇತ್ರೀಯ ಸಂಯೋಜಕ ರಘುನಂದನ್ ಮುಂತಾದ ಪ್ರಮುಖರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಫರ್ಸ್ಟ್‌ನ ನಿರ್ದೇಶಕ ಸಂತೋಷ್ ಜಿ.ಆರ್. ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.



## ಸಂಘಜೀವಿಯ ಸಾಹಿತ್ಯ ಯಾನ



ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ವನಸುಮದಂತೆ ಉಳಿದಿರುವ ಚಂದ್ರಶೇಖರ ಭಂಡಾರಿಯವರು ಇತಿಹಾಸಕಾರರಾಗಿ, ಪತ್ರಕರ್ತರಾಗಿ, ಲೇಖಕರಾಗಿ, ಅನುವಾದಕರಾಗಿ ಮತ್ತು ವೈಚಾರಿಕ ವಿಚಾರಗಳ ಪ್ರತಿಪಾದಕರಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಚಂದ್ರಶೇಖರ ಭಂಡಾರಿಯವರ ಈ ಅಪೂರ್ವ, ವಿಭಿನ್ನ ಸಾಹಿತ್ಯ ಸೇವೆ ಕುರಿತು ಬೆಳಕನ್ನು ಚೆಲ್ಲಲು ಹಾಗೂ ಅವರ ಕೃತಿಗಳ ಒಳನೋಟಗಳು, ಭಾಷಾ ಶೈಲಿ, ವಿಷಯಮಂಡನೆ, ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಊರಿದ ಹೆಜ್ಜೆಗುರುತುಗಳನ್ನು ವಿಮರ್ಶಾತ್ಮಕವಾಗಿ ನೋಡುವ ಸಲುವಾಗಿ 2019ರ ಜನವರಿ 12ರಂದು 'ಸಂಘಜೀವಿಯ ಸಾಹಿತ್ಯಯಾನ – ಶ್ರೀ ಚಂದ್ರಶೇಖರ ಭಂಡಾರಿಯವರ ಸಾಹಿತ್ಯ ಕೃತಿಗಳ ವಿಮರ್ಶೆ' ಎಂಬ ವಿಚಾರಸಂಕಿರಣವನ್ನು ಆಯೋಜಿಸಲಾಯಿತು. ಇಡೀ ದಿನ ನಡೆದ ಈ ಕಾರ್ಯಕ್ರಮದಲ್ಲಿ ಆರು ಅವಧಿಗಳಲ್ಲಿ ಚಂದ್ರುರವರ ಸಾಹಿತ್ಯದ ವಿವಿಧ ಮುಖಗಳ ಕುರಿತು ಆಳವಾಗಿ ಅಧ್ಯಯನ ಮಾಡಿದ ಸಾಹಿತಿಗಳು, ಲೇಖಕರು, ಪತ್ರಕರ್ತರು ವಿಚಾರಗಳನ್ನು ಮಂಡಿಸಿದರು.

ಸಂಜೆ ನಡೆದ ಅಭಿನಂದನ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ-ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆಯವರು ಅಭಿನಂದನ ಭಾಷಣವನ್ನು ಮಾಡಿದರು. ಖ್ಯಾತ ಚಲನಚಿತ್ರ ನಿರ್ದೇಶಕರಾದ ಟಿ.ಎಸ್. ನಾಗಾಭರಣ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭಕ್ಕಾಗಿ ನಿರ್ಮಿಸಿದ ಚಂದ್ರು ಅವರ ಜೀವನ ಮತ್ತು ಸಾಹಿತ್ಯದ ಕುರಿತಾದ ಕಿರುಚಿತ್ರ ಮತ್ತು ಭಿತ್ತಿಪತ್ರಗಳ ಪ್ರದರ್ಶನವನ್ನೂ ಆಯೋಜಿಸಲಾಯಿತು.





## ವಿಚಾರ ಸಂಕಿರಣ: ಟಿಪ್ಪು ಜಯಂತಿ – ಸಮಾಜ ವಿಭಜನೆಯ ಸಂಚು

ಕಳೆದ ಕೆಲವರ್ಷಗಳಿಂದ ರಾಜ್ಯ ಸರ್ಕಾರದ ಅಧಿಕೃತ ಕಾರ್ಯಕ್ರಮವಾಗಿ ಸರ್ಕಾರಿ ಖರ್ಚಿನಲ್ಲಿ ರಾಜ್ಯಾದ್ಯಂತ ಟಿಪ್ಪು ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಫಸ್ಟ್‌ನ ವತಿಯಿಂದ ಸಂಶೋಧನಾತ್ಮಕ ಆಕರ, ಲೇಖನಗಳನ್ನು ವಿವಿಧ ರೀತಿಯಲ್ಲಿ ಪ್ರಸ್ತುತ ಪಡಿಸುವುದರ ಮೂಲಕ ಜನಜಾಗೃತಿ ಮೂಡಲು ಕಾರಣವಾಗುತ್ತಿದೆ. ಇದರ ಮುಂದುವರಿದ ಭಾಗವಾಗಿ ಈ ವರ್ಷ ಅಕ್ಟೋಬರ್ 30ರಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಯಿತು. ಬಿಜೆಪಿಯ ರಾಷ್ಟ್ರೀಯ ವಕ್ತಾರರಾದ ಸುಧಾಂಶು ತ್ರಿವೇದಿ ಮತ್ತು ಅಂಕಣಕಾರ ಹಾಗೂ ಲೇಖಕರಾದ ರೋಹಿತ್ ಚಕ್ರತೀರ್ಥ ಅವರು ವಿಷಯಮಂಡನೆ ಮಾಡಿದರು.

## ಪುಸ್ತಕ ಬಿಡುಗಡೆ – Facets of Terrorism in India

ಭಾರತದಲ್ಲಿ ಉಗ್ರವಾದ ಹರಡುತ್ತಿರುವ ಬಗೆ, ಅದರ ಜಾಲಗಳು, ಉಗಮ, ತಂತ್ರಗಳು ಇತ್ಯಾದಿಗಳ ಕುರಿತು ಆಳವಾದ ಅಧ್ಯಯನ ಮಾಡಿರುವ ಆರ್.ಎನ್. ಕುಲಕರ್ಣಿ ಅವರು ಬರೆದಿರುವ Facets of Terrorism in India ಎಂಬ ಪುಸ್ತಕದ ಬಿಡುಗಡೆ ಕಾರ್ಯಕ್ರಮವನ್ನು ಫಸ್ಟ್‌ನ ವತಿಯಿಂದ ಮಾರ್ಚ್ 16ರಂದು ಬೆಂಗಳೂರಿನಲ್ಲಿ ಆಯೋಜಿಸಲಾಯಿತು. ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ ಮತ್ತು ವಕೀಲರಾದ ಎಂ.ಆರ್. ವೆಂಕಟೇಶ್ ಅವರು ಪುಸ್ತಕವನ್ನು ಬಿಡುಗಡೆಗೊಳಿಸಿದರು. ಆರೋಹಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಎಂ.ಎಸ್. ಚೈತ್ರ ಅವರು ಪುಸ್ತಕದ ಕುರಿತು ಮಾತನಾಡಿದರು.

## ಸಂಶೋಧನಾ ಸಹಕಾರ ಮತ್ತು ಗ್ರಂಥಾಲಯ

ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತ ಭಾಷೆಯೂ ಸೇರಿದಂತೆ ಹದಿನಾಲ್ಕು ಸಾವಿರ ಪುಸ್ತಕಗಳನ್ನು ಫೌಂಡೇಷನ್ನಿನ ಆದ್ಯತೆಯ ವಿಷಯಗಳಿಗನುಸಾರವಾಗಿ ಸಂಗ್ರಹಿಸಲಾಗಿದೆ. ಅನೇಕ ಹಿತೈಷಿಗಳು ತಮ್ಮ ಅಪೂರ್ವ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿ ನಮ್ಮ ಪುಸ್ತಕ ಸಂಗ್ರಹದ ಮೌಲ್ಯವನ್ನು ಹೆಚ್ಚಿಸಿದ್ದಾರೆ.

ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅನೇಕ ವಿಷಯಗಳ ಕುರಿತು ಪಿಎಚ್‌ಡಿಗೆ ನೋಂದಾಯಿಸಿರುವವರು, ಫಸ್ಟ್ ವತಿಯಿಂದ ನಡೆದ ಸಂಶೋಧನಾ ಕಾರ್ಯಾಗಾರಗಳಲ್ಲಿ ಬಾಗವಹಿಸಿದವರೂ ಸೇರಿದಂತೆ ಅನೇಕ ಸ್ವತಂತ್ರ ಸಂಶೋಧಕರು, ಲೇಖಕರು ಮತ್ತು ಪತ್ರಕರ್ತರುಗಳಿಗೆ ಅವರ ಅಧ್ಯಯನಕ್ಕೆ ಫಸ್ಟ್‌ನ ವತಿಯಿಂದ ಸಹಕಾರ ನೀಡಲಾಗಿದೆ ಮತ್ತು ಗ್ರಂಥಾಲಯದ ಆಕರ ಬಳಕೆಗೂ ಅವಕಾಶ ಕಲ್ಪಿಸಲಾಗಿದೆ.

# ರಾಷ್ಟ್ರೋತ್ಥಾನ ಬಳಗ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದ ಸಮಾನಮನಸ್ಕರೆಲ್ಲ ಒಂದೆಡೆ ಸೇರಿ ಸಮಗ್ರ ಸಮಾಜಪರಿವರ್ತನೆಗಾಗಿ ಶ್ರಮಿಸುವುದಕ್ಕೆ ನಿರ್ಮಾಣಗೊಂಡ ವೇದಿಕೆಯೇ ರಾಷ್ಟ್ರೋತ್ಥಾನ ಬಳಗ. ಪರಿಷತ್‌ನ ಧ್ಯೇಯ–ಧೋರಣೆಗಳನ್ನು ಆಂದೋಲನದ ರೂಪದಲ್ಲಿ ರಾಜ್ಯಾದ್ಯಂತ ಪಸರಿಸುವ ಕಾರ್ಯದಲ್ಲಿ ರಾಷ್ಟ್ರೋತ್ಥಾನ ಬಳಗಗಳು ಕಾರ್ಯನಿರತವಾಗಿವೆ. ಸದ್ಯ ರಾಷ್ಟ್ರೋತ್ಥಾನ ಬಳಗದ ಚಟುವಟಿಕೆಗಳು ಶಿವಮೊಗ್ಗ ಜಿಲ್ಲೆಯ ಕಾರಣಗಿರಿ, ಹೊಳೆಹೊನ್ನೂರು, ಸಾಗರ, ಕೋಣಂದೂರು, ರಿಪ್ಪನ್‌ಪೇಟೆ ಹಾಗೂ ಶಿವಮೊಗ್ಗ ನಗರ ಮೊದಲಾದ ಸ್ಥಳಗಳಲ್ಲಿ ಸಕ್ರಿಯವಾಗಿವೆ.

## ಕಾರಣಗಿರಿ

**ಯಕ್ಷಗಾನ:** ಸಾಮಾಜಿಕ ಜಾಗೃತಿಯ ಮಾಧ್ಯಮವಾಗಿಯೂ ಕನ್ನಡ ಭಾಷೆಯ ಬೆಳವಣಿಗೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿರುವ ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಹೊಸನಗರದ ಕಾರಣಗಿರಿಯ ರಾಷ್ಟ್ರೋತ್ಥಾನ ಬಳಗ, ಸ್ಥಳೀಯ ಇತರ ಸಂಘಟನೆಗಳ ಸಹಕಾರದಿಂದ ಹಲವು ವರ್ಷಗಳಿಂದ ವರ್ಷಕ್ಕೆ ಎರಡು ಮೂರು ಬಾರಿ ಯಕ್ಷಗಾನ ಹಾಗೂ ತಾಳಮದ್ದಳೆ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಏಪ್ರಿಲ್ 19ರಂದು ಕಾರಣಗಿರಿ ಶ್ರೀಸಿದ್ಧಿವಿನಾಯಕ ಸಭಾಭವನದಲ್ಲಿ ಶ್ರೀಸಿದ್ಧಿವಿನಾಯಕ ಯಕ್ಷಕಲಾ ಬಳಗದವರಿಂದ 'ಮಾರುತಿ ಪ್ರತಾಪ' ಎಂಬ ಯಕ್ಷಗಾನ ಪ್ರದರ್ಶನ ನಡೆಯಿತು.

**ಪುಸ್ತಕ ಬಿಡುಗಡೆ:** ರಾಷ್ಟ್ರೋತ್ಥಾನ ಬಳಗ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ಆಶ್ರಯದಲ್ಲಿ, ಸಹನಾ ವಿಜಯಕುಮಾರ್ ಅವರು ಬರೆದಿರುವ 'ಕಶೀರ' ಮತ್ತು ಚಂದ್ರಶೇಖರ ಭಂಡಾರಿ ಅವರು ಬರೆದ 'ನಿರ್ಮಾಲ್ಯ' (ನ. ಕೃಷ್ಣಪ್ಪನವರ ಕುರಿತು) ಪುಸ್ತಕದ ಬಿಡುಗಡೆ ಕಾರ್ಯಕ್ರಮ ಆಗಸ್ಟ್ 30ರಂದು ನಡೆಯಿತು. ಲೇಖಕಿ ಮೇದಿನಿ ಕೆಸವಿನಮನೆ ಅವರು ಕಶೀರ ಪುಸ್ತಕವನ್ನು ಹಾಗೂ ಡಾ॥ ಹಾದಿಗಲ್ಲು ಲಕ್ಷ್ಮೀನಾರಾಯಣ ಭಟ್ ಅವರು ನಿರ್ಮಾಲ್ಯ ಪುಸ್ತಕವನ್ನು ಪರಿಚಯಿಸಿದರು. ಡಾ॥ ಗಣಪತಿ ಭಟ್ ಕವಲಕ್ಕಿ ಅವರು ಅಧ್ಯಕ್ಷತೆ ವಹಿಸಿದರು.





**ಯೋಗ ತರಬೇತಿ ಶಿಬಿರ:** ಅಕ್ಟೋಬರ್ 2 ರಿಂದ 10ರ ತನಕ ಕಾರಣಗಿರಿಯ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಯೋಗ ತರಬೇತಿ ಶಿಬಿರವನ್ನು ಆಯೋಜಿಸಲಾಯಿತು. ಸ್ಥಳೀಯ ನಾಗರಕೊಡಿಗೆಯ ವೈದ್ಯರಾದ ಗೀತಾ ಅವರು ಶಿಬಿರಕ್ಕೆ ಚಾಲನೆ ನೀಡಿದರು.

**ಸಾಮೂಹಿಕ ಸತ್ಯನಾರಾಯಣ ಪೂಜೆ:** ಕಾರಣಗಿರಿಯ ಶ್ರೀಸಿದ್ಧಿವಿನಾಯಕಸ್ವಾಮಿಯ ಸನ್ನಿಧಿಯಲ್ಲಿ ಬಳಗದ ವತಿಯಿಂದ 26ನೇ ವರ್ಷದ ಸಹಸ್ರಾಧಿಕ ಸಾಮೂಹಿಕ ಸತ್ಯನಾರಾಯಣ ಪೂಜೆಯು 2019 ಫೆ. 24 ಮತ್ತು 25ರಂದು ನಡೆಯಿತು.

- **ಧರ್ಮಜಾಗರಣ ಸಭೆ:** ಸಮಾಜದಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಸಲುವಾಗಿ ನಡೆದ ಧರ್ಮಜಾಗರಣ ಸಭೆಯಲ್ಲಿ ಮೂಲೆಗದ್ದೆ ಶಿವಾಯೋಗಾಶ್ರಮದ ಶ್ರೀ ಮ। ನಿ। ಪ್ರ। ಚನ್ನಬಸವ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ವಿಶ್ವ ಹಿಂದು ಪರಿಷತ್ತಿನ ಶಿವಮೊಗ್ಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ॥ ದಿಲೀಪ್ ಕುಮಾರ್ ಪಾಂಡೆ, ಶಿಮೂಲ್ ಅಧ್ಯಕ್ಷ ಎಚ್. ಎನ್. ವಿದ್ಯಾಧರ ಅವರು ಮಾರ್ಗದರ್ಶನ ಭಾಷಣ ಮಾಡಿದರು.
- **ಸಂಮಾನ:** ನಾಟಿವೈದ್ಯ ಕೊಡಸೆ ಕೊಲ್ಲನಾಯ್ಕರು ಹಾಗೂ ಗ್ರಾಮೀಣ ಪ್ರಸೂತಿ ತಜ್ಞೆ ಲಕ್ಷ್ಮೀ ದೇವಮ್ಮ ಬಾಗಿಮನೆ ಅವರನ್ನು ಸಂಮಾನಿಸಲಾಯಿತು. 5–6 ಸಾವಿರ ಜನರು ಭಾಗವಹಿಸಿ ಸಹಭೋಜನ ಮಾಡಿದರು.
- **ಸಾಹಿತ್ಯ–ಸಂಸ್ಕೃತಿ ಉತ್ಸವ:** ಜನಸಾಮಾನ್ಯರಲ್ಲಿ ಸಾಹಿತ್ಯ ಜಾಗೃತಿ ಮೂಡಿಸುವ ಸಲುವಾಗಿ ನಡೆದ ಸಾಹಿತ್ಯ–ಸಂಸ್ಕೃತಿ ಉತ್ಸವವನ್ನು ಹಿರಿಯ ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ ಅವರು ಉದ್ಘಾಟಿಸಿದರು. ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ಟ ಅವರು

ಸ್ವಯಂಪ್ರಕಾಶ ಸ್ವಾಮಿಜೀ ಅವರ ಆತ್ಮಚರಿತ್ರೆ 'ಉದ್ಗೀತ ಮಹಾಕಂಪನ' ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು. ನಾಗರಕೊಡಿಗೆ ಜಿ.ಎನ್. ಬಸಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಕವಿಪರಮದೇವನ ತುರಂಗ ಭಾರತದ ಕುರಿತು ನಡೆದ ಸಾಹಿತ್ಯ ಗೋಷ್ಠಿಯಲ್ಲಿ ಉಪನ್ಯಾಸಕಿ ವಸುಧಾ ಚೈತನ್ಯ, ಸಾಹಿತಿ ಡಾ॥ ಶಾಂತಾರಾಮ ಪ್ರಭು, ಕಲಾದರ್ಶನ ಮಾಸಪತ್ರಿಕೆಯ ಪ್ರಧಾನ ಸಂಪಾದಕ ಡಾ॥ ಹಾದಿಗಲ್ಲು ಲಕ್ಷ್ಮೀನಾರಾಯಣ ಮಾತನಾಡಿದರು. ಕವಿ, ಉದ್ಯಮಿ ಸುಧಾಕಿರಣ ಅಧಿಕಶ್ರೇಣಿ ಅಧ್ಯಕ್ಷತೆ ವಹಿಸಿದ್ದರು.

- ಸಾಹಿತ್ಯ ಸಂಸ್ಕೃತಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ಉತ್ಥಾನ ಮಾಸಪತ್ರಿಕೆ ಸಂಪಾದಕ ಕಾಕುಂಜೆ ಕೇಶವ ಭಟ್ಟ ಅವರು ಸಮಾರೋಪ ಭಾಷಣ ಮಾಡಿದರು. ಶಿವಮೊಗ್ಗ ರಾಷ್ಟ್ರೋತ್ಥಾನ ಬಳಗದ ಅಧ್ಯಕ್ಷ ಡಾ॥ ಸುಧೀಂದ್ರ ಅಧ್ಯಕ್ಷತೆ ವಹಿಸಿದರು. ಗಾಯಕ ಸುರೇಶ್‌ಕುಮಾರ್ ಹೊಸನಗರ ಹಾಗೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ರವಿ ಬಿದನೂರು ಅವರನ್ನು ಸಂಮಾನಿಸಲಾಯಿತು.
- ಕಾರಣಗಿರಿಯ ಕಲಾಭಾರತಿ ನೃತ್ಯ ಶಾಲೆಯವರಿಂದ ಭರತನಾಟ್ಯ ಪ್ರದರ್ಶನ ನಡೆಯಿತು. ಶಿವಮೊಗ್ಗದ ಶಾರದಾ ಸಂಗೀತ ಮಹಾವಿದ್ಯಾಲಯ ತಂಡದವರಿಂದ ಕನ್ನಡ ನಾಡು-ನುಡಿ ಕುರಿತಾದ 'ಗೀತ-ನೃತ್ಯ' ಕಾರ್ಯಕ್ರಮ ನಡೆಯಿತು.
- ಎರಡು ದಿನಗಳ ಕಾಲ ಕನ್ನಡದ ಅಳಿದ-ಉಳಿದ ವೃತ್ತ ಪತ್ರಿಕೆಗಳ ಹಾಗೂ ನಾಣ್ಯಗಳ ಪ್ರದರ್ಶನ ನಡೆಯಿತು.

## ಶಿವಮೊಗ್ಗ

72ನೇ ಸ್ವಾತಂತ್ರೋತ್ಸವದ ಅಂಗವಾಗಿ ಶಿವಮೊಗ್ಗದ ರಾಷ್ಟ್ರೋತ್ಥಾನ ಬಳಗದ ವತಿಯಿಂದ 'ಸ್ವತಂತ್ರ ಟಿಬೆಟ್ – ಸುರಕ್ಷಿತ ಭಾರತ' ಎಂಬ ವಿಷಯದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಗಸ್ಟ್ 14ರಂದು ನಡೆಯಿತು. ನವದೆಹಲಿಯ Core group for Tibet causeನ ನ್ಯಾಷನಲ್ ಅಸಿಸ್ಟೆಂಟ್ coordinatorರಾದ ಅಮೃತ್ ಜೋಷಿ ಅವರು ಆಗಮಿಸಿ ಉಪನ್ಯಾಸ ನೀಡಿದರು. ಶಿವಮೊಗ್ಗ ಟೈಮ್ಸ್ ದಿನಪತ್ರಿಕೆಯ ಸಂಪಾದಕರಾದ ಚಂದ್ರಕಾಂತ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದರು. ರಾಷ್ಟ್ರೋತ್ಥಾನ ಬಳಗದ ಅಧ್ಯಕ್ಷರಾದ ಡಾ. ಸುದೀಂದ್ರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.



## ಕೋಣಂದೂರು

**ಕನ್ನಡ ರಾಜ್ಯೋತ್ಸವ:** ನವೆಂಬರ್ 30ರಂದು ಕೋಣಂದೂರು ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು. ಜಾನಪದ ತಜ್ಞ ಹಾಗೂ ಹಿರಿಯ ರಂಗಕರ್ಮಿ ದೇವೇಂದ್ರ ಬೆಳೆಯೂರು ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ನುಡಿನಮನ ಸಲ್ಲಿಸಿದರು. ಪ್ರಾಚ್ಯವಸ್ತು ಶೋಧಕರಾದ ತೀರ್ಥಹಳ್ಳಿ ಜಿ. ಸತ್ಯನಾರಾಯಣ ಹಾಗೂ ಎಸ್.ಎಲ್. ರಾಘವೇಂದ್ರ ಅವರನ್ನು ಸಂಮಾನಿಸಲಾಯಿತು. ಉತ್ಥಾನ ಮಾಸಪತ್ರಿಕೆಯ ಸಂಪಾದಕ ಕಾ. ಕೇಶವ ಭಟ್ಟ, ಹಾದಿಗಲ್ಲು ಲಕ್ಷ್ಮೀನಾರಾಯಣ ಭಟ್ಟ ಅವರು ಉಪಸ್ಥಿತರಿದ್ದರು. ರಾಜ್ಯೋತ್ಸವ ಪ್ರಯುಕ್ತ ಸ್ಥಳೀಯ ಕೋಣಂದೂರಿನ ರಾಷ್ಟ್ರೀಯ ಪದವಿಪೂರ್ವ ಕಾಲೇಜು ಹಾಗೂ ಗರ್ತಿಕೆರೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸಾಹಿತ್ಯ ಪುಸ್ತಕಗಳನ್ನು ಉಚಿತವಾಗಿ ವಿತರಿಸಲಾಯಿತು.

## ಹೊಳೆಹೊನ್ನೂರು

**ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ:** ಸಮಾಜದಲ್ಲಿ ಸಾಮರಸ್ಯ ಹಾಗೂ ಏಕತೆ ಮೂಡಿಸುವ ಉದ್ದೇಶದಿಂದ ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಸೆಪ್ಟೆಂಬರ್ 28ರಂದು ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ 23ನೇ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಹಾಗೂ ಧರ್ಮಜಾಗರಣ ಸಭೆ ನಡೆಯಿತು. 1000ಕ್ಕೂ ಹೆಚ್ಚು ಜನರಿಂದ ವೈಯಕ್ತಿಕ ಪೂಜೆ ನಡೆಯಿತು. 2500ಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಕೇಂದ್ರ ಕಾರ್ಯಾಲಯ

**ಪರಿಷತ್ತಿನ ಕೇಂದ್ರ ಕಾರ್ಯಾಲಯದ ಉದ್ಯೋಗಿ ಕಾರ್ಯಕರ್ತರ ವೈಯಕ್ತಿಕ ಬೆಳವಣಿಗೆಗಾಗಿ ಹಾಗೂ ಅವರಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವ ಬಗ್ಗೆ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.**

**ಮಾಸಿಕ ಉಪನ್ಯಾಸ ಕಾರ್ಯಕ್ರಮ:** ಕಾರ್ಯಕರ್ತರಲ್ಲಿ ಸಾಮಾಜಿಕ ಹಾಗೂ ವೈಯಕ್ತಿಕ ಜಾಗೃತಿಗಾಗಿ ಪ್ರತಿ ತಿಂಗಳ ಎರಡನೆ ಶನಿವಾರ ಮಾಸಿಕ ಬೌದ್ಧಿಕ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಕಳೆದ 6 ವರ್ಷಗಳಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಬೆಳಗಿನ ಪ್ರಾರ್ಥನೆಯ ನಂತರ 45 ನಿಮಿಷಗಳ ಕಾಲ ಪ್ರಚಲಿತ ವಿಚಾರ, ಆರೋಗ್ಯ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಗಣ್ಯರು, ಹಿರಿಯರು ಹಾಗೂ ವಿಷಯ ತಜ್ಞರು ಆಗಮಿಸಿ ಮಾರ್ಗದರ್ಶನ ಮಾಡುತ್ತಿದ್ದಾರೆ

ಈ ಕಾರ್ಯಕ್ರಮಗಳಿಂದ ಉದ್ಯೋಗಿಗಳಲ್ಲಿ ರಾಷ್ಟ್ರದ ನೆಲ, ಜಲ, ಸಂಸ್ಕೃತಿಯ ಬಗೆಗೆ ಅರಿವು, ಅಭಿಮಾನ, ನಾವು ಆ ವಾರಸಿಕೆಗೆ ಸೇರಿದವರೆಂಬ ಹೆಮ್ಮೆ ಮತ್ತು ಈ ಪರಂಪರೆಯನ್ನು ಉಳಿಸುವ ಗುರುತರ ಹೊಣೆಗಾರಿಕೆಯೂ ನಮ್ಮ ಮೇಲಿದೆ ಎಂಬ ಮನೋಭಾವ ಮೂಡಿಸುವಲ್ಲಿ ಸಫಲವಾಗಿದೆ.

ಉದ್ಯೋಗಿಗಳ ಗುಣವಿಕಾಸದ ದೃಷ್ಟಿಯಿಂದ ರಕ್ಷಾಬಂಧನ, ಗುರುಪೂರ್ಣಿಮೆ, ಶಿವರಾತ್ರಿ, ರಾಮನವಮಿ, ಚೌತಿ ಮುಂತಾದ ಹಬ್ಬಗಳನ್ನು ಹಾಗೂ ಸ್ವಾತಂತ್ರ್ಯೋತ್ಸವ–ಗಣರಾಜ್ಯೋತ್ಸವಗಳನ್ನು ಆಚರಿಸಲಾಗುತ್ತಿದೆ.

## ವೆಬ್‌ಸೈಟ್‌ಗೆ ಚಾಲನೆ

ರಾಷ್ಟ್ರೋತ್ಥಾನ ಪರಿಷತ್ತಿನ ವೆಬ್‌ಸೈಟ್ https://rashtrotthana.org ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕರಾದ (ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ) ವಿ. ನಾಗರಾಜ್ ಅವರು ಚಾಲನೆ ನೀಡಿದರು. ಅಖಿಲ ಭಾರತೀಯ ಸಹ ಸರಕಾರ್ಯವಾಹರಾದ ಮುಕುಂದ ಸಿ.ಆರ್. ಹಾಗೂ ಕರ್ನಾಟಕ ದಕ್ಷಿಣ ಮತ್ತು ಉತ್ತರ ಪ್ರಾಂತಗಳ ಸಂಘದ ಹಿರಿಯರು ಉಪಸ್ಥಿತರಿದ್ದರು. ರಾಷ್ಟ್ರೋತ್ಥಾನ ಪರಿಷತ್ತಿನ ಎಲ್ಲ ಚಟುವಟಿಕೆಗಳ ಮಾಹಿತಿಯನ್ನು ಇಲ್ಲಿ ಪಡೆಯಬಹುದು.







**ನಂದಗೋಕುಲದ ಮಕ್ಕಳೊಂದಿಗೆ ದೀಪಾವಳಿ:** ಪರಿಷತ್‌ನ ಕೇಂದ್ರ ಕಚೇರಿಯಲ್ಲಿ ದೀಪಾವಳಿ ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. 'ನಂದಗೋಕುಲ'ದ ಮಕ್ಕಳನ್ನು ಪರಿಷತ್ತಿನ ಕೇಂದ್ರ ಕಚೇರಿಗೆ ಕರೆಸಿಕೊಂಡು ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಮಕ್ಕಳಿಗೆ ಎಣ್ಣೆಹಚ್ಚಿ ದೀಪಾವಳಿ ಹಬ್ಬದ ಶುಭಾಶಯ ಕೋರಿದರು. ಎಲ್ಲ ಮಕ್ಕಳಿಗೆ ಹಬ್ಬದ ಪ್ರಯುಕ್ತ ಹೊಸ ಬಟ್ಟೆ, ಬ್ಯಾಗ್‌ಗಳನ್ನು ನೀಡಿ ಶುಭ ಹಾರೈಸಿದರು.

**ಕಾರ್ಯಕರ್ತರ ಅಭ್ಯಾಸ ವರ್ಗ:** ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯಕರ್ತರ ಬೆಳವಣಿಗೆಗಾಗಿ ಪ್ರತೀ ಮೂರು ತಿಂಗಳಿಗೊಮ್ಮೆ ಅಂದರೆ ವರ್ಷಕ್ಕೆ 4 ಬಾರಿ ಈ ಕಾರ್ಯಕ್ರಮ ನಡೆಯಿತು. ವಿವಿಧ ವಿಷಯಗಳ ಕುರಿತು ಮಾರ್ಗದರ್ಶನ ಹಾಗೂ ಚರ್ಚೆ ಕಾರ್ಯಕ್ರಮ ನಡೆಯಿತು.

**ಕಾರ್ಯಚಟುವಟಿಕೆಗಳ ಅವಲೋಕನ:** ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯ ಚಟುವಟಿಕೆಗಳ ಅವಲೋಕನ ಕಾರ್ಯಕ್ರಮ ಸೆಪ್ಟೆಂಬರ್ 25ರಂದು ನಡೆಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ, ಕರ್ನಾಟಕ ದಕ್ಷಿಣ ಮತ್ತು ಉತ್ತರ ಪ್ರಾಂತದ ಪ್ರಮುಖರು ಅವಲೋಕನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಗ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖರಾಗಿದ್ದ ಮುಕುಂದ್ ಸಿ.ಆರ್. ಅವರು ಆಗಮಿಸಿ ಪರಿಷತ್‌ನ ಚಟುವಟಿಕೆಗಳ ಅವಲೋಕನ ಹಾಗೂ ಮುಂದಿನ ಕಾರ್ಯಯೋಜನೆಗಳ ಬಗೆಗೆ ಮಾರ್ಗದರ್ಶನ ಮಾಡಿದರು. ಪರಿಷತ್ತಿನ ವಿವಿಧ ಪ್ರಕಲ್ಪಗಳ ಪ್ರಮುಖರು ತಮ್ಮ ಪ್ರಕಲ್ಪದ ವರದಿ ಹಾಗೂ ಕಾರ್ಯವಿಸ್ತಾರವನ್ನು ಹಂಚಿಕೊಂಡರು.

# ರಾಷ್ಟ್ರೋತ್ಥಾನ ವಾರ್ತಾ

- ಪರಿಷತ್‌ನ ಎಲ್ಲ ಪ್ರಕಲ್ಪಗಳು ಒಂದು ತಿಂಗಳಲ್ಲಿ ನಡೆಸಿದ ಚಟುವಟಿಕೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.
- ಅನೇಕ ಮಾಹಿತಿಪೂರ್ಣ–ಸಂಶೋಧನಾತ್ಮಕ ಭಾಷಣಗಳನ್ನು ಯಥಾವತ್ ಲಿಪಿರೂಪಕ್ಕಿಳಿಸಿ ಪ್ರಕಟಿಸಲಾಗಿದೆ. ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದನ್ನು ರೆಫರೆನ್ಸ್ ಆಗಿ ಬಳಸಿದ ಉದಾಹರಣೆಗಳೂ ಇವೆ.
- ಕಳೆದ 4 ವರ್ಷಗಳಿಂದ ಬಹುವರ್ಣಗಳಲ್ಲಿ ಮುದ್ರಣವಾಗುತ್ತಿದೆ.
- ಇಂದು ನಾಡಿನ ಗಣ್ಯ ಸಾಹಿತಿಗಳು, ಲೇಖಕರೆನಿಸಿರುವ ಅನೇಕ ಹಿರಿಯರು ಈ ಪತ್ರಿಕೆಯ ಸಂಪಾದಕರಾಗಿದ್ದ ಹೆಮ್ಮೆ ಇದೆ.
- ಕೇವಲ ಕಾರ್ಯಕ್ರಮಗಳ ವರದಿಗಷ್ಟೇ ಸೀಮಿತವಾಗದೆ ಓದುಗರು ಮತ್ತು ಪತ್ರಿಕೆಗೆ ಸಂಬಂಧ ಕಲ್ಪಿಸುವ ಪ್ರಯೋಗಗಳನ್ನು (ಉದಾ: 'ನನ್ನ ದೇಶ: ನನಗೆಷ್ಟು ಗೊತ್ತು' ಮುಂತಾದವು) ನಡೆಸಲಾಗುತ್ತಿದೆ.
- ಪರಿಷತ್ ನಡೆಸುತ್ತಿರುವ ಚಟುವಟಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸಮಾನಮನಸ್ಕರೊಂದಿಗೆ ಹಂಚಿಕೊಳ್ಳುವ ಸಲುವಾಗಿ 'ವಾಟ್ಸಾಪ್', ಫೇಸ್‌ಬುಕ್‌ಗಳಲ್ಲಿ ಕಾರ್ಯಾರಂಭಿಸಲಾಗಿದೆ. ಈ ಮೂಲಕ ವರದಿಯನ್ನು ಇನ್ನಷ್ಟು ಸದೃಢಗೊಳಿಸುವ ಪ್ರಯತ್ನ ನಡೆಯುತ್ತಿದೆ.

ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯಚಟುವಟಿಕೆಯ ಮೇಲೆ ಬೆಳಕು ಚೆಲ್ಲುವ ಹಾಗೂ ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳುವ ಮಾಧ್ಯಮವಾಗಿ ರಾಷ್ಟ್ರೋತ್ಥಾನ ವಾರ್ತಾ ತ್ರೈಮಾಸಿಕ ಪತ್ರಿಕೆಯಾಗಿ 1971ರಲ್ಲಿ ಪ್ರಾರಂಭವಾಯಿತು. ಇದೀಗ ಪರಿಷತ್‌ನ ಕಾರ್ಯಚಟುವಟಿಕೆಗಳು ವಿವಿಧ ಕ್ಷೇತ್ರಗಳಿಗೆ ವಿಸ್ತರಿಸಿದ್ದು, ಎಲ್ಲ ಪ್ರಕಲ್ಪಗಳೂ ತಮ್ಮದೇ ಆದ ಮಹತ್ತ್ವಪೂರ್ಣ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಈ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನದ ಪರಿವಾರದವರೊಂದಿಗೆ ಹಂಚಿಕೊಳ್ಳುವ ರಾಷ್ಟ್ರೋತ್ಥಾನ ಪರಿಷತ್‌ನ ಪರಿವಾರ ಪತ್ರಿಕೆಯಾಗಿ 'ರಾಷ್ಟ್ರೋತ್ಥಾನ ವಾರ್ತಾ' ಪ್ರತಿ ತಿಂಗಳು (ಮಾಸಿಕ ಪತ್ರಿಕೆಯಾಗಿ) ಹೊರಬರುತ್ತಿದೆ.










# ನಮ್ಮ ವೆಬ್‌ಸೈಟ್‌ಗಳು

**ರಾಷ್ಟ್ರೋತ್ಥಾನ ಪರಿಷತ್** ನಡೆಸುವ ಎಲ್ಲ ಪ್ರಕಲ್ಪಗಳ ಕುರಿತು ಇಲ್ಲಿ ಮಾಹಿತಿಯನ್ನು ಪಡೆಯಬಹುದು.
www.rashtrotthana.org



**ರಕ್ತಕೇಂದ್ರದ** ಮಾಹಿತಿಗಾಗಿ ಕುರಿತು ಇಲ್ಲಿ ಮಾಹಿತಿಯನ್ನು ಪಡೆಯಬಹುದು
www.bloodcentre.rashtrotthana.org




**ಸಂರಕ್ಷಾ** ತಲಸ್ಸೇಮಿಯಾ ಆರೈಕೆ ಕೇಂದ್ರದ ಕುರಿತು ಇಲ್ಲಿ ಮಾಹಿತಿಯನ್ನು ಪಡೆಯಬಹುದು
www.samraksha.rashtrotthana.org




ಸದಭಿರುಚಿಯ ಮಾಸಪತ್ರಿಕೆ **ಉತ್ಥಾನ** ಹಾಗೂ ಶ್ರೇಷ್ಠ ಸಾಹಿತಿಗಳ ಲೇಖನಗಳನ್ನು ಇಲ್ಲಿ ಓದಬಹುದು
www.utthana.in



**ತಪಸ್**: ಉಚಿತ ಪಿಯುಸಿ ಹಾಗೂ ಐಐಟಿ ತರಬೇತಿ ನೀಡುವ ತಪಸ್ ಯೋಜನೆಯ ಕುರಿತು ಮಾಹಿತಿಯನ್ನು ಇಲ್ಲಿ ಪಡೆಯಬಹುದು
www.tapasedu.org




**ಸಾಧನಾ** ವಿದ್ಯಾರ್ಥಿನಿಯರಿಗೆ ಉಚಿತ ಪಿಯುಸಿ ಹಾಗೂ ಪ್ರತಿಷ್ಠಿತ ಶಿಕ್ಷಣಕ್ಕೆ ಅಗತ್ಯ ತರಬೇತಿ ನೀಡುವ ಸಾಧನಾ ಯೋಜನೆಯ ಕುರಿತು ಮಾಹಿತಿಯನ್ನು ಇಲ್ಲಿ ಪಡೆಯಬಹುದು
www.rpsaadhana.org



**ರಾಷ್ಟ್ರೋತ್ಥಾನದ ಸಾಹಿತ್ಯ** ಪ್ರಕಟಣೆಗಳ ಕುರಿತು ಮಾಹಿತಿಯನ್ನು ಇಲ್ಲಿ ಪಡೆಯಬಹುದು
www.sahityabooks.com



## ರಾಷ್ಟ್ರೋತ್ಥಾನ ಪರಿಷತ್ತಿನ ಸಿಬಿಎಸ್‌ಇ ಶಾಲೆಗಳು

ಬನಶಂಕರಿ: www.rvkcbse.in/web/rvkb
ಥಣಿಸಂದ್ರ: www.rvkcbse.in/web/rvka
ಹಗರಿಬೊಮ್ಮನಹಳ್ಳಿ: www.rvkcbse.in/web/rvkhbh
ದಾವಣಗೆರೆ: www.rvkcbse.in/web/rvkd
ಧಾರವಾಡ: www.rvkd.org
ರಾಮಮೂರ್ತಿನಗರ: www.rvkcbse.in/web/rvkr

## ರಾಜ್ಯ ಪಠ್ಯಕ್ರಮ ಶಾಲೆಗಳು

ಹೊಳೆಹೊನ್ನೂರು: www.holehonnuru.rvdyl.org
ಕಲ್ಯಾಣನಗರ: www.jaigopalgarodia.rvdyl.org
ಶ್ರೀ ಸಾಂದೀಪಿನಿ ವಿದ್ಯಾಲಯ, ಶ್ರೀರಾಂಪುರ: www.sandeepana.rvdyl.org
ಪತ್ತಿ ಆದಿನಾರಾಯಣಯ್ಯ ರಾಮಲಕ್ಷ್ಮಮ್ಮ ವಿದ್ಯಾಸಂಸ್ಥೆ, ಮುಂಗಾನಹಳ್ಳಿ:
www.munganahalli.rvdyl.org

# ಚಟುವಟಿಕೆಗಳು

ರಾಷ್ಟ್ರೋತ್ಥಾನ ಪರಿಷತ್ ನೋಂದಣಿಗೊಂಡ ಸಾಮಾಜಿಕ ಸೇವಾ ಸಂಸ್ಥೆಯಾಗಿದ್ದು, ಜನಶಿಕ್ಷಣ, ಜನಸೇವೆ ಹಾಗೂ ಜನಜಾಗೃತಿ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ. ರಾಜ್ಯಾದ್ಯಂತ ಇರುವ ನಮ್ಮ ಪ್ರಕಲ್ಪಗಳು ಹಾಗೂ ಚಟುವಟಿಕೆಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಪಾಠದ ಕೇಂದ್ರಗಳು
- ಹೊಲಿಗೆ ತರಬೇತಿ
- ಬಾಲಗೋಕುಲ
- ಸಂಸ್ಕಾರ ಕೇಂದ್ರ
- ಭಜನಾಕೇಂದ್ರ
- ನಂದಗೋಕುಲ
- ಚಿಕಿತ್ಸಾಲಯಗಳು
- ರಕ್ತನಿಧಿ
- ರೋಗಪರೀಕ್ಷಣಾ ಕೇಂದ್ರ
- 'ಸಂರಕ್ಷಾ' ತಲಸ್ಸೀಮಿಯಾ ಮಕ್ಕಳ ಆರೈಕೆ ಕೇಂದ್ರ
- ಹೋಮಿಯೋಪತಿ ಚಿಕಿತ್ಸಾಲಯ
- ಆಯುರ್ವೇದ ಚಿಕಿತ್ಸಾಲಯ
- ಅಂಗಮರ್ದನ
- ಅಗ್ನಿವೇಶ ಆಯುರ್ವೇದ ಅನುಷ್ಠಾನ
- ಯೋಗ ತರಬೇತಿ/ಚಿಕಿತ್ಸೆ
- ಫಿಟ್ನೆಸ್ ಸೆಂಟರ್
- ಸಂಗೀತ–ನೃತ್ಯ ಕೇಂದ್ರ
- ಕರಾಟೆ
- ಗ್ರಂಥಾಲಯ
- ವಾಚನಾಲಯ
- ಪ್ರೌಢಶಾಲೆಗಳು
- ಕಿರಿಯ, ಹಿರಿಯ ಪ್ರಾಥಮಿಕ ಶಾಲೆ
- ಪದವಿಪೂರ್ವ ಕಾಲೇಜು
- ಸಿಬಿಎಸ್ಇ ಶಾಲೆಗಳು
- ತಪಸ್
- ಸಾಧನಾ
- ಸಂವಿತ್
- ಗೋಶಾಲೆ
- ಪುಸ್ತಕ ಪ್ರಕಟಣೆ
- ಮಾಸಪತ್ರಿಕೆ
- ಕ್ಯಾಸೆಟ್, ಸಿ.ಡಿ. ಉತ್ಪಾದನೆ
- ಮುದ್ರಣ




1. ಕಲಬುರಗಿ
2. ಬಾಗಲಕೋಟೆ
3. ಧಾರವಾಡ
4. ಬಳ್ಳಾರಿ
5. ದಾವಣಗೆರೆ
6. ಶಿವಮೊಗ್ಗ
7. ಚಿತ್ರದುರ್ಗ
8. ಚಿಕ್ಕಮಗಳೂರು
9. ಚಿಕ್ಕಬಳ್ಳಾಪುರ
10. ಕೋಲಾರ
11. ಬೆಂಗಳೂರು
12. ರಾಮನಗರ

# ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - ೫೬೦ ೦೧೯

E-mail: rashtrotthana@gmail.com Website: www.rashtrotthana.org



## ಆಡಳಿತ ಮಂಡಳಿ

ಅಧ್ಯಕ್ಷರು
**ಶ್ರೀ ಎಸ್.ಆರ್. ರಾಮಸ್ವಾಮಿ**
ಸಾಹಿತಿಗಳು

ಉಪಾಧ್ಯಕ್ಷರು
**ಶ್ರೀ ಎ. ಗೋಪಾಲಕೃಷ್ಣ ನಾಯಕ್**
ನಿವೃತ್ತ ಅಧಿಕಾರಿ, ಐಟಿಐ

ಪ್ರಧಾನ ಕಾರ್ಯದರ್ಶಿ
**ಶ್ರೀ ನಾ. ದಿನೇಶ್ ಹೆಗ್ಡೆ**
ಸಾಮಾಜಿಕ ಕಾರ್ಯಕರ್ತರು

ಖಜಾಂಚಿ
**ಶ್ರೀ ಗಣಪತಿ ಹೆಗಡೆ**
ಸಾರಿಗೆ ವ್ಯವಹಾರಸ್ಥರು

ಸದಸ್ಯರು

**ಶ್ರೀ ಕೆ.ಎಸ್. ನಾರಾಯಣ**, ಸಾಮಾಜಿಕ ಕಾರ್ಯಕರ್ತರು
**ಶ್ರೀ ಅಶೋಕ್ ಸೋನಕರ್**, ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸಸ್ (ನಿ)
**ಶ್ರೀ ಎ.ಆರ್. ದ್ವಾರಕಾನಾಥ್**, ವ್ಯವಸ್ಥಾಪಕರು (ನಿ), ಬಿಹೆಚ್‌ಇಎಲ್
**ಶ್ರೀ ಬಿ.ಎಸ್. ರವಿಕುಮಾರ್**, ಸಾಮಾಜಿಕ ಕಾರ್ಯಕರ್ತರು
**ಶ್ರೀಮತಿ ಮಾಲಿನಿ ಭಾಸ್ಕರ್**, ಸಾಮಾಜಿಕ ಕಾರ್ಯಕರ್ತರು